ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 30 ಬುಧವಾರ 2022

ಸಂಪುಟ: 43 | ಸಂಚಿಕೆ: 340 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಏಪ್ರಿಲ್ 1ಕ್ಕೆ ಮಧ್ಯಾಹ್ನ 1.15ರಿಂದ 1.45ರವರೆಗೆ ಬೆಂಗಳೂರು ತಾಜ್ ವೆಸ್ಟ್‌ಎಂಡ್‌ನಲ್ಲಿ ಅಮಿತ್ ಷಾ-ಯಡಿಯೂರಪ್ಪ ರಹಸ್ಯ ಮಾತುಕತೆ

- ಬಿ.ಎಸ್.ಯಡಿಯೂರಪ್ಪರಿಲ್ಲದೆ ಚುನಾವಣೆಗೆ ಹೋದರೆ ಸಾಧನೆ ಅಸಾಧ್ಯವೆಂಬ ಸಂಗತಿ ಮನವರಿಕೆ
- ಮಾಜಿ ಮುಖ್ಯಮಂತ್ರಿ ಮನವೊಲಿಕೆ ಜೊತೆಗೆ ಅವಧಿಗೂ ಮುನ್ನ ಚುನಾವಣೆ ಸಾಧ್ಯತೆ ಬಗ್ಗೆ ಚರ್ಚೆ

ಬೆಂಗಳೂರು, ಮಾ.29(ಕೆಎಂಶಿ)– ರಾಜ್ಯ ವಿಧಾನ ಸಭಾ ಚುನಾವಣೆ ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಷಾ, ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜೊತೆ ರಹಸ್ಯ ಚರ್ಚೆ ನಡೆಸಲಿದ್ದಾರೆ.

ಅಮಿತ್ ಷಾ ಅವರು ಮಾರ್ಚ್ 31ರಿಂದ ಎರಡು ದಿನಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ಈ ಸಂದರ್ಭದಲ್ಲಿ ಯಡಿಯೂರಪ್ಪ ಅವರೊಂದಿಗೆ ಮುಖಾಮುಖಿ ಚರ್ಚೆ ಮಾಡಲಿದ್ದಾರೆ. ಏ.1ರಂದು ನಗರದ ತಾಜ್ ವೆಸ್ಟ್‌ಎಂಡ್‌ನಲ್ಲಿ ರಾಜ್ಯ ಬಿಜೆಪಿ ಕೋರ್ ಕಮಿಟಿ ಸದಸ್ಯರ ಜೊತೆ ಚುನಾವಣಾ ಸಂಬಂಧ ಷಾ ಚರ್ಚೆ ಮಾಡಲಿದ್ದಾರೆ.

ಇದಾದ ನಂತರ ಅಲ್ಲಿಯೇ ಮಧ್ಯಾಹ್ನ 1–15ರಿಂದ 1–45 ರವರೆಗೂ ಯಡಿಯೂರಪ್ಪ ಅವರ ಜೊತೆ ಚರ್ಚೆ ಮಾಡಲು 30 ನಿಮಿಷಗಳ ಸಮಯವನ್ನು ಪ್ರತ್ಯೇಕವಾಗಿ ನಿಗದಿಪಡಿಸಿದ್ದಾರೆ. ಯಡಿಯೂರಪ್ಪ ಅವರು ಅಧಿಕಾರದಿಂದ ಸ್ವಯಂ ಪ್ರೇರಿತವಾಗಿ ಇಳಿದ ನಂತರ ತಮ್ಮ ಪುತ್ರ ವಿಜಯೇಂದ್ರ ಅವರನ್ನು ಸಿಎಂ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ಮಂತ್ರಿ ಮಾಡಲು ಹಲವಷ್ಟು ಕಸರತ್ತು ನಡೆಸಿದ್ದರು.



ಇದು ಸಫಲವಾಗಲಿಲ್ಲ. ಅಷ್ಟೇ ಅಲ್ಲ, ಬಿಜೆಪಿ ರಾಷ್ಟ್ರೀಯ ನಾಯಕರು ತಮ್ಮನ್ನು ಕಡೆಗಣಿಸುತ್ತಿದ್ದಾರೆ ಎಂಬ ಭಾವನೆ ಅವರಲ್ಲಿ ಮೂಡಿತ್ತು. ಪಕ್ಷಕ್ಕೆ ನಾನು ಬೇಡ ಎಂದ ಮೇಲೆ ತಮ್ಮ ಮಕ್ಕಳ ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಹಲವು ಕೋನಗಳಲ್ಲಿ ಯೋಚನೆ ನಡೆಸಿದ್ದರು. ಕರ್ನಾಟಕದ ಮಟ್ಟಿಗೆ ಯಡಿಯೂರಪ್ಪ ಅವರ ಸಾರಥ್ಯ ಇಲ್ಲದೆ ಬಿಜೆಪಿ ಬಲಾಢ್ಯವಾಗಿ ಚುನಾವಣೆ ಎದುರಿಸಲು ಸಾಧ್ಯವಿಲ್ಲ ಎಂಬುದು ವರಿಷ್ಠರ ಗಮನದಲ್ಲಿದೆ. ಆದರೂ, ಅವರ ಮಕ್ಕಳಿಗೆ ಯಾವುದೇ ಅಧಿಕಾರ ನೀಡಿಲ್ಲ, ಚುನಾವಣಾ ವರ್ಷದಲ್ಲಿ ಅವರನ್ನು ಬದಿಗಿರಿಸಿ ಇತರರ ನಾಯಕತ್ವದಲ್ಲಿ ಚುನಾವಣೆ ಎದುರಿಸುವ ಶಕ್ತಿ ರಾಜ್ಯ ಬಿಜೆಪಿಗಿಲ್ಲ. ಇದನ್ನು ಮನಗಂಡ ಅಮಿತ್ ಷಾ, ರಾಜ್ಯದ ಯಾವುದೇ ನಾಯಕರೊಂದಿಗೆ ಮುಖಾಮುಖಿ ಚರ್ಚೆಗೆ ಸಮಯ ನೀಡದೆ ಯಡಿಯೂರಪ್ಪ ಅವರೊಂದಿಗೆ ಮಾತ್ರ ಚರ್ಚಿಸಲು ಸಮಯ ನಿಗದಿ ಮಾಡಿದ್ದಾರೆ. ಬಹುತೇಕ ಮುಂದಿನ ಚುನಾವಣೆ ಬಗ್ಗೆ ಯಡಿಯೂರಪ್ಪ ಅವರಿಂದ ಸಲಹೆ ಸೂಚನೆ ಪಡೆದುಕೊಳ್ಳುವುದು ಮತ್ತು ಕರ್ನಾಟಕದಲ್ಲಿ ● 9ನೇ ಪುಟಕ್ಕೆ

ರಷ್ಯಾ-ಉಕ್ರೇನ್ ಸಮರ ಶೀಘ್ರ ಸಮಾಪ್ತಿ ಸಂಭವ ಪುಟಿನ್–ಝೆಲೆನ್ಸ್ಕಿ ಮಾತುಕತೆಗೆ ಸಿದ್ಧತೆ

ಇಸ್ತಾನ್‌ಬುಲ್: ಸರಿ ಸುಮಾರು 33 ದಿನಗಳ ಬಳಿಕ ರಷ್ಯಾ ಹಾಗೂ ಉಕ್ರೇನ್ ನಡುವಿನ ಮಾತುಕತೆ, ಸಂಧಾನ ಸಫಲವಾಗುವ ಲಕ್ಷಣ ಕಂಡು ಬಂದಿದೆ.

ಟರ್ಕಿಯ ಇಸ್ತಾನ್‌ಬುಲ್‌ನಲ್ಲಿ ನಡೆದ ಚರ್ಚೆಯ ನಂತರ ಉಕ್ರೇನ್ ರಾಜಧಾನಿ ಕೀವ್ ಮತ್ತು ಚೆರ್ನಿಹಿವ್ ಬಳಿ ಮಿಲಿಟರಿ ಚಟುವಟಿಕೆಯನ್ನು ಕಡಿಮೆ ಮಾಡುವುದಾಗಿ ಮಾಸ್ಕೋ ಹೇಳಿದೆ.

(ವರದಿ ಪುಟ–9)

ಕೋವಿಡ್ ಸಂಕಷ್ಟದಲ್ಲೂ 9500 ಕೋಟಿ ಅಧಿಕ ತೆರಿಗೆ ಸಂಗ್ರಹ

ಸಮರ್ಥ ಆಡಳಿತಕ್ಕೆ ಸಾಕ್ಷಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮರ್ಥನೆ

ಬೆಂಗಳೂರು, ಮಾ.29(ಕೆಎಂಶಿ)–ಕೋವಿಡ್ ಸಂಕಷ್ಟದಲ್ಲೂ 9,500 ಕೋಟಿ ರೂ. ಹೆಚ್ಚು ತೆರಿಗೆ ಸಂಗ್ರಹವಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿಂದು ಪ್ರಕಟಿಸಿದರು.

ಮೋಟಾರು ವಾಹನ ತೆರಿಗೆ ಹೊರತುಪಡಿಸಿ ಉಳಿದ ತೆರಿಗೆ ಸಂಗ್ರಹ ನಿಗದಿತ ಗುರಿಗಿಂತ ಹೆಚ್ಚು ಕ್ರೋಢೀಕರಣವಾಗಿದೆ. ನಮ್ಮ ಆಡಳಿತ ವೈಫಲ್ಯವಾಗಿದ್ದರೆ ಇದು ಸಾಧ್ಯವಾಗುತ್ತಿತ್ತೆ? ಎಂದು ಪ್ರತಿಪಕ್ಷದ ಸದಸ್ಯರನ್ನು ಕೆಣಕಿದ ಮುಖ್ಯಮಂತ್ರಿ ಅವರು, ಕೋವಿಡ್‌ನಿಂದ ಅನೇಕ ಸಂಕಷ್ಟಗಳನ್ನು ಎದುರಿಸಿದ್ದೇವೆ. ಅದರ ನಡುವೆಯೂ ಉತ್ತಮ ಆಡಳಿತ ನೀಡಿ ಸೋರಿಕೆಯನ್ನು ತಡೆಗಟ್ಟಿ ಆದಾಯದ ಗುರಿ ಮುಟ್ಟಿದ್ದೇವೆ. ವಿವಿಧ ಇಲಾಖೆಗಳ ಅನುದಾನ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರಿಸಿದ ಮುಖ್ಯಮಂತ್ರಿ, 7,500 ಕೋಟಿ ರೂ. ಹೆಚ್ಚು ತೆರಿಗೆ ಸಂಗ್ರಹ ನಿರೀಕ್ಷೆಯಿತ್ತು. ಅದು ಮೀರಿ 9,500 ಕೋಟಿ ರೂ.ನಷ್ಟು ತೆರಿಗೆ ಸಂಗ್ರಹವಾಗಿದೆ ಎಂದರು.

2021–22ನೇ ಸಾಲಿನಲ್ಲಿ 1,19,552 ಕೋಟಿ ರೂ. ಆದಾಯ ಸಂಗ್ರಹದ ಗುರಿಯಿತ್ತು. 3ನೇ ತ್ರೈಮಾಸಿಕದಲ್ಲಿ ಕೈಗೊಂಡ ಬಿಗಿ ಕ್ರಮ ಹಾಗೂ ಜಾಗೃತ ದಳವನ್ನು ಚುರುಕುಗೊಳಿಸಿದ ಪರಿಣಾಮ ತೆರಿಗೆ ಸಂಗ್ರಹದಲ್ಲಿ ಏರಿಕೆಯಾಯಿತು. ಗೋವಾ ಮತ್ತಿತರ ಕಡೆಯಿಂದ ಬರುತ್ತಿದ್ದ ಸೆಕೆಂಡ್ಸ್ ಮದ್ಯವನ್ನು ತಡೆಗಟ್ಟಿದ್ದರಿಂದ 2000 ಕೋಟಿ ರೂ.ಗೂ ಹೆಚ್ಚು ಅಬಕಾರಿ ತೆರಿಗೆ ಸಂಗ್ರಹ ಸಾಧ್ಯವಾಯಿತು.

ಶೇ.10ರಷ್ಟು ಮುದ್ರಾಂಕ ಶುಲ್ಕ ರಿಯಾಯಿತಿ ನೀಡಿದ್ದರಿಂದ 1000 ಕೋಟಿ ರೂ. ಅಧಿಕ ತೆರಿಗೆ ಸಂಗ್ರಹವಾಗಿದೆ. ತೆರಿಗೆಯೇತರ ಆದಾಯವನ್ನು 4 ಸಾವಿರ ಕೋಟಿ ರೂ.ಗೆ ನಿಗದಿ ಮಾಡಲಾಗಿತ್ತು, 6 ಸಾವಿರ ಕೋಟಿ ರೂ. ಸಂಗ್ರಹವಾಗಿದೆ.



ವಿವಿಧ ಇಲಾಖೆಗಳ ಅನುದಾನದ ಮೇಲಿನ ಚರ್ಚೆಗೆ ಉತ್ತರ

ಕಬ್ಬಿಣದ ಅದಿರು ಮಾರಾಟದಿಂದ 500 ಕೋಟಿ ರೂ. ಸಂಗ್ರಹವಾಯಿತು. ಗಣಿಗಾರಿಕೆಗೆ ಅನುಕೂಲ ಮಾಡಿಕೊಟ್ಟಿದ್ದರಿಂದ ತೆರಿಗೆಯೇತರ ಆದಾಯ ಸಂಗ್ರಹಿಸಲು ಸಾಧ್ಯವಾಯಿತು. 2022–23ನೇ ಆರ್ಥಿಕ ಸಾಲಿನಲ್ಲಿ 10 ಸಾವಿರ ಕೋಟಿ ರೂ.ಗೂ ಹೆಚ್ಚು ತೆರಿಗೆಯೇತರ ಆದಾಯ ಹೊಂದುವ ಗುರಿ ಹೊಂದಿದ್ದೇವೆ. ತೆರಿಗೆಯೇತರ ಆದಾಯ ಹೆಚ್ಚಿಸಬೇಕು. ಅನವಶ್ಯಕ ವೆಚ್ಚವನ್ನು ತಗ್ಗಿಸಬೇಕು. ಇಲ್ಲದಿದ್ದರೆ ಜನರ ಮೇಲೆ ಆರ್ಥಿಕ ಹೊರೆ ಬೀಳಲಿದೆ ಎಂದರು.

2021–22ನೇ ಸಾಲಿನಲ್ಲಿ 67,100 ಕೋಟಿ ರೂ. ಸಾಲ ಪಡೆಯುವ ಅವಕಾಶವಿದ್ದರೂ 63,100 ಕೋಟಿ ರೂ. ಸಾಲ ಪಡೆದು, 4 ಸಾವಿರ ಕೋಟಿ ರೂ.ನಷ್ಟು ಕಡಿಮೆ ಸಾಲ ಮಾಡಿದ್ದೇವೆ ಎಂದು ಸಮರ್ಥಿಸಿಕೊಂಡರು.

ವಿತ್ತೀಯ ಕೊರತೆಯನ್ನು ಒಂದೆರಡು ವರ್ಷದಲ್ಲಿ ನಿವಾರಿಸಿ ಆದಾಯ ಹೆಚ್ಚಳಕ್ಕೆ ಆದ್ಯತೆ ನೀಡುತ್ತೇವೆ, ನಂತರ ಉಳಿತಾಯ ಬಜೆಟ್ ಮಂಡಿಸಬಹುದಾಗಿದೆ ಎಂದರು. 2022–23ರಲ್ಲಿ ಗುರಿ ದೊಡ್ಡ ಪ್ರಮಾಣದಲ್ಲಿದ್ದು ಮೊದಲ ತಿಂಗಳಿನಿಂದಲೇ ಬಿಗಿಕ್ರಮ ಕೈಗೊಂಡು ಆಧುನೀಕರಣ, ಡಿಜಿಟಲೈಷನ್, ಹೊಸ ನಿಯಮ ಜಾರಿ, ಜಿಎಸ್‌ಟಿ ಸೋರಿಕೆ ತಡೆಯುವುದು ಮೊದಲಾದವುಗಳ ಮೂಲಕ ಗುರಿ ಮೀರಿದ ಆದಾಯ ಗಳಿಸುವ ವಿಶ್ವಾಸವಿದೆ. ಜಿಎಸ್‌ಟಿ ಪಾವತಿಸದ ಸಂಸ್ಥೆಗಳ ಮೇಲೆ ದಾಳಿ ಮಾಡಿದ್ದೇವೆ, 20ರಿಂದ 25 ಕಂಪನಿ ತೆರೆದು ಜಿಎಸ್‌ಟಿ ಪಾವತಿಸದೆ ● 9ನೇ ಪುಟಕ್ಕೆ

ಪರವಾನಗಿ ಇಲ್ಲದೆ ಬಂದೂಕು ಹೊಂದಲು ಕೊಡವರಿಗೆ ಅವಕಾಶ

ರಾಜ್ಯಕ್ಕೆ ಸುಪ್ರೀಂಕೋರ್ಟ್ ನೋಟಿಸ್



ನವದೆಹಲಿ, ಮಾ. 29– ಪರವಾನಗಿ ಇಲ್ಲದೆ ಬಂದೂಕುಗಳನ್ನು ಹೊಂದಲು ಮತ್ತು ಸಾಗಿಸಲು ಕೊಡವ ಸಮುದಾಯದವರಿಗೆ ನೀಡಿದ ಅವಕಾಶವನ್ನು ಪ್ರಶ್ನೆ ಮಾಡಿ ಸಲ್ಲಿಸಲಾಗಿದ್ದ ಅರ್ಜಿಯನ್ನು ವಿಚಾರಣೆ ನಡೆಸಿದ ಸುಪ್ರೀಂಕೋರ್ಟ್ ಮುಖ್ಯ ನ್ಯಾ. ಎನ್.ವಿ. ರಮಣ ನೇತೃತ್ವದ ತ್ರಿಸದಸ್ಯ ಪೀಠ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಕೊಡವರಿಗೆ ನೀಡಿದ ಅನುಮತಿ ಸಾಂವಿಧಾನಿಕ ಸಿಂಧುತ್ವ ಹೊಂದಿದೆ. ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ನಿವೃತ್ತ ಕ್ಯಾಪ್ಟನ್ ಚೇತನ ವೈ.ಕೆ. ಎನ್ನುವರು ಸುಪ್ರೀಂಕೋರ್ಟ್‌ಗೆ ಮೇಲ್ಮನವಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿ ಈ ಸಂಬಂಧ ಉತ್ತರಿಸಲು ರಾಜ್ಯ ಸರ್ಕಾರಕ್ಕೆ ಕೋರ್ಟ್ ಸೂಚಿಸಿದೆ.


ಜಾತಿ, ಜನಾಂಗದ ಪೂರ್ವಿಕರ ಭೂ ಒಡೆತನದ ಮೇಲೆ ತಾರತಮ್ಯ ಮಾಡಲಾಗುತ್ತಿದೆ. ಇದು ಸಂವಿಧಾನದ 14, 15 ಮತ್ತು 21ನೇ ವಿಧಿಗಳನ್ನು ಉಲ್ಲಂಘಿಸುತ್ತದೆ. ಶಸ್ತ್ರಾಸ್ತ್ರ ಕಾಯಿದೆಯ ಸೆಕ್ಷನ್ 41ರ ಪ್ರಕಾರ, ಸಾರ್ವಜನಿಕ ಹಿತಾಸಕ್ತಿಯಿಂದ ಮಾತ್ರ ಶಸ್ತ್ರಾಸ್ತ್ರ ಪರವಾನಗಿ ಪಡೆಯುವುದರಿಂದ ವಿನಾಯಿತಿ ನೀಡಬಹುದು. ಆದರೆ, ಕೊಡವ ಸಮುದಾಯಕ್ಕೆ ಅಂತಹ ವಿನಾಯಿತಿ ನೀಡುವ ಕುರಿತು ಅಧಿಸೂಚನೆಯಲ್ಲಿ ಯಾವುದೇ ಕಾರಣವನ್ನು ನೀಡಲಾಗಿಲ್ಲ ಎಂದು ಅರ್ಜಿಯಲ್ಲಿ ಉಲ್ಲೇಖಿಸಿದ್ದಾರೆ. ಸಮರ ಸಮುದಾಯವಾಗಿರುವ ಕೊಡವ ಸಮುದಾಯವು ಸ್ವಾತಂತ್ರ್ಯ ● 9ನೇ ಪುಟಕ್ಕೆ

ಮುಸ್ಲಿಂ ಸಮುದಾಯದ ಅಂಗಡಿಗಳಲ್ಲಿ ಏನೂ ಖರೀದಿಸಬೇಡಿ.....

ಪ್ರಚೋದನಾತ್ಮಕ ಸಂದೇಶಗಳಿಗೆ ಮಾಜಿ ಸಿಎಂ ಕುಮಾರಸ್ವಾಮಿ ಕೆಂಡಾಮಂಡಲ

- ಸರ್ಕಾರದ ವಿರುದ್ಧ ವಾಗ್ದಾಳಿ
- ನೆಮ್ಮದಿಯ ತಾಣವಾದ ಕರ್ನಾಟಕ ಹಾಳು ಮಾಡುವ ಯತ್ನ
- ಇವುಗಳ ಹಿಂದೆ ಇರುವ ಶಕ್ತಿ ಹತ್ತಿಕ್ಕಲು ಆಗ್ರಹ

ಬೆಂಗಳೂರು, ಮಾ.29(ಕೆಎಂಶಿ)–ಮುಸ್ಲಿಂ ಸಮುದಾಯದವರ ಅಂಗಡಿಗಳಲ್ಲಿ ವ್ಯಾಪಾರ ಮಾಡಬೇಡಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಾತ್ಮಕ ಸಂದೇಶಗಳನ್ನು ಹರಡುತ್ತಿರುವ ಕಿಡಿಗೇಡಿಗಳಿಗೆ ಮುಲಾಜಿಲ್ಲದೆ ಕಡಿವಾಣ ಹಾಕಬೇಕು ಎಂದು ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ರಾಜ್ಯ ಸರಕಾರವನ್ನು ಒತ್ತಾಯಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಾನು ವಾಟ್ಸಪ್‌ನಲ್ಲಿ ಬಂದ ಈ ಸಂದೇಶವನ್ನು ಗಮನಿಸಿದೆ. ಇಂಥ ಕಿಡಿಗೇಡಿ ಸಂದೇಶಗಳನ್ನು ಯಾರು ಹರಡುತ್ತಿದ್ದಾರೆ, ಅವರ ಹಿಂದೆ ಯಾರಿದ್ದಾರೆ ಎಂಬುದನ್ನು ಪತ್ತೆ ಹಚ್ಚಿ ಮಟ್ಟ ಹಾಕಬೇಕು, ಒಂದು ವೇಳೆ ಶಾಸಕರು, ಸಚಿವರೇ ಇದ್ದರೂ ಅವರನ್ನು ಬಂಧಿಸಬೇಕು ಹಾಗೂ ಅವರಿಗೆ ಜನರೇ ಬಹಿಷ್ಕಾರ ಹಾಕಬೇಕು ಎಂದು ಆಗ್ರಹಪಡಿಸಿದರು. ಮುಸ್ಲಿಂ ಸಮುದಾಯದ ವ್ಯಾಪಾರಿಗಳಿಗೆ ● 9ನೇ ಪುಟಕ್ಕೆ

ಮೈಸೂರಲ್ಲಿ ಸಂಘಟನೆಗಳ ಭಾರೀ ಪ್ರತಿಭಟನಾ ಮೆರವಣಿಗೆ

ಆಶಾ, ಅಂಗನವಾಡಿ, ಬಿಸಿಯೂಟ ಕಾರ್ಯಕರ್ತೆಯರು, ರೈತರು, ವಿವಿಧ ಕಾರ್ಮಿಕರು ಸೇರಿದಂತೆ ಸಾವಿರಾರು ಮಂದಿ ಭಾಗಿ

ಮೈಸೂರು,ಮಾ.29(ಪಿಎಂ)– ಕೇಂದ್ರ ಸರ್ಕಾರದ ನೀತಿಗಳನ್ನು ಖಂಡಿಸಿ, ಕೇಂದ್ರ ಕಾರ್ಮಿಕ ಸಂಘಟನೆಗಳು ಕರೆ ನೀಡಿದ್ದ ಎರಡು ದಿನಗಳ ದೇಶವ್ಯಾಪಿ ಮುಷ್ಕರದ ಅಂಗವಾಗಿ ಮಂಗಳವಾರ ಮೈಸೂರು ನಗರದಲ್ಲಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಅಗತ್ಯ ವಸ್ತುಗಳ ಬೆಲೆ ನಿಯಂತ್ರಿಸಬೇಕು. 4 ಕಾರ್ಮಿಕ ಸಂಹಿತೆಗಳನ್ನು ಹಿಂಪಡೆಯಬೇಕು. ಖಾಸಗೀಕರಣ ಕೈಬಿಡಬೇಕು ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ನಗರದಲ್ಲಿಂದು ನಡೆದ ಬೃಹತ್ ಪ್ರತಿಭಟನಾ ಮೆರವಣಿಗೆಯಲ್ಲಿ ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ಕಾರ್ಯಕರ್ತೆಯರು, ರೈತರು ಸೇರಿದಂತೆ ವಿವಿಧ ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನೆ ಸಾಗಿದ ಮಾರ್ಗದುದ್ದಕ್ಕೂ ಕೆಂಪು ಧ್ವಜಗಳು ಪ್ರತಿಭಟನಾಕಾರರ ಕೈಯಲ್ಲಿ ರಾರಾಜಿಸಿದವು. ಅಲ್ಲದೆ, ಕೇಂದ್ರ ಮತ್ತು ರಾಜ್ಯ ಸರ್ಕಾರದ ● 6ನೇ ಪುಟಕ್ಕೆ




ಮೈಸೂರಲ್ಲಿ ಮಂಗಳವಾರ ಕಾರ್ಮಿಕರು, ನೌಕರರು ಭಾರೀ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮದ್ದೂರು ಬಳಿ ಶ್ರೀ ಬಸವೇಶ್ವರ ಸ್ವಾಮಿ ಕೊಂಡೋತ್ಸವದಲ್ಲಿ ದುರಂತ

ಮನೆ ಛಾವಣಿ ತಡೆಗೋಡೆ ಕುಸಿದು ಮಹಿಳೆ ಸಾವು

- 40 ಮಂದಿ ಸ್ಥಿತಿ ಗಂಭೀರ; ಮದ್ದೂರಿನ ಹುಲಿಗೆರೆಪುರ ಜಾತ್ರೆಯಲ್ಲಿ ದುರಂತ
- ಗಾಯಾಳುಗಳು ಮಂಡ್ಯ, ಮೈಸೂರು, ಮದ್ದೂರು ಆಸ್ಪತ್ರೆಗೆ ದಾಖಲು
- ಗ್ರಾಮದಲ್ಲಿ ಬಸವೇಶ್ವರ ಸ್ವಾಮಿ ಕೊಂಡೋತ್ಸವ ಸ್ಥಗಿತ, ಸ್ಮಶಾನ ಮೌನ
- ಉಸ್ತುವಾರಿ ಸಚಿವ ಗೋಪಾಲಯ್ಯ, ನಿಖಿಲ್, ಇತರ ಗಣ್ಯರಿಂದ ಆರ್ಥಿಕ ನೆರವು
- ಮೃತ ಹಾಗೂ ಗಾಯಾಳುಗಳ ಕುಟುಂಬಕ್ಕೆ ಸರ್ಕಾರದಿಂದ ಪರಿಹಾರದ ಭರವಸೆ

ಮದ್ದೂರು,ಮಾ.29(ಮೋಹನ್‌ರಾಜ್)– ಶ್ರೀ ಬಸವೇಶ್ವರ ಸ್ವಾಮಿ ಕೊಂಡೋತ್ಸವ ಸಂದರ್ಭದಲ್ಲಿ ಮನೆ ಛಾವಣಿ ತಡೆಗೋಡೆ ಕುಸಿದು ಹತ್ತು ಮಕ್ಕಳು ಸೇರಿದಂತೆ 40 ಮಂದಿ ಗಾಯಗೊಂಡು, ಓರ್ವ ಮಹಿಳೆ ಮೃತಪಟ್ಟಿರುವ ಘಟನೆ ತಾಲೂಕಿನ ಹುಲಿಗೆರೆಪುರ ಗ್ರಾಮದಲ್ಲಿ ಮಂಗಳವಾರ ಮುಂಜಾನೆ ಸಂಭವಿಸಿದೆ.



ಪುಟ್ಟಲಿಂಗಮ್ಮ

ಮುಂಜಾನೆ 5.30ರ ಸುಮಾರಿಗೆ ಗ್ರಾಮದ ಬಸವೇಶ್ವರಸ್ವಾಮಿ ಜಾತ್ರೆ ಅಂಗವಾಗಿ ಕೊಂಡೋತ್ಸವ ನಡೆಯುತ್ತಿತ್ತು. ಈ ಸಂದರ್ಭದಲ್ಲಿ ಕೊಂಡ ಹಾಯುವ ದೃಶ್ಯ ವೀಕ್ಷಿಸಲು ದೇವಾಲಯ ಸಮೀಪವಿರುವ ಪಟೇಲ್ ಸಿದ್ದೇಗೌಡ ಎಂಬುವರ ಮನೆಯ ತಾರಸಿಗೆ ಭಾರೀ ಸಂಖ್ಯೆಯಲ್ಲಿ ಜನ ಏರಿದ್ದರು. ಇವರೆಲ್ಲಾ ಮನೆಯ ಸಜ್ಜೆಯ ಮೇಲೆಯೂ ನಿಂತು ಕೊಂಡೋತ್ಸವ ವೀಕ್ಷಿಸುವಾಗ ತಾರಸಿಯ ತಡೆಗೋಡೆ ಕುಸಿದಿದೆ. ಗ್ರಾಮದ ದೇವರಸ ಎಂಬುವರ ಪತ್ನಿ ಪುಟ್ಟಲಿಂಗಮ್ಮ(50) ಘಟನೆಯಲ್ಲಿ ಮೃತಪಟ್ಟಿದ್ದು, 40ಕ್ಕೂ ಹೆಚ್ಚು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಗ್ರಾಮದ ಕೀರ್ತಿ, ಆಶಾ, ಪುಟ್ಟತಾಯಮ್ಮ, ಚಂದನ, ರೇಣುಕಾ, ಹರ್ಷಿತಾ, ಸರೋಜಮ್ಮ, ಪಲ್ಲವಿ, ಮಾದೇಶ್‌ಕುಮಾರ್, ಶೋಭಾ, ಅನಿತಾ, ಕೆಂಪಮ್ಮ, ನಿಂಗಮ್ಮ, ಸುಧಾ, ಪೂಜಾಶ್ರೀ, ಬಿಂದುಶ್ರೀ ಸೇರಿದಂತೆ ಒಟ್ಟು 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದು, ಮದ್ದೂರು ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮಂಡ್ಯ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದು, ಸರೋಜಮ್ಮ ಹಾಗೂ ಚಂದನ ಎಂಬುವರಿಗೆ ತೀವ್ರ ಗಾಯಗಳಾಗಿರುವ ಹಿನ್ನೆಲೆಯಲ್ಲಿ ಮೈಸೂರಿನ ಕೆಆರ್. ಆಸ್ಪತ್ರೆಗೆ ದಾಖಲಿಸಲಾಗಿದೆ.

ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಜಿಲ್ಲಾಧಿಕಾರಿ ಅಶ್ವತಿ, ಜಿ.ಪಂ. ಸಿಇಓ ದಿವ್ಯಪ್ರಭು, ಎಸ್‌ಪಿ





ಎನ್.ಯತೀಶ್, ತಹಸೀಲ್ದಾರ್ ಟಿ.ಎನ್.ನರಸಿಂಹಮೂರ್ತಿ, ಡಿವೈಎಸ್‌ಪಿ ಲಕ್ಷ್ಮಿನಾರಾಯಣಪ್ರಸಾದ್ ಭೇಟಿ ನೀಡಿ, ಮಾಹಿತಿ ಸಂಗ್ರಹಿಸಿ ಗಾಯಾಳುಗಳ ಚಿಕಿತ್ಸೆಗೆ ಮುಂದಾದರು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ, ಸ್ಥಳೀಯ ಶಾಸಕ ಡಿ.ಸಿ.ತಮ್ಮಣ್ಣ, ಮನ್‌ಮುಲ್ ನಿರ್ದೇಶಕ ಎಸ್.ಪಿ.ಸ್ವಾಮಿ ಮದ್ದೂರು ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಕುಶಲೋಪರಿ ವಿಚಾರಿಸಿ ಮಂಡ್ಯದ ಜಿಲ್ಲಾಸ್ಪತ್ರೆಗೆ ತೆರಳಿ ಸೂಕ್ತ ಚಿಕಿತ್ಸಾ ವ್ಯವಸ್ಥೆಗೆ ಡಿಎಚ್‌ಓ ಡಾ.ಧನಂಜಯ ಸೇರಿದಂತೆ ಇತರೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಹುಲಿಗೆರೆಪುರಕ್ಕೆ ಜಾ.ದಳ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಶಾಸಕ ಡಿ.ಸಿ.ತಮ್ಮಣ್ಣ, ಜಿ.ಪಂ. ಮಾಜಿ ಅಧ್ಯಕ್ಷ ಎಸ್.ಗುರುಚರಣ್ ಮತ್ತಿತರ ಮುಖಂಡರು ಭೇಟಿ ನೀಡಿ, ಸಾಂತ್ವನ ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಗೋಪಾಲಯ್ಯ ಸರಕಾರದ ಪರವಾಗಿ ಮೃತ ಪುಟ್ಟತಾಯಮ್ಮ ಕುಟುಂಬ ಸದಸ್ಯರಿಗೆ ಸ್ಥಳದಲ್ಲೇ 1 ಲಕ್ಷ ರೂ.ಗಳ ನಗದು ಪರಿಹಾರ ವಿತರಿಸಿ ಮಾತನಾಡಿ, ಸದರಿ ಅವಘಡವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರದಿಂದ 5 ಲಕ್ಷ ರೂ.ಗಳನ್ನು ಪರಿಹಾರ ನೀಡುವ ಸಂಬಂಧ ಮುಖ್ಯಮಂತ್ರಿ ಹಾಗೂ ಕಂದಾಯ ಸಚಿವ ಆರ್.ಅಶೋಕ್ ಅವರೊಂದಿಗೆ ಚರ್ಚಿಸಿರುವುದಾಗಿ ತಿಳಿಸಿದರು. ತೀವ್ರವಾಗಿ ಗಾಯಗೊಂಡವರನ್ನು ಬೆಂಗಳೂರು, ಮೈಸೂರು ಆಸ್ಪತ್ರೆಗಳಿಗೆ ರವಾನಿಸುವ ಸಂಬಂಧ ಮತ್ತು ಉಚಿತವಾಗಿ ಚಿಕಿತ್ಸೆ ನೀಡುವಂತೆ ಸಂಬಂಧಿಸಿದ ● 6ನೇ ಪುಟಕ್ಕೆ

ಕೊಂಡ ಹಾಯುವಾಗ ಬೆಂಕಿಗೆ ಬಿದ್ದ ಭಕ್ತ

ತಿ.ನರಸೀಪುರ,ಮಾ.29–ಕೊಂಡ ಹಾಯುವಾಗ ಭಕ್ತನೋರ್ವ ಆಯತಪ್ಪಿ ಬೆಂಕಿಗೆ ಬಿದ್ದು ಗಾಯಗೊಂಡಿರುವ ಘಟನೆ ತಾಲೂಕಿನ ರಂಗಸಮುದ್ರ ಗ್ರಾಮದಲ್ಲಿ ಸೋಮವಾರ ತಡರಾತ್ರಿ ನಡೆದಿದೆ.



ತಾಲೂಕಿನ ರಂಗಸಮುದ್ರದಲ್ಲಿ ಹುಚ್ಚಗಮ್ಮ ದೇವಿ ಮತ್ತು ಲಕ್ಷ್ಮಿ ದೇವಿ ಹಬ್ಬದ ಪ್ರಯುಕ್ತ ಕೊಂಡೋತ್ಸವ ಆಯೋಜಿಸಲಾಗಿತ್ತು. ಈ ವೇಳೆ ಅನೇಕ ಭಕ್ತರು ಕೊಂಡ ಹಾಯ್ದರು. ಈ ವೇಳೆ ಕೊಂಡ ಹಾಯುವಾಗ ಭಕ್ತನೋರ್ವ ಆಯತಪ್ಪಿ ಬಿದ್ದು ಗಾಯಗೊಂಡಿದ್ದಾರೆ. ಕೂಡಲೇ ನೆರೆದಿದ್ದ ಭಕ್ತರು, ಭಕ್ತನನ್ನು ರಕ್ಷಿಸಿ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ಕೊಡಿಸಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ. ಕೊಂಡಕ್ಕೆ ಬಿದ್ದ ದೃಶ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಮಹಾಮಾರಿ ಕೊರೊನಾ ಹಿನ್ನೆಲೆ ಕಳೆದ ಎರಡು ವರ್ಷಗಳಿಂದ ಕೊಂಡೋತ್ಸವ ನಿಲ್ಲಿಸಲಾಗಿತ್ತು. ಆದರೆ, ಈ ವರ್ಷ ಅದ್ದೂರಿಯಾಗಿ ಕೊಂಡೋತ್ಸವ ಆಯೋಜನೆ ಮಾಡಿದ್ದರಿಂದ ಸುತ್ತಮುತ್ತಲ ಗ್ರಾಮಸ್ಥರು ಕೊಂಡೋತ್ಸವದಲ್ಲಿ ಭಾಗಿಯಾಗಿದ್ದರು.

ರೆಸ್ಟೋರೆಂಟ್‌ನಲ್ಲಿ ಯುವತಿ ಮೇಲೆ ಹಲ್ಲೆ ಆರೋಪ

ಹೋಟೆಲ್ ಮುಖ್ಯಸ್ಥನ ವಿರುದ್ಧ ಪ್ರಕರಣ ದಾಖಲು


ಮೈಸೂರು, ಮಾ. 29(ಆರ್‌ಕೆ)– ರೆಸ್ಟೋರೆಂಟ್‌ನಲ್ಲಿ ಯುವತಿಯನ್ನು ಎಳೆದಾಡಿ, ಆಕೆ ಮೇಲೆ ಹೋಟೆಲ್ ಮುಖ್ಯಸ್ಥ ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಹೈವೇ ಸರ್ಕಲ್ ಬಳಿಯ ಹೋಟೆಲ್‌ವೊಂದರಲ್ಲಿ ಮಾರ್ಚ್ 26ರಂದು ನಡೆದಿದೆ.

ಮೈಸೂರಿನ ಹೈವೇ ಸರ್ಕಲ್ ಬಳಿಯ ಹೋಟೆಲ್‌ವೊಂದರ ಮುಖ್ಯಸ್ಥ ಸೈಯದ್ ರಿಯಾಜ್ ಹಲ್ಲೆ ನಡೆಸಿದವರೆಂದು ಆರೋಪಿಸಲಾಗಿದ್ದು, ಅವರ ವಿರುದ್ಧ ಎನ್‌ಆರ್ ಠಾಣೆ ಪೊಲೀಸರು ಇಂದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೃತಿಕಾ ಗೌಡ ಎಂಬುವರು ಹಲ್ಲೆಗೊಳಗಾಗಿದ್ದು, ಇಂದು ಎನ್‌ಆರ್ ಠಾಣೆಗೆ ಲಿಖಿತ ದೂರು ನೀಡಿದ ಹಿನ್ನೆಲೆಯಲ್ಲಿ ಇನ್ಸ್‌ಪೆಕ್ಟರ್ ಅಜರುದ್ದೀನ್ ಎಫ್‌ಐಆರ್ ದಾಖಲಿಸಿದ್ದಾರೆ. ಕೃತಿಕಾಗೌಡ ಎಂಬುವರು 20 ಲಕ್ಷ ಕೊಟ್ಟು ರೆಸ್ಟೋರೆಂಟ್ ಅನ್ನು ಲೀಸ್‌ಗೆ ಪಡೆದು, ನಡೆಸುತ್ತಿದ್ದರು. ಲೀಸ್ ಪಡೆದು ಒಂದು ವರ್ಷವೂ ಕಳೆದಿಲ್ಲ. ಅವಧಿಗೂ ಮುನ್ನ ರೆಸ್ಟೋರೆಂಟ್ ಖಾಲಿ ಮಾಡುವಂತೆ ಹೋಟೆಲ್ ಮುಖ್ಯಸ್ಥ ರಿಯಾಜ್ ಒತ್ತಾಯಿಸಿದ ಕಾರಣ ಮಾತಿಗೆ ಮಾತು ಬೆಳೆದು ಜಗಳದಲ್ಲಿ ಆತ ತನ್ನನ್ನು ಎಳೆದಾಡಿ ಹಲ್ಲೆ ನಡೆಸಿದರಲ್ಲದೇ, ಜೀವ ಬೆದರಿಕೆ ಹಾಕಿದ್ದಾನೆ ಎಂದು ಕೃತಿಕಾ ಗೌಡ ದೂರಿನಲ್ಲಿ ಆರೋಪಿಸಿದ್ದಾರೆ. ಮಾ.26ರಂದು ನಡೆದ ಘಟನೆಯಲ್ಲಿ ತನ್ನೊಂದಿಗೆ ವಾಗ್ವಾದ ನಡೆಸಿದ ರಿಯಾಜ್ ನನ್ನನ್ನು ಎಳೆದಾಡಿ ದೌರ್ಜನ್ಯವೆಸಗಿ ಹಲ್ಲೆ ಮಾಡಿರುವುದು ಸಿಸಿ ಟಿವಿ ಕ್ಯಾಮರಾದಲ್ಲಿ ಸೆರೆಯಾಗಿದೆ ಎಂದು ಆಕೆ ಆಪಾದಿಸಿ, ಪುರಾವೆ ಸಹ ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ಪಡೆದು, ತನಿಖೆ ನಡೆಸುತ್ತಿದ್ದಾರೆ.

ಏ.1ರಂದು ಪ್ರಧಾನಿ ಮೋದಿ 'ಪರೀಕ್ಷೆ ಪೆ ಚರ್ಚೆ' ಕಾರ್ಯಕ್ರಮ

ಡಿಡಿ, ರೇಡಿಯೋ, ಟಿವಿ ಚಾನೆಲ್, ಡಿಜಿಟಲ್ ಮಾಧ್ಯಮಗಳಲ್ಲಿ ನೇರ ವೀಕ್ಷಣೆಗೆ ಅವಕಾಶ



ಮೈಸೂರು,ಮಾ.29(ಆರ್‌ಕೆ)–ಬಹು ನಿರೀಕ್ಷಿತ ಪ್ರಧಾನಮಂತ್ರಿ ನರೇಂದ್ರ ಮೋದಿ 'ಪರೀಕ್ಷೆ ಪೆ ಚರ್ಚೆ' 5ನೇ ಆವೃತ್ತಿ ಕಾರ್ಯಕ್ರಮವನ್ನು ಏಪ್ರಿಲ್ 1ರಂದು ಬೆಳಗ್ಗೆ 11 ಗಂಟೆಗೆ ನಡೆಸಿಕೊಡಲಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್ ಹಾಗೂ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲೆ ಭಾಗ್ಯಲಕ್ಷ್ಮಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವದೆಹಲಿಯ ಟೌನ್‌ಹಾಲ್‌ನಲ್ಲಿರುವ ತಾಲ್ಕಟೋರ್ ಸ್ಟೇಡಿಯಂನಲ್ಲಿ ನಡೆಯಲಿರುವ ಕಾರ್ಯಕ್ರಮವನ್ನು ದೂರದರ್ಶನ, ರೇಡಿಯೋ, ಟಿವಿ ಚಾನೆಲ್, ಯೂಟ್ಯೂಬ್, mygovtindia, ಸ್ವಯಂ ಪ್ರಭೆಗಳಂತಹ ಡಿಜಿಟಲ್ ಮಾಧ್ಯಮಗಳಲ್ಲಿ ನೇರ ಪ್ರಸಾರ ವೀಕ್ಷಣೆಗೆ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ.

ರಾಜಭವನದಲ್ಲಿ ರಾಜ್ಯಪಾಲರ ಸಮ್ಮುಖದಲ್ಲಿ ಆಯ್ದ ವಿದ್ಯಾರ್ಥಿಗಳು, ಅಧ್ಯಾಪಕರು ಹಾಗೂ ಪೋಷಕರು ನೇರ ಪ್ರಸಾರ ವೀಕ್ಷಿಸಬಹುದಾಗಿದ್ದು, ಪ್ರಧಾನಿಗಳೊಂದಿಗೆ ಸಂವಾದ ನಡೆಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಪರೀಕ್ಷಾ ಪೇ ಚರ್ಚೆ'ಗೆ ಮೈಸೂರಿನ ವಿದ್ಯಾರ್ಥಿ



ಮೈಸೂರು, ಮಾ.29(ಎಸ್‌ಬಿಡಿ)– ಮೈಸೂರಿನ ಜವಾಹರ ನವೋದಯ ವಿದ್ಯಾಲಯದ ವಿದ್ಯಾರ್ಥಿ 'ಪರೀಕ್ಷಾ ಪೇ ಚರ್ಚೆ'ಗೆ ಆಯ್ಕೆಯಾಗಿದ್ದಾನೆ.

ಮೈಸೂರು–ಗದ್ದಿಗೆ ರಸ್ತೆ ದೊಡ್ಡಮಾರಗೌಡನಹಳ್ಳಿ (ಡಿಎಂಜಿ ಹಳ್ಳಿ)ಯಲ್ಲಿರುವ ಜವಾಹರ ನವೋದಯ ವಿದ್ಯಾಲಯದ 11ನೇ ತರಗತಿ ವಿದ್ಯಾರ್ಥಿ ಎಂ.ಬಿ.ತರುಣ್, ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ 'ಪರೀಕ್ಷಾ ಪೇ ಚರ್ಚೆ'ಯಲ್ಲಿ ಪಾಲ್ಗೊಳ್ಳಲಿದ್ದಾನೆ.

ದೇಶಾದ್ಯಂತ ಒಟ್ಟು 40 ವಿದ್ಯಾರ್ಥಿಗಳು ಈ ಚರ್ಚೆಯಲ್ಲಿ ಭಾಗವಹಿಸಲಿದ್ದು, ತರುಣ್, ರಾಜ್ಯದ ನವೋದಯ ವಿದ್ಯಾಲಯಗಳಿಂದ ಆಯ್ಕೆಯಾಗಿರುವ ಏಕೈಕ ವಿದ್ಯಾರ್ಥಿ ಎಂದು ವಿದ್ಯಾಲಯದ ಪ್ರಾಚಾರ್ಯರಾದ ಜೆ.ಮಧುಸೂದನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಸ್ಥಾಪನೆ ಆಗುವ ಕೈಗಾರಿಕೆಗಳಲ್ಲಿ ಶೇ.70ರಷ್ಟು ಉದ್ಯೋಗ ಸ್ಥಳೀಯರಿಗೆ

ಬೆಂಗಳೂರು, ಮಾ.29(ಕೆಎಂಶಿ)–ರಾಜ್ಯದಲ್ಲಿ ಸ್ಥಾಪನೆಯಾಗುವ ಕೈಗಾರಿಕೆಗಳು ಹಲವು ಶ್ರೇಣಿಯ ಹುದ್ದೆಗಳಲ್ಲಿ ಸ್ಥಳೀಯರಿಗೆ ಶೇ.70ರಷ್ಟು ಮೀಸಲಾತಿ ನೀಡಬೇಕು

2020–25ರ ಕೈಗಾರಿಕಾ ನೀತಿಯ ನಿಯಮ



ಎಂದು 2020–25ರ ಕೈಗಾರಿಕಾ ನೀತಿಯಲ್ಲಿ ನಿಯಮ ರೂಪಿಸಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಚಿದಾನಂದಗೌಡರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಶೇ.10ರಷ್ಟು ಗ್ರೂಪ್ 'ಡಿ' ಶ್ರೇಣಿಯಲ್ಲಿ, ಉಳಿದ ಹುದ್ದೆಗಳಲ್ಲಿ ಶೇ.60 ರಷ್ಟು ಅರ್ಹರಿಗೆ ನೀಡಬೇಕಿದೆ. ಮುಂದಿನ ದಿನಗಳಲ್ಲಿ ಈ ನಿಯಮವನ್ನು ಪಾಲನೆ ಮಾಡಲಾಗುವುದು. ಸರೋಜಿನಿ ಮಹಿಷಿ ವರದಿ ಅನ್ವಯ ಸ್ಥಳೀಯರಿಗೆ ಉದ್ಯೋಗ ಸಿಗಬೇಕು ಎಂಬ ಬದ್ಧತೆಯಲ್ಲಿ ರಾಜ್ಯ ಸರ್ಕಾರ ಯಾವುದೇ ರಾಜಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಖಾಸಗಿ ಕಂಪೆನಿಗಳು ಉದ್ಯೋಗ ನೇಮಕಾತಿಯಲ್ಲಿ ಪಾರದರ್ಶಕತೆ ಅನುಸರಿಸುತ್ತಿಲ್ಲ. ನೇಮಕಾತಿ ಬಗ್ಗೆ ಪತ್ರಿಕೆಗಳಲ್ಲಿ ಜಾಹೀರಾತು ನೀಡುವಂತೆ ಸರ್ಕಾರ ಸೂಚನೆ ನೀಡಬೇಕು ಎಂದಾಗ ಸಚಿವರು, ಸಾಧ್ಯತೆ ಇರುವ ನಿಯಮಗಳಲ್ಲಿ ಕ್ರಮ ಜರುಗಿಸುವುದಾಗಿ ಭರವಸೆ ನೀಡಿದರು.

ಬಯೋಫರ್ಟಿಲೈಸರ್ಸ್ ಮೇಲಿನ ಜಿಎಸ್‌ಟಿ ಕಡಿತಗೊಳಿಸಲು ಮನವಿ

ಮೈಸೂರು, ಮಾ. 29(ಆರ್‌ಕೆ)– ರೈತರ ಹಿತದೃಷ್ಟಿಯಿಂದ ಬಯೋಫರ್ಟಿಲೈಸರ್ಸ್



ಮೇಲಿರುವ ಶೇ. 12ರಷ್ಟು ಜಿಎಸ್‌ಟಿಯನ್ನು ಶೇ.5ಕ್ಕೆ ಇಳಿಸುವಂತೆ ಸಂಸದ ಪ್ರತಾಪ್ ಸಿಂಹ ಅವರು ಕೇಂದ್ರದ ಕೃಷಿ ಮತ್ತು ರೈತರ ಕ್ಷೇಮಾಭಿವೃದ್ಧಿ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರನ್ನು ಕೋರಿಕೊಂಡಿದ್ದಾರೆ.

ಈ ಕುರಿತು ಸಚಿವರನ್ನು ಭೇಟಿ ಮಾಡಿ ಮನವಿ ಪತ್ರ ಸಲ್ಲಿಸಿರುವ ಅವರು, ದೇಶದ ಜಿಡಿಪಿಯಲ್ಲಿ ಕೃಷಿಯು ಶೇ.18ರಷ್ಟು ಕೊಡುಗೆ ನೀಡಿದೆ. ಬಯೋಫರ್ಟಿಲೈಸರ್ಸ್, ಬಯೋಕಂಟ್ರೋಲ್ ಏಜೆಂಟ್ಸ್, ಬಯೋ ಪೆಸ್ಟಿಸೈಡ್ಸ್ ಕೃಷಿಗೆ ಅತ್ಯಮೂಲ್ಯ ರಸಾಯನಿಕವಾಗಿರುವುದರಿಂದ ಕೃಷಿ ಉತ್ಪನ್ನಗಳ ವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ ಎಂದು ವಿವರಿಸಿದ್ದಾರೆ. ಕೆಲ ರಸಾಯನಿಕ ಗೊಬ್ಬರಗಳ ಮೇಲೆ ಶೇ.12ರಷ್ಟು ಜಿಎಸ್‌ಟಿ ರೈತರಿಗೆ ಹೊರೆಯಾಗುತ್ತಿರುವ ಕಾರಣ ಅದನ್ನು ಶೇ. 5ಕ್ಕೆ ಇಳಿಸಿದರೆ, ದೊಡ್ಡ ಪ್ರಮಾಣದಲ್ಲಿ ಕೃಷಿಕರಿಗೆ ಅನುಕೂಲವಾಗುತ್ತದೆ ಎಂದು ಪ್ರತಾಪ್ ಸಿಂಹ ಸಚಿವರ ಶೋಭಾ ಕರಂದ್ಲಾಜೆ ಅವರಿಗೆ ವಿವರಿಸಿದ್ದಾರೆ.

ಮೇಲ್ವಿಚಾರಕರ ತಾತ್ಕಾಲಿಕ ಹುದ್ದೆಗೆ ಅರ್ಜಿ ಆಹ್ವಾನ

ಮೈಸೂರು, ಮಾ.29– ಬನ್ನೂರು ಶಾಖಾ ಗ್ರಂಥಾಲಯದಲ್ಲಿ ಮೇಲ್ವಿಚಾರಕರ ಗೌರವ ಸಂಭಾವನೆಯ ತಾತ್ಕಾಲಿಕ ಹುದ್ದೆಯು ಖಾಲಿ ಇದ್ದು, ಬನ್ನೂರು ಪುರಸಭೆ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ ಸ್ಥಳೀಯ ಅಭ್ಯರ್ಥಿ ಹಾಗೂ ನಿಗದಿಪಡಿಸಿದ ವರ್ಗದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತೀರ್ಣರಾಗಿದ್ದು ಅರ್ಜಿ ನಮೂನೆಗಳನ್ನು ಬನ್ನೂರು ಶಾಖಾ ಗ್ರಂಥಾಲಯದಲ್ಲಿ ಪಡೆದು ವಿವರಗಳನ್ನು ಭರ್ತಿ ಮಾಡಿ, ಜನ್ಮ ದಿನಾಂಕ, ವಿದ್ಯಾರ್ಹತೆ, ಮೀಸಲಾತಿ ಸಂಬಂಧಿಸಿದ ತಾಲೂಕು ತಹಸೀಲ್ದಾರ್ ಅವರ ಕಚೇರಿಯಿಂದ ಪಡೆದ ವಾಸಸ್ಥಳ ದೃಢೀಕರಣ, ಅನುಭವ/ತರಬೇತಿ ಇನ್ನಿತರ ಅವಶ್ಯಕ ಪ್ರಮಾಣ ಪತ್ರಗಳ ದೃಢೀಕೃತ ಪ್ರತಿಯೊಂದಿಗೆ ಏ.22ರೊಳಗಾಗಿ ಟಿ.ನರಸೀಪುರ ತಾಲೂಕು ಶಾಖಾ ಗ್ರಂಥಾಲಯಕ್ಕೆ ಸಲ್ಲಿಸಬಹುದು.

ನೇಮಕಗೊಳ್ಳುವ ಮೇಲ್ವಿಚಾರಕರಿಗೆ ಮಾಸಿಕ 7000 ರೂ.ಗಳ ಗೌರವ ಸಂಭಾವನೆಯನ್ನು ನೀಡಲಾಗುವುದು. ನೇಮಕಾತಿಯನ್ನು ಸರ್ಕಾರದ ಮಾರ್ಗಸೂಚಿಯನುಸಾರ ಆಯ್ಕೆ ಸಮಿತಿ ಮುಖಾಂತರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪಡೆದ ಗರಿಷ್ಠ ಅಂಕಗಳ ಆಧಾರದ ಮೇಲೆ (ಮೆರಿಟ್) ಆಯ್ಕೆ ಮಾಡಲಾಗುವುದು. ಮುಂದುವರಿಕೆ ಕಲಿಕಾ ಕೇಂದ್ರಗಳಲ್ಲಿ ಪ್ರೇರಕ/ಉಪಪ್ರೇರಕರಾಗಿ ಕಾರ್ಯನಿರ್ವಹಿಸುವವರಿಗೆ ಮತ್ತು ಗ್ರಂಥಾಲಯ ವಿಜ್ಞಾನದಲ್ಲಿ ತರಬೇತಿ ಪಡೆದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಟಿ.ನರಸೀಪುರ ತಾಲೂಕು ಶಾಖಾ ಗ್ರಂಥಾಲಯ ಅಥವಾ ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪನಿರ್ದೇಶಕರ ಕಚೇರಿ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ದೂರಾಯ್ತು ಕೋವಿಡ್ ಆತಂಕ; ಮಕ್ಕಳಿಗಿನ್ನು ಮಜಾ

ಕೈಬೀಸಿ ಕರೆಯುತ್ತಿವೆ ಬೇಸಿಗೆ ಶಿಬಿರಗಳು



ಮೈಸೂರಿನ ಸರಸ್ವತಿಪುರಂನಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಸ್ವಿಮ್ಮಿಂಗ್‌ಪೂಲ್‌ನಲ್ಲಿ ಸ್ವಚ್ಛಂದವಾಗಿ ಈಜುತ್ತಿರುವ ವಿದ್ಯಾರ್ಥಿಗಳು.

ಮೈಸೂರು,ಮಾ.29(ಆರ್‌ಕೆ)–ಕೊರೊನಾ ವೈರಸ್ ಸೋಂಕಿನ ಆತಂಕದಿಂದಾಗಿ ನೆನೆಗುದಿಗೆ ಬಿದ್ದಿದ್ದ ಸ್ವಿಮ್ಮಿಂಗ್ ಕ್ಯಾಂಪ್ ಬೇಸಿಗೆ ಶಿಬಿರ, ಚಿಣ್ಣರ ಮೇಳದಂತಹ ಚಟುವಟಿಕೆಗಳು 2 ವರ್ಷಗಳ ನಂತರ ಇದೀಗ ಮೈಸೂರು ನಗರದಲ್ಲಿ ಮತ್ತೆ ಮುನ್ನೆಲೆಗೆ ಬಂದಿವೆ.

ಶಾಲಾ ಶೈಕ್ಷಣಿಕ ಜಂಜಾಟ ಮರೆತು ಆಟ, ಮೋಜು, ಮನರಂಜನೆ, ಕ್ರೀಡಾ ಚಟುವಟಿಕೆಗಳಲ್ಲಿ ತಲ್ಲೀನರಾಗಬೇಕಿದ್ದ ಚಿಣ್ಣರು ಕೋವಿಡ್ ಮಹಾಮಾರಿಯಿಂದಾಗಿ ಮನೆಯಲ್ಲೇ ಇದ್ದುದರಿಂದ ಅವರ ಸುಪ್ತ ಪ್ರತಿಭೆಗೆ ತಣ್ಣೀರು ಎರಚಿದಂತಾಗಿತ್ತು. ಲಾಕ್‌ಡೌನ್, ವೀಕೆಂಡ್, ನೈಟ್ ಕರ್ಫ್ಯೂ, ನಿಷೇಧಾಜ್ಞೆಯಂತಹ ನಿರ್ಬಂಧ ಜಾರಿಗೊಳಿಸಿದ್ದರಿಂದಾಗಿ ಶಾಲೆಗಳು ಬಂದ್ ಆಗಿದ್ದವಲ್ಲದೇ ಬೇಸಿಗೆ ಶಿಬಿರ, ಚಿಣ್ಣರ ಮೇಳ ಕ್ರೀಡಾ ಚಟುವಟಿಕೆಗಳಿಗೂ ಸರ್ಕಾರ ನಿರ್ಬಂಧ ಹೇರಿತ್ತು.

ಇದೀಗ ಕೊರೊನಾ ಸೋಂಕಿನ ಪ್ರಕರಣಗಳು ಕ್ಷೀಣಿಸುತ್ತಿರುವುದರಿಂದ ಎರಡು ವರ್ಷಗಳ ನಂತರ ಶಿಕ್ಷಣ ಸಂಸ್ಥೆಗಳು, ರಂಗ ತರಬೇತಿ ಕೇಂದ್ರಗಳು, ಸಾಂಸ್ಕೃತಿಕ ಹಾಗೂ ಕ್ರೀಡಾ ಸಂಸ್ಥೆಗಳು 15 ವರ್ಷದೊಳಗಿನ ಮಕ್ಕಳಿಗಾಗಿ ಬೇಸಿಗೆ ಶಿಬಿರ, ಚಿಣ್ಣರ ಮೇಳ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಸಿದ್ಧತೆ ನಡೆಸುತ್ತಿವೆ.

ಆನ್‌ಲೈನ್ ತರಗತಿಯಿಂದ ಮನೆಯಲ್ಲೇ ಇದ್ದು ಮಾನಸಿಕವಾಗಿ ತುಡಿತಕ್ಕೊಳಗಾಗಿರುವ ಮಕ್ಕಳನ್ನು ಅದರಿಂದ ಹೊರತರಲು ಬಯಸಿರುವ ಪೋಷಕರಿಂದ ಬೇಸಿಗೆ ಶಿಬಿರ, ಕ್ರೀಡೆ, ಈಜು, ಕಲಾ ಚಟುವಟಿಕೆ ಆರಂಭಿಸುವಂತೆ ಒತ್ತಡವೂ ಬರುತ್ತಿರುವ ಕಾರಣ ಶಿಕ್ಷಣೇತರ ಚಟುವಟಿಕೆಗಳು ಈಗ ಗರಿಗೆದರತೊಡಗಿದ್ದು, 2 ವರ್ಷಗಳ ನಂತರ ಮತ್ತೆ ಮುನ್ನೆಲೆಗೆ ಬರುತ್ತಿವೆ.

ಮೃಗಾಲಯದಲ್ಲಿ ಶಿಬಿರ

12ರಿಂದ 18 ವರ್ಷ ವಯೋಮಿತಿಯ ಮಕ್ಕಳಿಗಾಗಿ ಬೇಸಿಗೆ ಶಿಬಿರ ನಡೆಸಲು ಮುಂದಾಗಿರುವ ಮೈಸೂರು ಮೃಗಾಲಯವು ಏಪ್ರಿಲ್ 15ರಿಂದ 24 ರವರೆಗೆ ಮೊದಲ ತಂಡ, ಮೇ 1ರಿಂದ 10ರವರೆಗೆ ಎರಡನೇ ತಂಡದ ವಿದ್ಯಾರ್ಥಿಗಳಿಗಾಗಿ ಶಿಬಿರ ಆಯೋಜಿಸಲಾಗುತ್ತಿದೆ. ಪ್ರಾಣಿಗಳ ನಿರ್ವಹಣೆ, ಸಂರಕ್ಷಣೆ ಬಗ್ಗೆ ಮಾಹಿತಿ ನೀಡುವುದು, ತಜ್ಞರಿಂದ ವನ್ಯಜೀವಿಗಳ ಜೀವನ ಶೈಲಿ, ವರ್ತನೆ ಬಗ್ಗೆ ಉಪನ್ಯಾಸದ ಮೂಲಕ ಜಾಗೃತಿ ಮೂಡಿಸಲಿದ್ದು, ಮೃಗಾಲಯ ಪ್ರಾಧಿಕಾರವು ಶಿಬಿರಕ್ಕೆ ಸಕಲ ಸಿದ್ಧತೆ ನಡೆಸಿದೆ.



ರಂಗಾಯಣ




ಪ್ರತೀ ವರ್ಷ ಚಿಣ್ಣರ ಮೇಳ ನಡೆಸಿ ಖ್ಯಾತಿ ಗಳಿಸುತ್ತಿರುವ ಕರ್ನಾಟಕ ರಂಗಾಯಣದಲ್ಲಿ ಈ ವರ್ಷ ಬಹುರೂಪಿ ನಾಟಕೋತ್ಸವ ಇದೀಗ ಮುಗಿದಿದ್ದು, ಕಲಾವಿದರೆಲ್ಲಾ ರಂಗ ಪ್ರವಾಸದಲ್ಲಿರುವುದರಿಂದ ಈ ವರ್ಷ ಚಿಣ್ಣರ ಮೇಳ ಆಯೋಜಿಸುವ ಬಗ್ಗೆ 2 ದಿನದೊಳಗಾಗಿ ನಿರ್ಧರಿಸಲಾಗುವುದು ಎಂದು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕ್ರೀಡಾ ಬೇಸಿಗೆ ಶಿಬಿರ

ಮೈಸೂರು ವಿಶ್ವವಿದ್ಯಾನಿಲಯವು ಮಾ.30ರಿಂದ ಏ.30ರವರೆಗೆ ವಿವಿಧ ಕ್ರೀಡೆಗಳ ಬೇಸಿಗೆ ಶಿಬಿರ ಆಯೋಜಿಸಿದೆ ವಿಶ್ವ ವಿದ್ಯಾಲಯದ ದೈಹಿಕ ಶಿಕ್ಷಣ ವಿಭಾಗವು 8ರಿಂದ 15 ವರ್ಷದೊಳಗಿನ ಮಕ್ಕಳಿಗೆ ಜಿಮ್ನಾಸ್ಟಿಕ್, 12ರಿಂದ 16 ವರ್ಷದವರಿಗೆ ಬ್ಯಾಡ್ಮಿಂಟನ್ ಹಾಗೂ ಇತರ ಕ್ರೀಡೆಗಳಲ್ಲಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದೆ. ಅಥ್ಲೆಟಿಕ್ಸ್, ಬಾಸ್ಕೆಟ್ ಬಾಲ್, ಕಬಡ್ಡಿ, ಕುಸ್ತಿ, ಕರಾಟೆ, ಯೋಗ, ಫುಟ್ ಬಾಲ್ ಹಾಗೂ ಸ್ವಿಮ್ಮಿಂಗ್ ತರಬೇತಿಯನ್ನು ಪೂರ್ಣ ಪ್ರಮಾಣದಲ್ಲಿ ಆಯೋಜಿಸಲು ತಯಾರಿ ನಡೆಸುತ್ತಿದ್ದೇವೆ ಎಂದು ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಪ್ರೊ.ಕೃಷ್ಣಯ್ಯ ತಿಳಿಸಿದ್ದಾರೆ.



ನಟನದಿಂದ ರಜಾ ಮಜಾ



ನಟ, ರಂಗ ಕಲಾವಿದ ಮಂಡ್ಯ ರಮೇಶ್ ನೇತೃತ್ವದ 'ನಟನ' ರಂಗ ಶಾಲೆಯು ಮೈಸೂರಿನ ಜಯನಗರ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಸ್ಕೂಲ್‌ನಲ್ಲಿ ಏ.14ರಿಂದ ಮೇ 8ರವರೆಗೆ ಬೆಳಗ್ಗೆ 10ರಿಂದ ಸಂಜೆ 4.30ರವರೆಗೆ ರಜಾ ಮಜಾ ಬೇಸಿಗೆ ಶಿಬಿರ ಆಯೋಜಿಸಿದೆ. ನಾಟಕ, ಕಲೆ, ದೇಶೀ ನಾಟಕದ ತಂತ್ರಗಳು, ಹಾಡುಗಾರಿಕೆ, ಕರಕುಶಲ ಕಲೆ, ಸಂವಹನ ಜಾಣ್ಮೆ ಸೇರಿದಂತೆ ವಿವಿಧ ಕಲಾ ಪ್ರಕಾರಗಳ ಬಗ್ಗೆ ಶಿಬಿರದಲ್ಲಿ 8ರಿಂದ 14 ವರ್ಷ ವಯೋಮಿತಿಯ ಮಕ್ಕಳಿಗೆ ತರಬೇತಿ ನೀಡಲಾಗುವುದು. ಏ.3ರಂದು ಬೆಳಗ್ಗೆ 10ರಿಂದ ಮಧ್ಯಾಹ್ನ 1.30ರವರೆಗೆ ರಾಮಕೃಷ್ಣನಗರದಲ್ಲಿರುವ 'ನಟನ' ರಂಗ ಶಾಲೆಯಲ್ಲಿ ಅರ್ಜಿ ವಿತರಿಸಲಿದ್ದು, ಮಾಹಿತಿಗೆ 72595 37777, 9480468327 ಸಂಪರ್ಕಿಸಬಹುದಾಗಿದೆ.

ನೈಪುಣ್ಯದಲ್ಲಿ ಬೇಸಿಗೆ ಬಂಡಿ



ಮೈಸೂರಿನ ಆರ್.ಟಿ.ನಗರದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್‌ನಲ್ಲಿ ಏ.11ರಿಂದ 'ಬೇಸಿಗೆ ಬಂಡಿ' ಎಂಬ ಬೇಸಿಗೆ ಶಿಬಿರ ಏರ್ಪಡಿಸಿದೆ. 8ರಿಂದ 15 ವರ್ಷದ ಮಕ್ಕಳಿಗೆ ಉಚಿತವಾಗಿ ದೇಶೀ ಚಟುವಟಿಕೆಗಳಾದ ಎತ್ತಿನಗಾಡಿ ಸವಾರಿ, ನೇಚರ್ ವಾಕ್, ಐತಿಹಾಸಿಕ ಸ್ಥಳಗಳಿಗೆ ಭೇಟಿ, ಜಾನಪದ ಕಲೆ, ರೇಡಿಯೋ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು, ಕಲೆ ಮತ್ತು ಕೌಶಲ್ಯಾಭಿವೃದ್ಧಿ ಸೇರಿದಂತೆ ವಿವಿಧ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸಲಾಗುವುದು ಎಂದು ಸಂಸ್ಥೆ ಮುಖ್ಯಸ್ಥ ಆರ್.ರಘು ತಿಳಿಸಿದ್ದಾರೆ. ಆಸಕ್ತರು ಆರ್.ಟಿ.ನಗರದ 20ನೇ ಮುಖ್ಯ ರಸ್ತೆಯಲ್ಲಿರುವ ಕೌಟಿಲ್ಯ ಭವನವನ್ನು ಸಂಪರ್ಕಿಸಿ ಮಾ.31ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ 0821–2340041, 9108002966 ಸಂಪರ್ಕಿಸಿ.

ಈಜು ಶಿಬಿರ



ಮೈಸೂರಿನ ಸಂದೇಶ್ ದಿ ಪ್ರಿನ್ಸ್ ಸೇರಿದಂತೆ ಕೆಲ ಹೋಟೆಲ್, ರೆಸಾರ್ಟ್‌ಗಳಲ್ಲಿ ಈಜು ಶಿಬಿರಗಳನ್ನು ಏರ್ಪಡಿಸಿವೆ. ಕೆಲ ಖಾಸಗಿ ಶಾಲೆಗಳಲ್ಲಿಯೂ ಬೇಸಿಗೆ ಶಿಬಿರ ಆಯೋಜಿಸಲಾಗುತ್ತಿದ್ದು, ಪೋಷಕರು ತಮ್ಮ ಮಕ್ಕಳನ್ನು ಸೇರಿಸಲು ಮುಂದಾಗುತ್ತಿರುವುದು ಸಾಮಾನ್ಯವಾಗಿದೆ.

ಕೋವಿಡ್ ಹಾವಳಿಯಿಂದ ಎರಡು ವರ್ಷದಲ್ಲಿ 45 ಸಾವಿರ ಜನ ಉದ್ಯೋಗ ಕಳೆದುಕೊಂಡಿದ್ದಾರೆ



ಸಣ್ಣ ಕೈಗಾರಿಕಾ ಸಚಿವ ಎಂಟಿಬಿ ನಾಗರಾಜ್ ಮಾಹಿತಿ

ಬೆಂಗಳೂರು, ಮಾ.29(ಕೆಎಂಶಿ)–ಕೋವಿಡ್–19 ಕಾರಣಗಳಿಂದ ಕಳೆದ 2 ವರ್ಷದಲ್ಲಿ 45 ಸಾವಿರ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಸಣ್ಣ ಕೈಗಾರಿಕಾ ಸಚಿವ ಎಂ.ಟಿ.ಬಿ.ನಾಗರಾಜ್ ತಿಳಿಸಿದ್ದಾರೆ.

ವಿಧಾನಪರಿಷತ್‌ನಲ್ಲಿ ಯು.ಬಿ.ವೆಂಕಟೇಶ್ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, 2020ರಲ್ಲಿ 562, 2021ರಲ್ಲಿ 192 ಸೇರಿ ಒಟ್ಟು 754 ನೋಂದಾಯಿತ ಕಾರ್ಖಾನೆಗಳು ಮುಚ್ಚಿವೆ ಎಂದರು. ಅದೇ ರೀತಿ 92919 ಉದ್ಯೋಗ ಸೃಷ್ಟಿಯಾಗುವ ಕಾರ್ಖಾನೆಗಳು ಸ್ಥಾಪನೆಯಾಗಿವೆ. ರಾಜ್ಯ ಸರ್ಕಾರ ಸಣ್ಣ ಕೈಗಾರಿಕೆಗಳಿಗೆ ಸಾಕಷ್ಟು ಬೆಂಬಲ ನೀಡುತ್ತಿದೆ. ಕಚ್ಚಾ ವಸ್ತುಗಳ ಕೊರತೆ, ಕಾರ್ಮಿಕರ ಕೊರತೆ, ದುಡಿಯುವ ಬಂಡವಾಳ ಸಮಸ್ಯೆ ಸೇರಿ ಅನೇಕ ಕಾರಣಗಳಿಗೆ ಸಣ್ಣ ಕೈಗಾರಿಕೆಗಳು ತೊಂದರೆಗೆ ಒಳಗಾಗಿವೆ. ಕೋವಿಡ್ ಸಂದರ್ಭದಲ್ಲೂ ಸಣ್ಣ ಕೈಗಾರಿಕೆಗಳು ಮುಚ್ಚಿವೆ ಎಂದರು.

ಸಣ್ಣ ಕೈಗಾರಿಕೆಗಳು ಮಾತ್ರವಲ್ಲ, ಬೃಹತ್ ಉದ್ಯಮಗಳು ಕೂಡ ನಷ್ಟವಾಗಿವೆ. ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ನಲ್ಲಿ 26 ಸಾವಿರ ಜನ ಕೆಲಸ ಮಾಡುತ್ತಿದ್ದರು, ಎನ್‌ಜಿಎಫ್‌ನಲ್ಲಿ 5 ಸಾವಿರ ಮಂದಿ ಕೆಲಸ ಮಾಡುತ್ತಿದ್ದರು. ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿ, ತಂತ್ರಜ್ಞಾನ ಬದಲಾವಣೆಯಿಂದ ಭಾರೀ ಕೈಗಾರಿಕೆಗಳೇ ಮುಚ್ಚಿ ಹೋಗಿವೆ. ಅದೇ ರೀತಿ ಸಣ್ಣ ಕೈಗಾರಿಕೆಗಳು ನಷ್ಟ ಅನುಭವಿಸುತ್ತಿವೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗಾರಿಕೆಗಳಿಗೆ ಸಾಕಷ್ಟು ನೆರವು ನೀಡುತ್ತಿವೆ. ಕಾರ್ಮಿಕರ ಬಲವರ್ಧನೆಗೆ ಉದ್ಯೋಗ ಕಳೆದುಕೊಂಡವರ ನೆರವಿಗೆ ಕಾರ್ಮಿಕ ಇಲಾಖೆಯಲ್ಲಿ ಯಾವುದೇ ಯೋಜನೆಗಳಿಲ್ಲ, ಆದರೆ ಕಾರ್ಮಿಕರು ತಮ್ಮ ಉಳಿತಾಯದ ಸೌಲಭ್ಯಗಳನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ ಎಂದರು.

ಕೇಂದ್ರೀಯ ಪೆಟ್ರೋ ಕೆಮಿಕಲ್ಸ್ ತಂತ್ರಜ್ಞಾನ ಸಂಸ್ಥೆಯಿಂದ ಉಚಿತ ತರಬೇತಿ

ಮೈಸೂರು,ಮಾ.29–ಕೇಂದ್ರದ ವಿಶೇಷ ಕೇಂದ್ರೀಯ ಸಹಾಯಧನ ಯೋಜನೆಯಡಿ 2021–22ನೇ ಸಾಲಿನಲ್ಲಿ SCA to SCSP ಯಡಿ ಪರಿಶಿಷ್ಟ ಜಾತಿಗೆ ಸೇರಿದ ನಿರುದ್ಯೋಗಿ ಯುವಕ, ಯುವತಿಯರಿಗೆ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಂಸ್ಥೆಯಲ್ಲಿ ಉಚಿತವಾಗಿ ಪ್ಲಾಸ್ಟಿಕ್ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ವೃತ್ತಿಪರ ತರಬೇತಿಯನ್ನು ಹಮ್ಮಿಕೊಳ್ಳಲಾಗಿದೆ.

ಸಂಸ್ಥೆಯಲ್ಲಿ Machine Operator Assistant-Injection Moulding (MOA-IM), Machine Operator Assistant- Plastic Processing (MOA-PP) ಹುದ್ದೆಗೆ ತರಬೇತಿಯನ್ನು ನೀಡಲಾಗುತ್ತಿದ್ದು, ಆಸಕ್ತರು ಮೈಸೂರಿನ ಹೆಬ್ಬಾಳ ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋ ಕೆಮಿಕಲ್ಸ್ ಇಂಜಿನಿಯರಿಂಗ್ ಅಂಡ್ ಟೆಕ್ನಾಲಜಿ ಸಂಸ್ಥೆಯಲ್ಲಿ ನಡೆಯುವ ಸಂದರ್ಶನದಲ್ಲಿ ಭಾಗವಹಿಸಬಹುದು.

ತರಬೇತಿ ಅವಧಿಯು ಮೂರು ತಿಂಗಳು ನಡೆಯಲಿದ್ದು, ತಿಂಗಳಿಗೆ 2000 ರೂ.ಗಳ ಶಿಷ್ಯವೇತನ ನೀಡಲಾಗುವುದು. ವಯೋಮಿತಿ 18ರಿಂದ 35 ವರ್ಷದೊಳಗಿರಬೇಕು. ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ, ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ ಅಥವಾ ಐಟಿಐನಲ್ಲಿ ಉತ್ತೀರ್ಣರಾಗಿರಬೇಕು, ಬೇಸಿಕ್ ಕಂಪ್ಯೂಟರ್ ಮತ್ತು ಸ್ಪೋಕನ್ ಇಂಗ್ಲೀಷ್ ತರಬೇತಿ ಹಾಗೂ ಉದ್ಯೋಗ ಅವಕಾಶಕ್ಕೆ ನೆರವು ನೀಡಲಾಗುವುದು.

ತರಬೇತಿ ಪಡೆಯಲು ಇಚ್ಛಿಸುವ ಅರ್ಹ ಅಭ್ಯರ್ಥಿಗಳು ವಿದ್ಯಾರ್ಹತೆ ಅಂಕ ಪಟ್ಟಿ,ಡೇಟ್ ಆಫ್ ಬರ್ತ್ ಪ್ರೂಫ್, ಗುರುತಿನ ಐಡಿ ಪ್ರೂಫ್, ಆಧಾರ್ ಕಾರ್ಡ್, ವೋಟರ್‌ಐಡಿ, ರೇಷನ್ ಕಾರ್ಡ್, ಇತ್ತೀಚಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಎಲ್ಲಾ ಮೂಲ ದಾಖಲಾತಿಗಳು ಮತ್ತು ಒಂದು ಸೆಟ್ ಪ್ರತಿ, 6 ಪಾಸ್‌ಪೋರ್ಟ್ ಅಳತೆಯ ಇತ್ತೀಚಿನ ಫೋಟೋಗಳೊಂದಿಗೆ ಸಂದರ್ಶನಕ್ಕೆ ಭಾಗವಹಿಸಲು ಸೂಚಿಸಿದೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ Email: sstcmys1@gmail.com ಮೇಲ್ ಐಡಿಯನ್ನು ಅಥವಾ 9380756024, 9066648466, 9845873498 ಹಾಗೂ 0821–2510619 ಅನ್ನು ಸಂಪರ್ಕಿಸಬಹುದು ಅಥವಾ ಪಡುವಾರಹಳ್ಳಿ ಬಡಾವಣೆಯಲ್ಲಿರುವ ಆದಿಪಂಪ ರಸ್ತೆ ಒಂಟಿಕೊಪ್ಪಲು ಪೂರ್ವ ಡಾ.ಬಾಬು ಜಗಜೀವನರಾಂ ಭವನ ಕಟ್ಟಡ ಸಮಾಜ ಕಲ್ಯಾಣ ಇಲಾಖೆ ಅನ್ನು ಸಂಪರ್ಕಿಸಬಹುದು ಅಥವಾ ದೂಸಂ: 0821–2344661 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಾಳೆ ಎಸ್‌ಡಿಎಂಐಎಂಡಿ ಸಂಸ್ಥೆಯ 27ನೇ ವಾರ್ಷಿಕ ಘಟಿಕೋತ್ಸವ

- 9 ವಿದ್ಯಾರ್ಥಿಗಳಿಗೆ ಚಿನ್ನದ ಪದಕ, 181 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ
- ವೀರೇಂದ್ರ ಹೆಗ್ಗಡೆ ಸಮ್ಮುಖದಲ್ಲಿ ಪಂಕಜಂ ಶ್ರೀದೇವಿ ಘಟಿಕೋತ್ಸವ ಭಾಷಣ

ಮೈಸೂರು,ಮಾ.29(ಆರ್‌ಕೆಬಿ)–ಮೈಸೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ (ಎಸ್‌ಡಿಎಂಐಎಂಡಿ) ಸಂಸ್ಥೆಯ 27ನೇ ವಾರ್ಷಿಕ ಘಟಿಕೋತ್ಸವ ಮಾ.31ರ ಗುರುವಾರ ಮಧ್ಯಾಹ್ನ 3 ಗಂಟೆಗೆ ಚಾಮುಂಡಿಬೆಟ್ಟ ರಸ್ತೆಯಲ್ಲಿರುವ ತಾವರೆಕಟ್ಟೆ ಬಳಿಯ ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಎಸ್‌ಡಿಎಂಐಎಂಡಿ ಶೈಕ್ಷಣಿಕ ಆಡಳಿತ ಮುಖ್ಯಸ್ಥ ಡಾ.ಎಂ.ವಿ.ಸುನಿಲ್ ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಘಟಿಕೋತ್ಸವ ಕುರಿತು ಮಾಹಿತಿ ನೀಡಿದ ಅವರು, ಸಂಸ್ಥೆಯ 181 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. ಐವರು ವಿದ್ಯಾರ್ಥಿನಿಯರು ಹಾಗೂ ನಾಲ್ಕು ಮಂದಿ ವಿದ್ಯಾರ್ಥಿಗಳು ಸೇರಿ ಒಟ್ಟು 9 ಮಂದಿಗೆ ಚಿನ್ನದ ಪದಕ ಪ್ರದಾನ ಮಾಡಲಾಗುವುದು ಎಂದರು.



ಪಂಕಜಂ ಶ್ರೀದೇವಿ

ಕಾಮನ್‌ವೆಲ್ತ್ ಬ್ಯಾಂಕ್ ಆಫ್ ಆಸ್ಟ್ರೇಲಿಯಾ (ಇಂಡಿಯಾ) ಆಡಳಿತ ನಿರ್ದೇಶಕಿ ಪಂಕಜಮ್ ಶ್ರೀದೇವಿ ಅವರು ಅಂದು ಘಟಿಕೋತ್ಸವ ಭಾಷಣ ಮಾಡಲಿದ್ದು, 2020–22ರ ಬ್ಯಾಚ್‌ನ ಅರ್ಹ ವಿದ್ಯಾರ್ಥಿಗಳಿಗೆ ವಿವಿಧ ವಿಶೇಷ ವಿಷಯಗಳಲ್ಲಿ ಉತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಿದ್ದಾರೆ. ಜೊತೆಗೆ ಒಟ್ಟಾರೆ ಅತ್ಯುತ್ತಮ ಶೈಕ್ಷಣಿಕ ಸಾಧನೆಗಾಗಿ ಅಧ್ಯಕ್ಷರ ಚಿನ್ನದ ಪದಕ ಹಾಗೂ ಒಟ್ಟಾರೆ ಅತ್ಯುತ್ತಮ ಸಾಧನೆಗಾಗಿ ಅಂಕುಶ್ ಗುಪ್ತಾ ಸ್ಮಾರಕ ಚಿನ್ನದ ಪದಕಗಳನ್ನು ಪ್ರದಾನ ಮಾಡಲಿದ್ದಾರೆ. ಸಂಸ್ಥೆಯ ಅಧ್ಯಕ್ಷರೂ ಆಗಿರುವ ಶ್ರೀ ಕ್ಷೇತ್ರ ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು. ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್. ಪರಶುರಾಮ್ ಇನ್ನಿತರರು ಭಾಗವಹಿಸುವರು ಎಂದು ತಿಳಿಸಿದರು.



ಮಂಗಳವಾರ ಮೈಸೂರಿಗೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಮುಡಾ ಸದಸ್ಯ ಕೆ.ಮಹದೇಶ್ ಇತರರು ಸ್ವಾಗತಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

30.03.2022 ಬುಧವಾರ, ಮಳೆ ನಕ್ಷತ್ರ: ಉಭಾ 18.03.2022ರಿಂದ 30.03.2022
ಶ್ರೀ ಪ್ಲವನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ
ತಿಥಿ: ತ್ರಯೋದಶಿ, ನಕ್ಷತ್ರ: ಶತಭಿಷ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್** : ಸಂಸ್ಕೃತಿ–2022, ವಿಶೇಷ ಕೈಮಗ್ಗ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10ರಿಂದ.
- **ಬಿಡುಗಡೆ ತಂಡ:** ತಿಳಿಹಾಸ್ಯದ ಎಳೆಗಳಿಂದ ಕೂಡಿದ 'ಜಾತಿ' ಕುರಿತ ವೈಚಾರಿಕ ಪ್ರಬಂಧ ಮಂಡಿಸುವವರು ಲೇಖಕ ಹೊರೆಯಾಲ ದೊರೆಸ್ವಾಮಿ, ಅಧ್ಯಕ್ಷತೆ: ಉಗ್ರನರಸಿಂಹೇಗೌಡ, ಸ್ಥಳ: ಚಿಂತನಕಟ್ಟೆ, ನೃಪತುಂಗ ಶಾಲಾ ಆವರಣ, ರಾಮಕೃಷ್ಣನಗರ, ಸಂಜೆ 4.30ರಿಂದ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ ವಸಾಹತು ಕಾಲದ ಕಾನೂನುಗಳು–ಬಾನುಲಿ ಸರಣಿ, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ–ಕೆ. ಶ್ರೇಯಾ, ಎಂ.ಎ. ಶೋಭಾ, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 7.15 ಪ್ರಾಯೋಜಿತ ಕಾರ್ಯಕ್ರಮ 'ಕೌಶಲ್ಯ ಕರ್ನಾಟಕ', ಪ್ರಾಯೋಜಕರು ರಾಜ್ಯ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ, 9.00 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 9.30 ಆಕಾಶವಾಣಿಯೊಂದಿಗೆ ಸ್ವಾತಂತ್ರ್ಯ ಚಳವಳಿಯ ಪಯಣ –ಬಾನುಲಿ ಸರಣಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.05 ವನಿತಾ ವಿಹಾರ, 12.30 ದೇವರನಾಮ, 12.45 ಜನಪದಸಂಗೀತ–ಜಯಲಕ್ಷ್ಮಮ್ಮ ಮತ್ತು ತಂಡ, 1.20 ಭಾವಗೀತೆ–ವಿದ್ವಾನ್ ನಟರಾಜ್, ಮಧುಲಿಕಾ ಶ್ರೀನಿವಾಸ್, ವೀಣಾ ಶ್ರೀನಿವಾಸ್, 3.00 ಲಯ ಸಂಭ್ರಮ–ತಾಳ, ಲಯ ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ–ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಮಹಿಳಾ ಪರ ಕಾನೂನು ಮತ್ತು ಹಕ್ಕುಗಳು ಕುರಿತು ಅಂಜಲಿರಾಮಣ್ಣ ಅವರೊಂದಿಗೆ ಸಂದರ್ಶನ. ಸಂದರ್ಶಕರು– ಅಬ್ದುಲ್ ರಶೀದ್, 4.30 ಚಟ್‌ಪಟ್ ಚುರುಮುರಿ, ಪ್ರಸ್ತುತಿ–ಪಿ.ಸಿ. ಮಳಿಮಠ್ ಮತ್ತು ಕೆ.ಬಿ.ಮೀನಾ, 4.45 ಹಿಂದಿ ಪಾಠ, ಪ್ರಸ್ತುತಿ–ವಿದ್ಯಾಕುಮಾರ್, 6.50ಕೃಷಿರಂಗ–ಕಿಸಾನ್‌ವಾಣಿ, 9.05 ಕ್ಷಿತಿಜ–Literacy ಗುರು, ಸಾಹಿತ್ಯ ದಿಗ್ಗಜರೊಂದಿಗೆ ಸಂವಾದ, 10.05 ನಿಖಿಲ್ ಬ್ಯಾನರ್ಜಿ–ಸಿತಾರ್ ವಾದನ, 10.30 ಸವಿನೆನಪು

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿಂದು

- **ಶ್ರೀ ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ:** ಬೆಳಗ್ಗೆ ಸಂಧಾನ ಲೀಲೋತ್ಸವ, ಅವಭೃತ ಸ್ನಾನ, ಸಂಜೆ ಉತ್ಸವ, ಫಣಿಮಾಲಾ ಪ್ರಬಂಧಸೇವೆ, ಪೂರ್ಣಾಹುತಿ, ಸ್ಥಳ: ದೇವಸ್ಥಾನ.

ಚಾಮುಂಡೇಶ್ವರಿ ಕ್ಷೇತ್ರದ ಗೊಂದಲಕ್ಕೆ ಸದ್ಯದಲ್ಲೇ ತೆರೆ

● ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ವಿಶ್ವಾಸ ● ಇನ್ನೊಂದು ವರ್ಷದಲ್ಲಿ ಏನು ಬದಲಾವಣೆ ಬೇಕಾದರೂ ಆಗಬಹುದು; ಯಾವ ವೈಯಕ್ತಿಕ ವಿಚಾರವನ್ನು ಯಾರೂ ಪ್ರಸ್ತಾಪಿಸದಿರಲು ನಿರ್ಧಾರ



ಮೈಸೂರಿನ ಹೂಟಗಳ್ಳಿಯಲ್ಲಿ ನಡೆದ ಜೆಡಿಎಸ್ 'ಯುವಪರ್ವ-2023' ಕಾರ್ಯಕ್ರಮದಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಯುವ ಜನತಾದಳದ ಅಧ್ಯಕ್ಷರಾಗಿ ನೇಮಕಗೊಂಡ ಸಂದೀಪ್‌ಗೆ ಪಕ್ಷದ ಬಾವುಟ ನೀಡುವ ಮೂಲಕ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಜವಬ್ದಾರಿ ವಹಿಸಿದರು. ಜೆಡಿಎಸ್‌ನ ಸ್ಥಳೀಯ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಮೈಸೂರು, ಮಾ.29 (ಎಂಕೆ)– ಚಾಮುಂಡೇಶ್ವರಿ ವಿಧಾನ ಸಭಾ ಕ್ಷೇತ್ರದಲ್ಲಿ ಕಳೆದೊಂದು ವರ್ಷದಿಂದ ಉಂಟಾಗಿರುವ ಗೊಂದಲಗಳಿಗೆ ತೆರೆ ಎಳೆಯುವ ದಿನ ದೂರವಿಲ್ಲ. 2023ರ ವಿಧಾನ ಸಭಾ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಯಾರೆಂಬುದನ್ನು ಪಕ್ಷದ ವರಿಷ್ಠರು, ಮುಖಂಡರು, ಕಾರ್ಯಕರ್ತರು ನಿರ್ಧರಿಸಲಿದ್ದಾರೆ ಎಂದು ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಮೈಸೂರಿನ ಹೂಟಗಳ್ಳಿಯ ಸರಸ್ವತಿ ಕಲ್ಯಾಣ ಮಂಟಪದಲ್ಲಿ ಚಾಮುಂಡೇಶ್ವರಿ ಕ್ಷೇತ್ರ ಯುವ ಜನತಾದಳದ ಸಭೆ(ಯುವಪರ್ವ–2023)ಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಇನ್ನೊಂದು ವರ್ಷದಲ್ಲಿ ವಿಧಾನ ಸಭೆ ಚುನಾವಣೆ ಇದೆ. ರಾಜಕೀಯದಲ್ಲಿ ಯಾವಾಗ, ಯಾವ ರೀತಿ ತಿರುವುಗಳಾಗುತ್ತವೆ ಎಂಬುದನ್ನು ಊಹಿಸುವುದು ಕಷ್ಟ. ಆದ್ದರಿಂದ ವೈಯಕ್ತಿಕವಾಗಿ ಯಾರ ಬಗ್ಗೆಯೂ ಮಾತನಾಡಬಾರದು ಎಂದು ತಿರ್ಮಾನಿಸಿದ್ದೇನೆ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯಾರೇ ಅಭ್ಯರ್ಥಿಯಾದರೂ ಪಕ್ಷದ ವರಿಷ್ಠರ ಜೊತೆಗೆ ಕಾರ್ಯಕರ್ತರು ಕೈ ಜೋಡಿಸುವಂತೆ ಮನವಿ ಮಾಡಿದರು.

ರಾಷ್ಟ್ರೀಯ ಪಕ್ಷಗಳಿಂದ ಎತ್ತಿಕಟ್ಟುವ ಕೆಲಸ: ದೇಶದಲ್ಲಿನ ಎರಡು ರಾಷ್ಟ್ರೀಯ ಪಕ್ಷಗಳು ಧರ್ಮ–ಧರ್ಮಗಳ ಮಧ್ಯೆ ಕಿಚ್ಚು ಹತ್ತಿಸಿ ತಮಾಷೆ ನೋಡುತ್ತಿವೆ. ಇದನ್ನು ತಡೆಯಬೇಕಾದರೆ ಜೆಡಿಎಸ್ ಅಧಿಕಾರಕ್ಕೆ ಬರಬೇಕು. ರೈತರ ಸಾಲ ಮನ್ನಾ ಮಾಡಿದ ಕುಮಾರಸ್ವಾಮಿಯವರು ಯಾವುದೇ ಧರ್ಮ, ಜಾತಿ ನೋಡಲಿಲ್ಲ ಎಂದರು.

ಜೆಡಿಎಸ್ ಸಧೃಡವಾಗಿದೆ: ಮೈಸೂರು ಭಾಗದಲ್ಲಿ ಜೆಡಿಎಸ್ ಸದೃಢವಾಗಿದೆ. ಕಾರ್ಯಕರ್ತರು ಜೆಡಿಎಸ್ ಮೇಲೆ ಅಪಾರ ನಂಬಿಕೆಯನ್ನಿಟ್ಟಿದ್ದಾರೆ ಎಂಬುದಕ್ಕೆ ಈ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಕಾರ್ಯಕ್ರಮಕ್ಕೆ ಬರುವುದಕ್ಕೂ ಮುನ್ನ ಕಾರ್ಯಕ್ರಮಕ್ಕೆ ಕಡಿಮೆ ಜನರು ಬರಬಹುದು ಎಂದುಕೊಂಡಿದ್ದೆ. ಆದರೆ ಇಷ್ಟೊಂದು ಜನ ಸಮೂಹ ಸೇರುತ್ತೆ ಎಂದುಕೊಂಡಿರಲಿಲ್ಲ. ಕಾರ್ಯಕ್ರಮ ಸಂಪೂರ್ಣ ಯಶಸ್ವಿಯಾಗಿದೆ ಎಂದರು.

ಸದ್ಯದಲ್ಲಿಯೇ 'ಜಲಧಾರೆ' ಕಾರ್ಯಕ್ರಮಕ್ಕೆ ಮಾಜಿ ಸಿಎಂ ಕುಮಾರಸ್ವಾಮಿಯವರು ಚಾಲನೆ ನೀಡಲಿದ್ದಾರೆ. ವಿಷಯಾಧಾರಿತ ರಾಜಕಾರಣ ಮಾಡಬೇಕಾಗಿದ್ದು, 'ಪಂಚರತ್ನ' ಎಂಬ ಐದು ಕಾರ್ಯಕ್ರಮ ಹಮ್ಮಿಕೊಳ್ಳಲು ಸಿದ್ದತೆ ನಡೆಸಲಾಗಿದೆ. ಇವೆಲ್ಲಾ ಯೋಜನೆಗಳು ಸಾಕಾರಗೊಳ್ಳಬೇಕಾದರೆ ಜೆಡಿಎಸ್ ಪಕ್ಷ ಅಧಿಕಾರಕ್ಕೆ ಬರಬೇಕು. ಈ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಕರೆ ನೀಡಿದರು. ಯುವಕರು ಸೇರಿ ಪಕ್ಷವನ್ನು ಕಟ್ಟಿ ಬೆಳೆಸಬೇಕಾಗಿದೆ. ಪದಗ್ರಹಣ ಮಾಡುವುದರಿಂದ ಪಕ್ಷದ ಸಂಘಟನೆಯಾಗುವುದಿಲ್ಲ. ನಮಗೆ ಪಕ್ಷವೇನು ಕೊಟ್ಟಿದೆ ಎಂಬುದಕ್ಕಿಂತ ಪಕ್ಷಕ್ಕೆ ನಾವು ಏನು ಕೊಡುತ್ತಿದ್ದೇವೆ ಎಂಬುದು ಮುಖ್ಯ. ನಮ್ಮದು ರಾಷ್ಟ್ರೀಯ ಪಕ್ಷವಲ್ಲ. ರೈತರ, ಬಡವರ ಪಕ್ಷ. ಕುಮಾರಸ್ವಾಮಿಯವರ ತಾಯಿ ಹೃದಯವನ್ನು ಅರ್ಥ ಮಾಡಿಕೊಂಡು ಅವರಿಗೆ ಬೆಂಬಲ ನೀಡಿ ಎಂದು ಕೋರಿದರು.

ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಬೇಕು...

ಕಾರ್ಯಕ್ರಮದ ವೇಳೆ ಸ್ವಾಗತ ಭಾಷಣ ಮಾಡಿದ ಮಾವಿನಹಳ್ಳಿ ಸಿದ್ದೇಗೌಡ, ಜೆಡಿಎಸ್ ಪಕ್ಷ ಯಾರೊಬ್ಬರ ಕೈಯಲ್ಲಿಯೂ ಇಲ್ಲ. ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ತನ್ನದೇ ಆದ ಅಸ್ತಿತ್ವ ಹೊಂದಿದೆ. ಹೀಗಾಗಿ ನಿಖಿಲ್ ಕುಮಾರಸ್ವಾಮಿ ಅವರು ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಸ್ಪರ್ಧಿಸಬೇಕು. ಕಳೆದ ಬಾರಿ 35 ಸಾವಿರ ಮತಗಳಿಂದ ಜೆಡಿಎಸ್ ಅಭ್ಯರ್ಥಿ ಗೆಲ್ಲಿಸಿದಂತೆ ನಿಖಿಲ್ ಕುಮಾರಸ್ವಾಮಿಯವರು ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ಪರ್ಧಿಸಿದರೆ 75 ಸಾವಿರ ಮತಗಳಿಂದ ಅವರನ್ನು ಗೆಲ್ಲಿಸುತ್ತೇವೆ ಎಂದು ಹೇಳುತ್ತಿದ್ದಂತೆ ನಿಖಿಲ್ ಕುಮಾರಸ್ವಾಮಿ ಚಾಮುಂಡೇಶ್ವರಿ ಕ್ಷೇತ್ರದಿಂದಲೇ ಸ್ಪರ್ಧಿಸಬೇಕು ಎಂದು ಕಾರ್ಯಕರ್ತರು ದನಿಗೂಡಿಸಿದರು.

ಶಕ್ತಿ ಪ್ರದರ್ಶನವಲ್ಲ, ಪಕ್ಷ ಸಂಘಟನೆಯಷ್ಟೇ...

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಯುವಜನತಾದಳ ಕಾರ್ಯಕ್ರಮ ಆಯೋಜನೆ ಮಾಡಿರುವುದು ಶಕ್ತಿ ಪ್ರದರ್ಶನಕ್ಕಲ್ಲ, ಪಕ್ಷ ಸಂಘಟನೆಗೆ. ವಿಧಾನ ಸಭಾ ಚುನಾವಣೆಗೆ ಇನ್ನೂ ಒಂದು ವರ್ಷವಿದ್ದು, ಇರುವ ಸಣ್ಣ–ಪುಟ್ಟ ಗೊಂದಲಗಳನ್ನು ಸರಿಪಡಿಸುತ್ತೇವೆಯೇ ಹೊರತು ದೊಡ್ಡದಾಗಿ ಮಾಡುವುದಿಲ್ಲ ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಯುವ ಜನತಾದಳದ ಸಭೆಗೂ ಮುನ್ನ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಒಂದು ಮನೆಯಲ್ಲಿ ಇರುವ ಹಲವು ಗೊಂದಲಗಳಂತೆ ಪಕ್ಷದಲ್ಲಿಯೂ ಗೊಂದಲಗಳಿರುವುದು ಸಹಜ. ಜಿ.ಟಿ.ದೇವೇಗೌಡರು ಹಾಗೂ ಅವರ ಮಗ ಹರೀಶ್‌ಗೌಡರ ಮೇಲೆ ಅಪಾರ ಗೌರವವಿದೆ. ಜಿ.ಟಿ.ದೇವೇಗೌಡರು ಶಾಸಕರಾಗಿ ಆಯ್ಕೆಯಾಗಿರುವುದು ಜೆಡಿಎಸ್ ಪಕ್ಷದ ಚಿಹ್ನೆಯಿಂದ. ಹಾಗಾಗಿ ನಮ್ಮಲ್ಲಿ ಯಾವುದೇ ಗೊಂದಲವಿಲ್ಲ ಎಂದು ಹೇಳಿದರು.

ಪದಗ್ರಹಣ: ಯುವ ಜನತಾದಳ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷರಾಗಿ ನೇಮಕಗೊಂಡ ಸಂದೀಪ್‌ಗೆ ಅಧಿಕಾರ ಹಸ್ತಾಂತರಿಸಿ, ಇನ್ನಿತರೆ ಪದಾಧಿಕಾರಿಗಳನ್ನು ಅಭಿನಂದಿಸಲಾಯಿತು. ಜಿಲ್ಲಾಧ್ಯಕ್ಷ ನರಸಿಂಹಮೂರ್ತಿ, ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಬೀರಿಹುಂಡಿ ಬಸವಣ್ಣ, ಯುವ ಜನತಾದಳದ ಜಿಲ್ಲಾಧ್ಯಕ್ಷ ಗಂಗಾಧರಗೌಡ, ಮುಖಂಡರಾದ ಬೆಳವಾಡಿ ಶಿವಮೂರ್ತಿ, ಕೆಂಪನಾಯ್ಕ, ಮಾದೇಗೌಡ, ದಣಿ ಕುಮಾರ್, ಪಾಲಿಕೆ ಸದಸ್ಯರಾದ ಎಸ್.ಬಿ.ಎಂ. ಮಂಜು, ಪ್ರೇಮಾ ಶಂಕರೇಗೌಡ, ಶೋಭಾ ಮೋಹನ್, ಯುವ ಮುಖಂಡ ಹೆಚ್.ಕೆ.ಪ್ರದೀಪ್ ಇನ್ನಿತರರಿದ್ದರು.


ಮತ್ತೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ

ನವದೆಹಲಿ,ಮಾ.29–ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಸತತ ಏರಿಕೆಯಾಗುತ್ತಲೇ ಇದೆ. ಮಂಗಳವಾರ ಸಹ ಪೆಟ್ರೋಲ್ ದರ ಲೀಟರ್‌ಗೆ 80 ಪೈಸೆ ಮತ್ತು ಡೀಸೆಲ್ ದರ ಲೀಟರ್‌ಗೆ 70 ಪೈಸೆ ಹೆಚ್ಚಳವಾಗಿದೆ. ಈ ಮೂಲಕ ಕಳೆದ 8 ದಿನಗಳಲ್ಲಿ 7 ಬಾರಿ ಇಂಧನ ಬೆಲೆ ಏರಿಕೆ ಕಂಡಿದೆ. ದೆಹಲಿಯಲ್ಲಿ 1 ಲೀಟರ್ ಪೆಟ್ರೋಲ್ ದರ 100.21 ರೂ., ಡೀಸೆಲ್ ಬೆಲೆ 91.47 ರೂ.ಗೆ ತಲುಪಿದೆ.

ಮುಂಬೈನಲ್ಲಿ ಲೀಟರ್ ಪೆಟ್ರೋಲ್ ಬೆಲೆ 85 ಪೈಸೆ ಹೆಚ್ಚಳ ಮಾಡಲಾಗಿದ್ದು, ಡೀಸೆಲ್ ಬೆಲೆ 70 ಪೈಸೆ ಹೆಚ್ಚಳವಾಗಿದೆ. ಮುಂಬೈಯಲ್ಲಿ ಲೀಟರ್ ಪೆಟ್ರೋಲ್ 115.04 ರೂ. ಹಾಗೂ ಡೀಸೆಲ್ 99.25 ರೂ. ಆಗಿದೆ. ಚೆನ್ನೈನಲ್ಲಿ ಪೆಟ್ರೋಲ್ ಬೆಲೆ ರೂ 105.94 (76 ಪೈಸೆ) ಮತ್ತು ಡೀಸೆಲ್ ಬೆಲೆ 96 ರೂ (67 ಪೈಸೆ) ಮತ್ತು ಕೋಲ್ಕತ್ತಾದಲ್ಲಿ ಪೆಟ್ರೋಲ್ ಬೆಲೆ ರೂ 109.68 (83 ಪೈಸೆ ಹೆಚ್ಚಳ) ಮತ್ತು ಡೀಸೆಲ್ ಬೆಲೆ ರೂ 94.62 (ಹೆಚ್ಚಳ) 70 ಪೈಸೆ ಹೆಚ್ಚಿಸಲಾಗಿದೆ. ಬೆಂಗಳೂರಿನಲ್ಲಿ ಇಂದು ಲೀಟರ್ ಇಂದು ಪೆಟ್ರೋಲ್ ಬೆಲೆ 104.78 ರೂ.ಗಳಾಗಿದ್ದು, ಲೀಟರ್ ಡೀಸೆಲ್ ಬೆಲೆ 89.72 ರೂ.ಗಳಾಗಿದೆ. ಉತ್ತರ ಪ್ರದೇಶ, ಪಂಜಾಬ್ ಸೇರಿದಂತೆ ಪಂಚ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆಗೆ ಮುನ್ನ ನ.4ರಿಂದ ಇಂಧನ ಬೆಲೆಗಳು ಸ್ಥಗಿತಗೊಂಡಿದ್ದವು. ಈ ಅವಧಿಯಲ್ಲಿ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ ಸುಮಾರು USD 30ರಷ್ಟು ಏರಿಕೆಯಾಗಿದೆ. ಮಾ.10 ರಂದು ಮತ ಎಣಿಕೆ. ನಂತರ ದರ ಪರಿಷ್ಕರಣೆ ನಿರೀಕ್ಷಿಸಲಾಗಿತ್ತು ಆದರೆ ಅದನ್ನು ಒಂದೆರಡು ವಾರಗಳವರೆಗೆ ಮುಂದೂಡಲಾಗಿತ್ತು.

ಫೆಡೆಕ್ಸ್‌ಗೆ ಭಾರತೀಯ ಅಮೆರಿಕನ್ ರಾಜ್ ಸುಬ್ರಮಣ್ಯಂ ನೇಮಕ

ನ್ಯೂಯಾರ್ಕ್, ಮಾ.29– ಅಮೆರಿಕದ ಬಹುರಾಷ್ಟ್ರೀಯ ಕೊರಿಯರ್ ಪೂರೈಕೆ ದೈತ್ಯ ಕಂಪೆನಿ ಫೆಡೆಕ್ಸ್‌ನ ನೂತನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿ ಭಾರತೀಯ ಮೂಲದ ಅಮೆರಿಕನ್ ರಾಜ್ ಸುಬ್ರಹ್ಮಣ್ಯಂ ನೇಮಕಗೊಂಡಿದ್ದಾರೆ.



ಈಗಿನ ಅಧಿಕಾರಿ ಫ್ರೆಡೆರಿಕ್ ಡಬ್ಲ್ಯೂ ಸ್ಮಿತ್ ಅವರು ಜೂನ್ 1ರಂದು ಸಿಇಒ ಸ್ಥಾನದಿಂದ ಕೆಳಗಿಳಿಯಲಿದ್ದು, ಅವರ ಸ್ಥಾನಕ್ಕೆ ರಾಜ್ ಸುಬ್ರಮಣಿಯನ್ ನೇಮಕಗೊಂಡಿದ್ದಾರೆ. ಸದ್ಯ ಸುಬ್ರಹ್ಮಣ್ಯಂ ಕಾರ್ಯಾಧ್ಯಕ್ಷರಾಗಿರುತ್ತಾರೆ. ಮುಂದೆ ನನ್ನ ಸ್ಥಾನವನ್ನು ರಾಜ್ ಸುಬ್ರಹ್ಮಣ್ಯಂ ವಹಿಸಿಕೊಳ್ಳಲಿದ್ದಾರೆ ಎಂದು ಹೇಳಲು ಹರ್ಷವಾಗುತ್ತಿದೆ ಎಂದು ಫ್ರೆಡೆರಿಕ್ ಡಬ್ಲ್ಯೂ ಸ್ಮಿತ್ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸುಸ್ಥಿರತೆ, ನಾವೀನ್ಯತೆ ಮತ್ತು ಸಾರ್ವಜನಿಕ ನೀತಿ ಸೇರಿದಂತೆ ಮಂಡಳಿಯ ಆಡಳಿತ ಮತ್ತು ಜಾಗತಿಕ ಪ್ರಾಮುಖ್ಯತೆಯ ವಿಷಯಗಳ ಮೇಲೆ ಕೇಂದ್ರೀಕರಿಸಲು ಎದುರು ನೋಡುತ್ತಿರುವೆ ಎಂದು ಫ್ರೆಡೆರಿಕ್ ತಿಳಿಸಿದ್ದಾರೆ. ಸ್ಮಿತ್ 1971 ರಲ್ಲಿ ಫೆಡೆಕ್ಸ್ ಅನ್ನು ಸ್ಥಾಪಿಸಿದರು. ಫ್ರೆಡ್ ಒಬ್ಬ ದಾರ್ಶನಿಕ ನಾಯಕ ಮತ್ತು ವ್ಯಾಪಾರ ಪ್ರಪಂಚದ ದಂತಕಥೆ. ಅವರು ವಿಶ್ವದ ಶ್ರೇಷ್ಠ ಮತ್ತು ಅತ್ಯಂತ ಮೆಚ್ಚುಗೆ ಪಡೆದ ಕಂಪನಿಗಳಲ್ಲಿ ಒಂದನ್ನು ಸ್ಥಾಪಿಸಿದರು. ಈ ಪಯಣದಲ್ಲಿ ಅವರ ಜೊತೆ ಹೆಜ್ಜೆ ಹಾಕಲು ಮತ್ತು ಅವರು ರಚಿಸಿದ ಕಂಪೆನಿಯನ್ನು ಮುನ್ನಡೆಸಿಕೊಂಡು ಹೋಗುವುದು ನನ್ನ ಗೌರವ ಮತ್ತು ಅದೃಷ್ಟ ಎಂದು ಭಾವಿಸುತ್ತೇನೆ ಎಂದು ಸುಬ್ರಮಣ್ಯಂ ಫೆಡೆಕ್ಸ್ ನೀಡಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಮಿತ್ರ

43ನೇ ವಾರ್ಷಿಕೋತ್ಸವ ಕಥಾ ಸ್ಪರ್ಧೆ

'ಮೈಸೂರು ಮಿತ್ರ' ಪ್ರಾದೇಶಿಕ ದಿನ ಪತ್ರಿಕೆ 42 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿ 43ನೇ ವರ್ಷಕ್ಕೆ ಪಾದಾರ್ಪಣೆಗೈಯ್ಯುವ ಈ ಸುಸಂದರ್ಭದಲ್ಲಿ 16-04-2022 (ಶನಿವಾರ)ರಂದು ವರ್ಣರಂಜಿತ ಆಕರ್ಷಕ ವಿಶೇಷಾಂಕವನ್ನು ಹೊರತರಲಾಗುವುದು. ಇದರ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯೂ ಕಥಾ ಸ್ಪರ್ಧೆ ಏರ್ಪಡಿಸಲಾಗಿದೆ. 'ಮೈಸೂರು ಮಿತ್ರ' ಪ್ರಸರಣ ಹೊಂದಿರುವ ಐದು ಜಿಲ್ಲೆಗಳ (ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಮತ್ತು ಹಾಸನ) ಪ್ರತಿಭಾವಂತ ಕಥೆಗಾರರನ್ನು ಬೆಳಕಿಗೆ ತರುವುದು ಈ ಸ್ಪರ್ಧೆಯ ಮೂಲ ಉದ್ದೇಶ.

ಉತ್ತಮವಾದ ಐದು ಕಥೆಗಳಿಗೆ ನಗದು ಬಹುಮಾನ

- ಪ್ರಥಮ ಬಹುಮಾನ : ರೂ. 6,000
- ದ್ವಿತೀಯ ಬಹುಮಾನ : ರೂ. 5,000
- ತೃತೀಯ ಬಹುಮಾನ : ರೂ. 4,000
- ಪ್ರೋತ್ಸಾಹಕ ಬಹುಮಾನಗಳು (ಎರಡು) : ರೂ. 2,500

ಸ್ಪರ್ಧೆಯ ನಿಯಮಗಳು

- ಒಬ್ಬರು ಒಂದೇ ಕಥೆಯನ್ನು ಕಳುಹಿಸಬೇಕು.
- ಕಥೆಯನ್ನು ಕಂಪ್ಯೂಟರ್‌ನಲ್ಲಿ ಟೈಪ್ ಮಾಡಿ news@mysurumithra.com ಇ-ಮೇಲ್ ಮಾಡಬಹುದು. ಇಲ್ಲವೆ ಅಂಚೆ ಮೂಲಕವೂ ಕಳಿಸಬಹುದು. ಕಥೆ ಐದು ಪುಟಗಳನ್ನು (ಒಂದೇ ಮಗ್ಗುಲು) ಮೀರದಂತಿರಬೇಕು. ಅನುವಾದ-ರೂಪಾಂತರಗಳನ್ನು ಪರಿಗಣಿಸುವುದಿಲ್ಲ.
- ಸ್ಪರ್ಧಿಗಳು ಕಥೆಯ ಶಿರೋನಾಮೆ, ತಮ್ಮ ಹೆಸರು-ವಿಳಾಸ, ಪಾಸ್‌ಪೋರ್ಟ್ ಸೈಜಿನ ಭಾವಚಿತ್ರ ಮತ್ತು ಕಿರು ಪರಿಚಯವನ್ನು ಪ್ರತ್ಯೇಕ ಹಾಳೆಯಲ್ಲಿ ಸ್ಪುಟವಾಗಿ ಬರೆದು ಕಥೆಯೊಡನೆ ಲಗತ್ತಿಸಬೇಕು.
- ಸ್ಪರ್ಧೆಗೆ ಕಳುಹಿಸಲಾಗುವ ಕಥೆ ಈಗಾಗಲೇ ಬೇರೆಲ್ಲೂ ಪ್ರಕಟವಾಗಿರಕೂಡದು.
- ತೀರ್ಪುಗಾರರ ಮಂಡಳಿಯ ತೀರ್ಮಾನವೇ ಅಂತಿಮವಾದುದು. ಪ್ರಥಮ ಬಹುಮಾನಿತ ಕಥೆಯನ್ನು ವಿಶೇಷಾಂಕದಲ್ಲಿಯೂ, ಇತರ ಬಹುಮಾನ ಪಡೆದ ಕಥೆಗಳನ್ನು ಯಥಾವಕಾಶ 'ವಾರದ ಮಿತ್ರ' ಸಾಪ್ತಾಹಿಕ ಪುರವಣಿಯಲ್ಲಿಯೂ ಪ್ರಕಟಿಸಲಾಗುವುದು.
- ಬಹುಮಾನಿತ ಕಥೆಗಳ ಸಂಪೂರ್ಣ ಸ್ವಾಮ್ಯ 'ಮೈಸೂರು ಮಿತ್ರ'ನಿಗೆ ಸೇರಿದ್ದು.
- ಅಂಚೆಯಲ್ಲಿ ಕಥೆಗಳು ಸೂಕ್ತ ಸಮಯಕ್ಕೆ ತಲುಪದಿದ್ದಲ್ಲಿ 'ಮೈಸೂರು ಮಿತ್ರ' ಜವಾಬ್ದಾರಿಯಲ್ಲ ಮತ್ತು ಕಥೆಗಳನ್ನು ಯಾವ ಕಾರಣಕ್ಕೂ ಹಿಂತಿರುಗಿಸಲಾಗುವುದಿಲ್ಲ. ಆದ್ದರಿಂದ ಸ್ಪರ್ಧಿಗಳು ಕಥೆಯ ಒಂದು ಪ್ರತಿಯನ್ನು ತಮ್ಮ ಬಳಿ ಇರಿಸಿಕೊಳ್ಳುವುದೊಳಿತು.
- ಈ ನಿಯಮಾವಳಿಯನ್ನು ಪಾಲಿಸದ ಕಥೆಗಳನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿ ಪ್ರಭಾವ ಬೀರುವುದನ್ನು ಅನರ್ಹತೆ ಎಂದು ಪರಿಗಣಿಸಲಾಗುವುದು.

ವಿ.ಸೂ.: 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ದಿನ ಪತ್ರಿಕೆಗಳ ಉದ್ಯೋಗಿಗಳು ಹಾಗೂ ಅವರ ಸಂಬಂಧಿಗಳು ಸ್ಪರ್ಧೆಯಲ್ಲಿ ಭಾಗವಹಿಸುವಂತಿಲ್ಲ.

ಕಥೆ ನಮ್ಮ ಕೈಸೇರಲು ಕೊನೆಯ ದಿನಾಂಕ 31-03-2022

ವಿಳಾಸ: ಸಂಪಾದಕರು, 'ಮೈಸೂರು ಮಿತ್ರ' ವಾರ್ಷಿಕ ವಿಶೇಷಾಂಕ
ಇಂಡಸ್ಟ್ರಿಯಲ್ 'ಎ' ಲೇಔಟ್, ಬನ್ನಿಮಂಟಪ, ಮೈಸೂರು–570 015
ದೂರವಾಣಿ: 2496520, 2496521, 2496526, 2496527

ನಕ್ಕರೆ ಅದೇ ಸ್ವರ್ಗ

ಕೆಲಸದಾಕೆ : "ಅಮ್ಮಾವ್ರೇ, ನಾನು ನಾಳೆಯಿಂದ ನಿಮ್ಮ ಮನೆ ಕೆಲಸಕ್ಕೆ ಬರೋದಿಲ್ಲ"
ಯಜಮಾನಿ : "ಯಾಕೆ, ಏನಾಯಿತು?"
ಕೆಲಸದಾಕೆ : "ನನಗೆ ಹುಚ್ಚಾಸ್ಪತ್ರೇಲಿ ಕೆಲ್ಸಸಿಕ್ತು"
ಯಜಮಾನಿ : ಅಲ್ಲಿ ಕೆಲಸ ಮಾಡಲು ಅನುಭವ ಬೇಕು"
ಕೆಲಸದಾಕೆ : "ನಿಮ್ಮನೇಲಿ ನಾಲ್ಕು ವರ್ಷ ಕೆಲಸ ಮಾಡಿದ್ದೀನಲ್ಲ? ಆ ಅನುಭವನೇ ಬೇಕಾದಷ್ಟು !"

ಮೈಸೂರು ಮಿತ್ರ

ಬುಧವಾರ, 30 ಮಾರ್ಚ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಒಂದೇ ವಿಚಾರವನ್ನು ಯಾವಾಗಲೂ ಯೋಚಿಸುತ್ತಿರುವವನು ಖಂಡಿತವಾಗಿಯೂ ಅವನ ಬುದ್ಧಿಯ ಸಮತೂಕವನ್ನು ಕಳೆದುಕೊಳ್ಳುತ್ತಾನೆ. –ನೆಪೋಲಿಯನ್ ಹಿಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಅಣ್ಣೇಸೊಪ್ಪು ತಿನ್ನೋಕು ಪುಣ್ಯ ಬೇಕು.

ನಿಮ್ಮ ಪತ್ರಗಳು

ಮೈಸೂರಿನ ರಸ್ತೆಗಳ ಸ್ಥಿತಿ ಅಧೋಗತಿ



ಮಾನ್ಯರೆ,

ಮೈಸೂರು ನಗರದ ಶೇ.80 ರಷ್ಟು ಭಾಗದ ರಸ್ತೆಗಳು ವಾಹನಗಳು ಚಲಾಯಿಸಲಾಗದಂತಹ, ಕೆಲವು ಕಡೆ ನಡೆದಾಡಲೂ ಆಗದಂತಹ ಅಧೋಗತಿಗೆ ತಲುಪಿದೆ. ನಮ್ಮ ಮಹಾ(?) ಪಾಲಿಕೆಗೆ ರಸ್ತೆ ದುರಸ್ತಿ ಮಾಡುವ ನೆನಪಾಗುವುದು ಮಳೆಗಾಲ ಪ್ರಾರಂಭವಾದಾಗ ಅಥವಾ ದಸರಾ ಸಮಯದಲ್ಲಿ ಮಾತ್ರ. ಅವರು ಲಾಗಾಯ್ತಿನಿಂದಲೂ ಕಲಿತ 'ಹೀನ ಚಾಳಿ'ಯಂತೆ ದಸರಾ ಹಬ್ಬಕ್ಕೆ ಕಾಯುತ್ತಿರುವುದು ಏಕೆಂದರೆ, ಅವರಿಗೆ ಹಾಗೂ ಗುತ್ತಿಗೆದಾರರಿಗೆ ಹಾಗೆ ಮಾಡಿದಾಗ ಮಾತ್ರ "ಗಿಟ್ಟು"ವುದು ಎಂಬ ನಗ್ನ ಸತ್ಯ ಈಗ ಗುಟ್ಟಾಗಿ ಉಳಿದಿಲ್ಲ.

ಬಡ ತೆರಿಗೆದಾರ ಸರ್ಕಾರ ಮತ್ತು ಪಾಲಿಕೆ ಎಂಬ "ಡಬಲ್ ಎಡ್ಜ್ ಬ್ಲೇಡ್" ಹೇರುವ ಲಂಗು ಲಗಾಮು ಇಲ್ಲದ ನೂರಾರು ತರಹದ ತೆರಿಗೆಗಳನ್ನು ಹಿಡಿ ಶಾಪ ಹಾಕುತ್ತಾ ಬೇಸತ್ತುಕೊಂಡು ಕಟ್ಟುತ್ತಲೇ ಬರುತ್ತಿದ್ದಾರೆ. ಸಾರ್ವಜನಿಕರು ಇದರ ಬಗ್ಗೆ ಪತ್ರಿಕೆಗಳಲ್ಲಿ ಫೋಟೋ ಸಮೇತ ಅತ್ಯಂತ ಹೀನಾಯವಾಗಿ ಟೀಕಿಸಿ ಬರೆದರೂ "ಮೂರ್ಖನಿಗೆ ನೂರ್ಕಾಲ ಬುದ್ಧಿ ಹೇಳಿದರೆ ಘೋರ್ಕಲ್ಲ ಮೇಲೆ ಮಳೆ ಸುರಿದಂತೆ" ಎಂಬ ಸರ್ವಜ್ಞನ ವಚನವನ್ನು ಶಿರಸಾವಹಿಸಿ ಕೊಂಡು ಬರುತ್ತಿದ್ದಾರೆ.

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ, ಮೈಸೂರು.

ಮೈಸೂರು ಎಂಬ ಸಾಂಸ್ಕೃತಿಕ ರಾಜಧಾನಿ

ಮಾನ್ಯರೆ,

'ಭೂಮಿ ಮೇಲೆ ಹುಟ್ಟಿದ ಮೇಲೆ ಏನೇನು ಕಂಡೆ ಸಾಯೋದರೊಳಗೆ ಒಮ್ಮೆ ನೋಡು ಜೋಗದ ಗುಂಡಿ' ಮೂಗೂರು ಮಲ್ಲಪ್ಪ ಬರೆದಿರುವ ಈ ಸಾಲಿನಂತೆ ಸಾಯೋದೊಳಗೆ ಮೈಸೂರನ್ನು ನೋಡಬೇಕು. ಇಲ್ಲವಾದರೆ ಜಗತ್ತಿನ ಅತ್ಯಂತ ಸುಂದರ ಅನುಭವನ್ನು ಸವಿದಂತಾಗುವುದಿಲ್ಲ.

ಮೈಸೂರು ಕರ್ನಾಟಕ ಮತ್ತು ವಿಶ್ವದಲ್ಲೇ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿದೆ. ಮೈಸೂರು ದಸರಾ ಜಗತ್ತಿನೆಲ್ಲೆಡೆ ಹೆಸರುವಾಸಿಯಾಗಿದೆ. 'ಗಂಗಾ ಸ್ನಾನ ತುಂಗಾ ಪಾನ' ಎಂಬ ಗಾದೆಯಂತೆ ದಸರಾದ ಸೊಬಗು ನೋಡಿದವರಿಗೆ ಗೊತ್ತಿರುತ್ತದೆ. ದಸರೆಯ ಸಮಯದಲ್ಲಿ ಸಂಪೂರ್ಣ ಮೈಸೂರು ಮದುವಣಗಿತ್ತಿಯಂತೆ ಸಿಂಗಾರಗೊಂಡಿರುತ್ತದೆ.

ದಸರಾ ರಜೆಯೆಂದೇ ಶಾಲೆಗಳಲ್ಲಿ ಮಕ್ಕಳಿಗೆ ರಜೆ ನೀಡಲಾಗುತ್ತಿದೆ. ದಸರೆಯ ಸಮಯದಲ್ಲಿ ಮೈಸೂರಿನ ಪ್ರತಿಯೊಂದು ಮನೆಯು ಸಹ ತುಂಬಿ ತುಳುಕುತ್ತಿರುತ್ತದೆ. ದೂರದಿಂದ ಬಂದ ನೆಂಟರುಗಳನ್ನು ವಿಶ್ವಾಸದಿಂದ ಸ್ವಾಗತಿಸುವ ಹೃದಯ ಶ್ರೀಮಂತಿಕೆಯ ಜನ ಮೈಸೂರಿನವರು.

ಮೈಸೂರು ಹಲವಾರು ವಿಶೇಷಗಳ ತವರು, ಮೈಸೂರಿನ ಮಲ್ಲಿಗೆ, ಮೈಸೂರು ಪಾಕ್, ಮೈಸೂರು ಸ್ಯಾಂಡಲ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಮೈಸೂರಿನ ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ಮೈಸೂರು ವಿಶ್ವವಿದ್ಯಾನಿಲಯ, ಕೃಷ್ಣರಾಜಸಾಗರ ಅಣೆಕಟ್ಟು, ಬಲಮುರಿ, ಎಡಮುರಿ ಹೀಗೆ ಪಟ್ಟಿ ಬೆಳೆಯುತ್ತ ಹೋಗುತ್ತದೆ.

ಮೈಸೂರು 2015–16 ಸಾಲಿನಲ್ಲಿ ಭಾರತದ ಅತ್ಯಂತ ಸ್ವಚ್ಛ ನಗರವೆಂದು ಹೆಸರುಗಳಿಸಿತ್ತು. ವಿಶಾಲವಾದ ರಸ್ತೆಗಳು, ರಸ್ತೆಗಳ ಇಕ್ಕೆಲಗಳಲ್ಲಿ ಬೃಹದಾಕಾರದ ಮರಗಳು ಪಾದಚಾರಿಗಳಿಗೆ ನೆರಳನ್ನು ಒದಗಿಸುತ್ತವೆ. ಮೈಸೂರಿನ ನಾಗರಿಕರು ಅತ್ಯಂತ ಸುಸಂಸ್ಕೃತರು, ಮೈಸೂರಿಗೆ ಬಂದ ಜನಗಳಿಗೆ ಮಾರ್ಗದರ್ಶನ ಮಾಡುವಲ್ಲಿ ಎತ್ತಿದ ಕೈ. ಮೈಸೂರಿಗೆ ಭೇಟಿ ನೀಡಿದರೆ ವಿಶಿಷ್ಟವಾದ, ಜೀವನದಲ್ಲಿ ಎಂದೂ ಮರೆಯದ ಅನುಭವ ನಮ್ಮದಾಗುತ್ತದೆ.

–ರಾಸುಮ ಭಟ್, ಚಿಕ್ಕಮಗಳೂರು.

ಬೇಸಿಗೆಯಲ್ಲಿ ಪ್ರಾಣಿ–ಪಕ್ಷಿಗಳ ದಾಹ ನೀಗಿಸಲು ಮುಂದಾಗೋಣ

ಮಾನ್ಯರೆ,

ಮನುಷ್ಯನ ಸಹ ಜೀವಿಯಂತಿರುವ ಪ್ರಾಣಿ–ಪಕ್ಷಿಗಳ ಬಗ್ಗೆ ನಮಗೆ ಸ್ವಲ್ಪವಾದರೂ ಕಾಳಜಿಯಿರಬೇಕು. ಅದು ನಮ್ಮಿಂದ ಆಗುತ್ತಿಲ್ಲದ ಕಾರಣ ಪರಿಸರದಲ್ಲಿಂದು ಅಸಮತೋಲನತೆ ಉಂಟಾಗಿ ಕಾಡಿನಲ್ಲಿರುವ ಪ್ರಾಣಿ–ಪಕ್ಷಿಗಳಿಂದು ನಾಡಿಗೆ ಬರುತ್ತಿವೆ. ಮಳೆಯಿಲ್ಲದೆ ನೀರಿಗಾಗಿ ನಾವೆಲ್ಲರೂ ಏನೆಲ್ಲಾ ಪ್ರಯತ್ನ ನಡೆಸಿ ನೀರಿಲ್ಲದೆ ಬದುಕುವುದು ಎಷ್ಟು ಕಷ್ಟವೆಂದು ಈಗಾಗಲೇ ಅರಿತಿದ್ದೇವೆ. ಆದರೆ ನಮ್ಮಂತೆಯೇ ಪ್ರಾಣಿ–ಪಕ್ಷಿಗಳು ಎಂದು ನಾವು ತಿಳಿಯುತ್ತಿಲ್ಲ. ಬೇಸಿಗೆ ಬಂದರೆ ಸಾಕು ಕೆರೆಗಳಲ್ಲಿ ಹಾಗೂ ಮುಂತಾದ ಕಡೆಗಳಲ್ಲಿ ನೀರು ಸಿಗುವುದಿಲ್ಲ. ಮತ್ತು ಮರ–ಗಿಡಗಳನ್ನು ಮನುಷ್ಯ ಇತ್ತೀಚಿನ ದಿನಗಳಲ್ಲಿ ತನ್ನ ಆರ್ಥಿಕ ಬದಲಾವಣೆಗೆ ಅವಲಂಬಿತರಾಗಿದ್ದು, ಮರಗಿಡಗಳಿದ್ದ ಪ್ರದೇಶಗಳನ್ನು ಖರೀದಿ ಮಾಡಿ ಅಲ್ಲಿದ್ದ ಮರಗಿಡಗಳನ್ನು ನಾಶ ಮಾಡಿ ಬದುಕಲು ಮುಂದಾಗುತ್ತಿರುವುದರಿಂದ ಈ ನಿಟ್ಟಿನಲ್ಲಿ ಪ್ರಾಣಿ ಪಕ್ಷಿಗಳಿಗೆ ಆಹಾರ ಸಿಗದಂತಾಗಿದೆ. ಎಷ್ಟೋ ಪ್ರಾಣಿ ಪಕ್ಷಿಗಳು ಬದುಕಲು ಒಂದು ಕಡೆಯಿಂದ ವಲಸೆ ಬರಲಾಗದೆ, ಆ ಪ್ರಾಣಿಗಳು ನಡೆಯಲಾಗದೆ ಪಕ್ಷಿಗಳು ಹಾರಲು ಶಕ್ತಿಯಿಲ್ಲದೆ ಸಾಯುತ್ತಿವೆ. ಮತ್ತೊಂದು ಕಡೆ ವಿಪರೀತ ನಗರೀಕರಣ ಅಭಿವೃದ್ಧಿಯಾಗುತ್ತಿರುವ ಕಾರಣ ಶಬ್ದ ಮಾಲಿನ್ಯಗಳು ಮತ್ತು ತರಂಗಗಳಿಂದ ಹಾಗೂ ಅನೇಕ ಮೊಬೈಲ್ ನೆಟ್‌ವರ್ಕ್‌ಗಳು ಸ್ಥಾಪನೆಯಾಗುತ್ತಿರುವುದರಿಂದ ಪ್ರಾಣಿ– ಪಕ್ಷಿಯ ಸಂಕುಲವಿಂದು ನಮ್ಮಿಂದ ದೂರವಾಗುತ್ತಿದೆ ಎಂದು ಹೇಳಬಹುದು. ಪ್ರಾಣಿ ಪಕ್ಷಿಗಳನ್ನು ನಾವೆಲ್ಲರೂ ತಿಳಿದಿರುವ ಹಾಗೆ ಹಿಂದೆ ವೈಜ್ಞಾನಿಕವಾಗಿ ನಮಗಿಂತಲೂ ಬುದ್ಧಿಜೀವಿಗಳೆಂದು ಭಾವಿಸಬಹುದಾಗಿದೆ. ಏಕೆಂದರೆ ಗಾಳಿ–ಮಳೆಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಗೂಡುಗಳನ್ನು ಕಟ್ಟಿಕೊಂಡಿರುವುದನ್ನು ನಾವೆಲ್ಲರೂ ಈಗಾಗಲೇ ನೋಡಿರುತ್ತೇವೆ. ಇಂತಹ ಬೇಸಿಗೆಯ ಸಂದರ್ಭದಲ್ಲಿ ಪ್ರಾಣಿ – ಪಕ್ಷಿಗಳನ್ನು ನಮ್ಮಂತೆ ಎಂದು ಭಾವಿಸಿ ಸಾರ್ವಜನಿಕರು ತಮ್ಮ ತಮ್ಮ ಮನೆಯ ಮೇಲೆಯೇ ನೀರನ್ನು ಬಟ್ಟಲುಗಳಲ್ಲಿ ತುಂಬಿಸಿಡಿ. ನಿಮಗೆ ಇಷ್ಟವಾದರೆ ಪಕ್ಷಿ ತಿನ್ನುವಂತಹ ಧಾನ್ಯ ಪದಾರ್ಥಗಳನ್ನು ಇಡಿ, "ನಮಗಿಂತಲೂ ಪ್ರಕೃತಿ ಮುಖ್ಯವೆಂದು" ಅರಿತು ಆ ಪ್ರಕೃತಿಯಲ್ಲಿರುವ ಜೀವಿಗಳನ್ನು 'ಪ್ರಕೃತಿಯ ಒಂದು ಭಾಗ' ಎಂದು ತಿಳಿದು ಪ್ರಾಣಿ–ಪಕ್ಷಿಗಳಿಗೆ ಬೇಸಿಗೆಯ ದಾಹ ನೀಗಿಸಲು ನಮ್ಮ ನಿಮ್ಮೆಲ್ಲರ ಸಹಕಾರ ಮುಖ್ಯವೆಂದು ತಿಳಿಸಲು ಬಯಸುತ್ತೇನೆ.

–ನಾಗೇಶ್, ಮಾನಸಗಂಗೋತ್ರಿ.



ಪ್ರೊ. ಎ.ವಿ. ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ,
ಮೈಸೂರು ವಿಶ್ವವಿದ್ಯಾನಿಲಯ.

ಇತಿಹಾಸದ ಪುಟಗಳು

ಮೂವರು ಶ್ರೇಷ್ಠ ಮಹನೀಯರ ಕೊಡುಗೆಗಳು

ಮೊದಲನೆಯ ಶ್ರೇಷ್ಠರೇ ಎಚ್.ವಿ.ನಂಜುಂಡಯ್ಯನವರು. ಇವರು ಮೈಸೂರು ವಿಶ್ವವಿದ್ಯಾನಿಲಯದ ಮೊದಲನೆಯ ಉಪಕುಲಪತಿಗಳಾಗಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಮುಂತಾದವರ ಪರಿಶ್ರಮದಿಂದ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪಿತವಾಯಿತು. ಅದಕ್ಕೆ ಮೊದಲು ಬೆಂಗಳೂರಿನ ಸೆಂಟ್ರಲ್ ಕಾಲೇಜು, ಮೈಸೂರಿನ ಮಹಾರಾಜ ಹಾಗೂ ಮಹಾರಾಣಿ ಕಾಲೇಜುಗಳು ಮದ್ರಾಸ್ ವಿಶ್ವವಿದ್ಯಾನಿಲಯಕ್ಕೆ ಸೇರಿದ್ದವು.

ಈ ವಿಶ್ವವಿದ್ಯಾನಿಲಯವು ದೂರವಿದ್ದುದರಿಂದ, ಮೈಸೂರು ಹಾಗೂ ಬೆಂಗಳೂರಿನ ಕಾಲೇಜುಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗಿರಲಿಲ್ಲ. ಇದನ್ನು ತಿಳಿದ ಮೈಸೂರಿನ ಸರ್ಕಾರವು, ಮೈಸೂರು ಅರಸರಿಗೆ, ಮೈಸೂರು ಹಾಗೂ ಬೆಂಗಳೂರುಗಳಲ್ಲಿ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸುವುದರ ಅವಶ್ಯಕತೆಯನ್ನು ತಿಳಿಸಿದರು. ಅಂದು ವಿದ್ಯಾವಿಭಾಗದ ಶ್ರೇಷ್ಠ ಅಧಿಕಾರಿಗಳಾಗಿದ್ದವರು, ನಾಲ್ವಡಿಯವರ ಸಲಹೆಯ ಮೇರೆಗೆ, 1914–15ರ ಸಮಯದಲ್ಲಿ **ಹಾರ್ಕೋರ್ಟ್ ಬಟ್ಲರ್** ಅವರ ನೇತೃತ್ವದಲ್ಲಿದ್ದ ಕೆಲವು ಸದಸ್ಯರು ಮೈಸೂರಿಗೆ ಬಂದು, ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಅನುಮತಿ ನೀಡಿದರು. ಹೀಗಾಗಿ ನಾಲ್ವಡಿಯವರು ಪ್ರಥಮ ಕುಲಾಧಿಪತಿಗಳಾದರು. 1916ರಲ್ಲಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯವು 1917ರಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಹೊಂದಿದ ವಿಶ್ವವಿದ್ಯಾನಿಲಯವಾಯಿತು.

ಬೆಂಗಳೂರಿನಲ್ಲಿ ವಿಜ್ಞಾನ ಹಾಗೂ ಗಣಿತ ವಿಷಯಗಳೂ ಮತ್ತು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಭಾಷೆ, ಇತಿಹಾಸ, ಅರ್ಥಶಾಸ್ತ್ರ, ವೇದಾಂತ ವಿಷಯಗಳನ್ನು ಬೋಧಿಸುವಂತೆ ಏರ್ಪಾಡು ಮಾಡಲಾಯಿತು. ಮೈಸೂರು ವಿಶ್ವವಿದ್ಯಾನಿಲಯದ ಘನತೆಯನ್ನು ಕಾಪಾಡುವ ಸಲುವಾಗಿ ಪ್ರಖ್ಯಾತ ವಿದ್ವಾಂಸರಾಗಿದ್ದ ಎಸ್. ರಾಧಾಕೃಷ್ಣನ್, ರಾಧಾಕುಮುದ್ ಮುಖರ್ಜಿ, ಕೆ.ಟಿ.ಷಾ, ಎ.ಆರ್. ವಾಡಿಯ, ಬಿ.ಎಂ.ಶ್ರೀಕಂಠಯ್ಯ, ಆರ್.ನರಸಿಂಹಾಚಾರ್, ಎನ್.ಎಸ್.ಸುಬ್ಬರಾವ್, ಮ್ಯಾಕಿಂಟಾಷ್ ಮತ್ತು ಮೆಟ್‌ಕಾಫ್ ಪ್ರಸಿದ್ಧರಾಗಿದ್ದರು.

ನಂಜುಂಡಯ್ಯನವರ ಮತ್ತೊಂದು ಕೊಡುಗೆಯೆಂದರೆ **ಕನ್ನಡ ಸಾಹಿತ್ಯ ಪರಿಷತ್ತು** 1919ರಲ್ಲಿ ಅಸ್ತಿತ್ವಕ್ಕೆ ಬರುವಂತೆ ಮಾಡಿದರು. ನಂಜುಂಡಯ್ಯನವರ ಮತ್ತೊಂದು ಚಿಂತನೆ ಎಂದರೆ ಜನಸಾಮಾನ್ಯರ ಭಾಷೆ ಇಂಗ್ಲಿಷ್ ಆಗಲು ಸಾಧ್ಯವಿಲ್ಲ. ಆದುದರಿಂದ ಮೈಸೂರಿನಲ್ಲಿ ವಿದ್ಯಾರ್ಥಿಗಳಿಗೆ ಕನ್ನಡದಲ್ಲೇ ಶಿಕ್ಷಣ ನೀಡಬೇಕು ಎಂದು ಯೋಚಿಸಿದ ನಂಜುಂಡಯ್ಯನವರು ಕನ್ನಡದಲ್ಲಿ ಬೋಧನೆ ಮಾಡಬಲ್ಲ ಉತ್ತಮ ಶಿಕ್ಷಕರನ್ನು ನೇಮಿಸಿಕೊಂಡರು. ಕನ್ನಡದಲ್ಲಿ ವಿಜ್ಞಾನ ಹಾಗೂ ಕಲಾ ವಿಭಾಗದ ವಿದ್ಯಾರ್ಥಿಗಳಿಗಾಗಿ ಕನ್ನಡದಲ್ಲಿ ಬರೆಯಬಲ್ಲ ನೂರಾರು ಬರಹಗಾರರನ್ನು ನಂಜುಂಡಯ್ಯನವರು ನೇಮಿಸಿದರು. ಇಂದಿಗೂ ಕನ್ನಡದ ಈ ಕಾರ್ಯ ನಡೆಯುತ್ತಿದೆ. ಈ ಕಾರ್ಯವನ್ನು ಮೊದಲು ಮಾಡಿದವರು ಎಂಎಸ್.ಪುಟ್ಟಣ್ಣಯ್ಯನವರು. ಇವರ ಮನೆಮಾತು ತೆಲುಗು. ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲಿ ಹಾಗೂ ಮದ್ರಾಸಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ವ್ಯಾಸಂಗ ಮುಗಿಸಿ, ಪರೀಕ್ಷೆಯಲ್ಲಿ ತೇರ್ಗಡೆಯಾಗಿ ನಂಜುಂಡಯ್ಯನವರು 1880ರಲ್ಲಿ ಬಿ.ಎ.ಪದವಿಯನ್ನು ಪಡೆದರು. ಅನಂತರ ಇವರು ಬಿ.ಎಲ್. ಮತ್ತು ಎಂ.ಎಲ್. ಪದವಿಗಳನ್ನು ಪಡೆದು, 1885ರಲ್ಲಿ ನಂಜನಗೂಡಿನ ನ್ಯಾಯಾಲಯದಲ್ಲಿ **ಮುನ್ಸೀಫ್** ಆದರು. 1886ರಲ್ಲಿ ಇವರು ಹಾಸನದ ಅಸಿಸ್ಟೆಂಟ್ ಕಮೀಷನರ್ ಆದರು. 1892ರಲ್ಲಿ ಬೆಂಗಳೂರಿನಲ್ಲಿ **ಸಬ್–ಜಡ್ಜ್** ಆಗಿ ನೇಮಕಗೊಂಡರು ಹಾಗೂ 1895ರಲ್ಲಿ **ಮದ್ರಾಸ್ ವಿಶ್ವವಿದ್ಯಾನಿಲಯ ಫೆಲೋ** ಆದರು. 1897ರಲ್ಲಿ ಮೈಸೂರು ಸಂಸ್ಥಾನದ ಅಸಿಸ್ಟೆಂಟ್ ಸೆಕ್ರೆಟರಿಯಾಗಿಯೂ ನೇಮಕಗೊಂಡರು. 1898ರಲ್ಲಿ ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ, ತರುವಾಯ, ಇವರು ಮೈಸೂರು ಸರ್ಕಾರದ ಮುಖ್ಯ ಕಾರ್ಯದರ್ಶಿ, ನಂತರ ಮೈಸೂರು ಸರ್ಕಾರದ ವಿದ್ಯಾ ಇಲಾಖೆಯ ಪ್ರಧಾನ ಆಡಳಿತಾಧಿಕಾರಿಗಳಾಗಿ ಮತ್ತು ಮೈಸೂರು ಸರ್ಕಾರದ ಕೌನ್ಸಿಲರ್ ಆಗಿ, ನಂಜುಂಡಯ್ಯನವರು ಮೈಸೂರು ಸರ್ಕಾರದ ಸೇವೆಯಿಂದ 1916ರಲ್ಲಿ ನಿವೃತ್ತರಾದರು.

ನ್ಯಾಯಶಾಸ್ತ್ರ ಹಾಗೂ **ರಾಜ್ಯಶಾಸ್ತ್ರ** ಮತ್ತು **ಅರ್ಥಶಾಸ್ತ್ರದ** ವಿಷಯಗಳಲ್ಲಿ ವಿದ್ವಾಂಸರಾದ ಇವರು, ಈ ವಿಷಯಗಳನ್ನು ಕುರಿತಾದ ಕೆಲವು ಉತ್ತಮ ಗ್ರಂಥಗಳನ್ನು ಬರೆದಿದ್ದಾರೆ. ಕನ್ನಡಕ್ಕೆ ಹೆಚ್ಚಿನ ಗೌರವವಿಲ್ಲದ ಕಾಲದಲ್ಲಿ, ಕನ್ನಡದಲ್ಲಿ ಗ್ರಂಥಗಳ ರಚನೆಯನ್ನು ಆರಂಭಿಸಿದವರಲ್ಲಿ ಇವರೇ ಮೊದಲನೆಯವರು. ಇವರು ಬರೆದ ಗ್ರಂಥಗಳ ವಿವರಗಳು ಹೀಗಿವೆ: **ವ್ಯವಹಾರ ದೀಪಿಕೆ** (1890), **ಆಂಗ್ಲೋ ಇಂಡಿಯನ್ & ಎಂಪೈರ್** (ಇಂಗ್ಲಿಷ್ ಭಾಷೆ –1915), **ಅರ್ಥಶಾಸ್ತ್ರ** (1901), **ಲೇಖ್ಯಬೋಧಿನಿ** (1901) ಹಾಗೂ **ರೀಜನಲ್ ಅಂಡ್ ಮಾರಲ್ ಎಜುಕೇಷನ್** (ಇಂಗ್ಲಿಷ್ ಭಾಷೆ) ಮುಂತಾದ ನೂರಾರು ವಿದ್ವತ್ಪೂರ್ಣ ಲೇಖನಗಳನ್ನು ಪ್ರಕಟಿಸಿದ್ದಾರೆ. 1913ರಲ್ಲಿ ಅಂದಿನ ಮಹಾರಾಜರು ಇವರಿಗೆ **ರಾಜಮಂತ್ರ ಪ್ರವೀಣ** ಎಂಬ ಬಿರುದನ್ನು ನೀಡಿ ಗೌರವಿಸಿದರು. 1914ರಲ್ಲಿ ಬ್ರಿಟಿಷ್ ಸರ್ಕಾರ ಇವರಿಗೆ **ಸಿ.ಐ.ಇ.** ಎಂಬ ಬಿರುದನ್ನು ನೀಡಿ ಗೌರವಿಸಿತು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗಲೇ ನಂಜುಂಡಯ್ಯನವರು 1920ರಲ್ಲಿ ನಿಧನರಾದರು.

ನೂರಾರು ಸಂತಾಪ ಸೂಚಕ ಸಭೆಗಳು ಇವರ ಗೌರವಾರ್ಥವಾಗಿ ನಡೆದವು. ಇವರು ನಿಧನರಾದ ವರ್ಷ (1920) ಮೈಸೂರಿನ ಹಾಗೂ ಬೆಂಗಳೂರಿನ ಶಾಲಾ–ಕಾಲೇಜುಗಳು, ಇವರ ಗೌರವಾರ್ಥವಾಗಿ ರಜೆಯನ್ನು ಘೋಷಿಸಿದವು.

ಇವರು ಶಾರೀರಕವಾಗಿ ನಮ್ಮೊಡನೆ ಇಲ್ಲದಿದ್ದರೂ, ಇವರು ಮಾಡಿದ ಉತ್ತಮ ಕಾರ್ಯಗಳು ಹಾಗೂ ಆದರ್ಶಗಳು ನಮ್ಮ ಮುಂದೆಯೇ ಇವೆ. ಇವರ ಆದರ್ಶಗಳು ಹಾಗೂ ಉತ್ತಮ ಕಾರ್ಯಗಳನ್ನು ನಾವೆಲ್ಲರೂ ಮಾಡಿದರೆ, ನಂಜುಂಡಯ್ಯನವರಿಗೆ ನಾವೆಲ್ಲರೂ ನೀಡಬಹುದಾದ ಶ್ರದ್ಧಾಂಜಲಿ.

ಈಗ ಇನ್ನೊಬ್ಬ ಶ್ರೇಷ್ಠ ವ್ಯಕ್ತಿಯನ್ನು ಗಮನಿಸಬಹುದು. ಅವರೇ **ಗುಲ್ಜಾರಿಲಾಲ್ ನಂದಾ**. ಇವರು ಭಾರತದ ಒಬ್ಬ ಹಿರಿಯ ರಾಜಕಾರಣಿ, ಕಾರ್ಮಿಕ ಸಂಘಟಕ, ಸಮಾಜ ಸುಧಾರಕ ಮತ್ತು ಇವರು ಎರಡು ಸಾರಿ ಹಂಗಾಮಿ ಪ್ರಧಾನಮಂತ್ರಿ ಗಳಾಗಿದ್ದರು. ಇವರು 4–7–1898ರಲ್ಲಿ ಜನಿಸಿದರು. ನಂತರ, ಇವರು ಲಾಹೋರಿನ (ಇಂದು ಪಾಕಿಸ್ತಾನದಲ್ಲಿದೆ) **ಫೋರ್ಮನ್ ಕ್ರಿಶ್ಚಿಯನ್** ಕಾಲೇಜಿನಲ್ಲಿ ವ್ಯಾಸಂಗ ಮಾಡಿ, ಹೆಚ್ಚಿನ ಅಂಕಗಳೊಡನೆ ತೇರ್ಗಡೆಯಾಗಿ, ಎಂ.ಎ., ಎಲ್.ಎಲ್.ಬಿ. ಪದವಿಗಳನ್ನು ಪಡೆದರು. 1924ರಲ್ಲಿ ಇವರು ಗಾಂಧೀಜಿಯವರ ಅನುಯಾಯಿಯಾಗಿ **ಅಸಹಕಾರ** ಚಳುವಳಿಯಲ್ಲಿ ಭಾಗವಹಿಸಿದರು. ಇವರು 1922ರಿಂದ 1946ರವರೆಗೆ ಮುಂಬಯಿನಲ್ಲಿದ್ದ **ನ್ಯಾಷನಲ್ ಕಾಲೇಜಿನಲ್ಲಿ** ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದರು. 1947ರಲ್ಲಿ ಇವರು ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಸಂಶೋಧಕರಾಗಿ ಉತ್ತಮ ಕಾರ್ಯನಿರ್ವಹಿಸಿದರು. ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಇವರನ್ನು 1932 ಹಾಗೂ 1942–44ರಲ್ಲೂ ಬ್ರಿಟಿಷ್ ಸರ್ಕಾರ ಬಂಧನದಲ್ಲಿಟ್ಟಿತು.

1940ರ ಡಿಸೆಂಬರ್ ತಿಂಗಳಿನಲ್ಲಿ ಕಾಂಗ್ರೆಸ್ ಪಕ್ಷದ **ಚುನಾವಣಾ ಪ್ರಣಾಳಿಕೆಯನ್ನು** ರೂಪಿಸಲು ರಚಿತವಾಗಿದ್ದ ಸಮಿತಿಯಲ್ಲಿ ಇವರು ಪ್ರಮುಖ ಸದಸ್ಯರಾಗಿದ್ದರು. 1941ರಲ್ಲಿ **ಅಖಿಲ ಭಾರತ ಕಾಂಗ್ರೆಸ್ ಸಮಿತಿಯು** ರಚಿಸಿದ **ಆರ್ಥಿಕ** ಕಾರ್ಯಕ್ರಮದ ಸಮಿತಿಯಲ್ಲೂ ಸದಸ್ಯರಾಗಿದ್ದರು. **ಸಮಾಜವಾದಿ** ಪಕ್ಷದ **ಹಿರಿಯ ವೇದಿಕೆಯನ್ನು** ಪ್ರಾರಂಭ ಮಾಡಿದವರಲ್ಲಿ ಇವರೇ ಮೊದಲನೆಯವರು ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು.

ನಂದಾ ಅವರು ಮೊದಲಿನಿಂದಲೂ **ಕಾರ್ಮಿಕ ಸಂಘಟನೆಯಲ್ಲಿ** ಆಸಕ್ತಿ ವಹಿಸುತ್ತಾ ಬಂದಿದ್ದರು. ಇಷ್ಟೇ ಅಲ್ಲದೆ, ಇವರು ಅಹಮದಾಬಾದ್ **ಜವಳಿ ಕಾರ್ಮಿಕ** ಸಂಘಕ್ಕೆ ಹಾಗೂ **ಹಿಂದೂಸ್ಥಾನ್ ಮಜ್ದೂರ್ ಸಂಘಗಳಿಗೂ** ಕಾರ್ಯದರ್ಶಿಯಾಗಿದ್ದರು.

1947ರಲ್ಲಿ ನಡೆದ **ಭಾರತ ರಾಷ್ಟ್ರೀಯ** ಸಮ್ಮೇಳನವನ್ನು ಇವರು ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಿದರು. ನಂದಾ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಕಾರ್ಮಿಕರ ಕಲ್ಯಾಣಕ್ಕಾಗಿ ಅನೇಕ ಸಲಹೆಗಳನ್ನು ಸೂಚಿಸಿದರು. ಇವರು 1948 ರಿಂದ 1950ರವರೆಗೆ ಮುಂಬಯಿ ಪ್ರಾಂತ್ಯದ **ಸಂಸದೀಯ ಕಾರ್ಯದರ್ಶಿಯಾಗಿ** ಉತ್ತಮ ಕೆಲಸವನ್ನು ಮಾಡಿದರು. ಇವರು 1950ರಿಂದ 1951ರವರೆಗೆ **ಭಾರತದ ರಾಷ್ಟ್ರೀಯ ಯೋಜನಾ ಆಯೋಗದ** ಉಪಾಧ್ಯಕ್ಷರಾಗಿದ್ದರು.

1952ರಿಂದ 1957ರವರೆಗಿನ ಸಮಯದಲ್ಲಿ ಇವರು **ಕಾರ್ಮಿಕ** ಹಾಗೂ **ಉದ್ಯೋಗ** ಮತ್ತು **ಯೋಜನಾ ಮಂತ್ರಿಗಳಾಗಿ** ಕೆಲಸವನ್ನು ನಿರ್ವಹಿಸಿದರು.

1964ರಲ್ಲಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ನಿಧನರಾದಾಗ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರಿಗಳು ನಿಧನರಾದಾಗ (1965) ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಗಳಾಗುವವರೆಗೆ (1–11–1964) ಹಂಗಾಮಿ ಪ್ರಧಾನಿಯಾಗಿದ್ದರು. ಇವರು **ಕಸ್ತೂರಬಾ** ಸ್ಮಾರಕ ಟ್ರಸ್ಟಿನ ಟ್ರಸ್ಟಿಯಾಗಿ ಉತ್ತಮ ಸೇವೆಯನ್ನು ಸಲ್ಲಿಸಿದರು. 1965ರಲ್ಲಿ ಇವರು **ಭಾರತ ಸೇವಾ ಸಮಾಜದ** ಅಧ್ಯಕ್ಷರಾಗಿದ್ದರು. 1966ರಲ್ಲಿ **ಭಾರತ ಸಾಧು ಸಮಿತಿ** ಸದಸ್ಯರಾಗಿದ್ದರು. 1971ರಲ್ಲಿ **ಸಿಟಿಜೆನ್ಸ್ ಕೌನ್ಸಿಲ್‌ನ** ಉಪಾಧ್ಯಕ್ಷರಾಗಿದ್ದರು. 1977ರಲ್ಲಿ ಇವರು ಕಾಂಗ್ರೆಸ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದರು.

ಗುಲ್ಜಾರಿಲಾಲ್ ನಂದಾ ಅವರದ್ದು **ಸರಳ ಸ್ವಭಾವ** ಹಾಗೂ **ನೇರ ವಿಚಾರ** ಹಾಗೂ ದಿಟ್ಟ ವ್ಯಕ್ತಿತ್ವ. ಇವರು ಕೇಂದ್ರದಲ್ಲಿ ಗೃಹ ಸಚಿವರಾಗಿದ್ದಾಗ **ಭ್ರಷ್ಟಾಚಾರವನ್ನು** ನಿರ್ಮೂಲ ಮಾಡುವ ಪಣ ತೊಟ್ಟರು. ಇದಕ್ಕಾಗಿ ಇವರು ಅನೇಕ **ಸದಾಚಾರ** ಸಮಿತಿಗಳನ್ನು ಹಾಗೂ **ಜಾಗೃತ ಮಂಡಲಿಗಳನ್ನೂ** ರಚಿಸಿ ತೀವ್ರ ಕ್ರಮಗಳನ್ನು ಕೈಗೊಂಡಿದ್ದರು. ಗುಲ್ಜಾರಿ ಲಾಲ್ ನಂದಾ ಅವರು 1978ರಲ್ಲಿ ದೆಹಲಿಯಲ್ಲಿ ನಿಧನರಾದರು.

ಇವರ ನಿಧನದ ದಿನದಂದು, ದೆಹಲಿಯಲ್ಲಿ ಶೋಕಾಚರಣೆಯ ಹಲವಾರು ಸಭೆಗಳು ನಡೆದವು. ಒಟ್ಟಿನಲ್ಲಿ ಭಾರತದ ಕೇಂದ್ರ ಸರ್ಕಾರವು ಉತ್ತಮ ರಾಜಕಾರಣಿ ಹಾಗೂ ಆದರ್ಶವಾದಿಯನ್ನು ಹಾಗೂ ಸಮಾಜ ಸುಧಾರಕರನ್ನು ಕಳೆದುಕೊಂಡಿತು ಎಂದು ಅನೇಕರು ದುಃಖಪಟ್ಟರು.

ಈಗ ಇನ್ನೊಬ್ಬ ಶ್ರೇಷ್ಠರನ್ನು ಅಧ್ಯಯನ ಮಾಡಬಹುದು. ಅವರೇ **ಆರ್.ಎಲ್.ನರಸಿಂಹಯ್ಯ**ನವರು. ಇವರು ಕನ್ನಡ ಭಾಷೆಗೆ ಉತ್ತಮ ಕೊಡುಗೆಗಳನ್ನು ನೀಡಿದರು. ಇವರು ವೃತ್ತಿಯಿಂದ ಭೌತವಿಜ್ಞಾನದ ಪ್ರಾಧ್ಯಾಪಕರು ಹಾಗೂ ಸಂಶೋಧಕರು ಮತ್ತು ಪ್ರವೃತ್ತಿಯಿಂದ ಜನಪ್ರಿಯ ವಿಜ್ಞಾನ ಹಾಗೂ ಕಲಾ ವಿಷಯಗಳಲ್ಲಿ ಆಸಕ್ತಿಯುಳ್ಳವರಾಗಿದ್ದರು. ಇವರು ವಿಜ್ಞಾನ ವಿಷಯಗಳಲ್ಲಿದ್ದ ಇಂಗ್ಲಿಷ್ ಪದಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡಿ, ಕನ್ನಡಿಗರಿಗೆ ಅನುಕೂಲವನ್ನುಂಟು ಮಾಡಿದರು.

ಇಷ್ಟೇ ಅಲ್ಲದೆ, ಇವರು ವಿಜ್ಞಾನವನ್ನು ಕನ್ನಡದಲ್ಲಿ ಹೇಳುವ ಬಗೆಗೆ ನೀಡಿರುವ ಮಾರ್ಗದರ್ಶಿ ಇಂದಿಗೂ ಪ್ರಸ್ತುತವಾಗಿದೆ. ಇವರು ಕನ್ನಡದಲ್ಲಿ ಬರೆದು ಪ್ರಕಟಿಸಿದ ಜನಪ್ರಿಯ ಗ್ರಂಥಗಳು ಸುಮಾರು ಐವತ್ತರಷ್ಟಿವೆ. ಅವುಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಇಲ್ಲಿ ಗಮನಿಸಲಾಗಿದೆ. ಅವುಗಳೇ, 1952ರಲ್ಲಿ ಪ್ರಕಟಗೊಂಡ **ಜಗತ್ತುಗಳು ಹುಟ್ಟು ಮತ್ತು ಸಾವು** ಹಾಗೂ 1954ರಲ್ಲಿ ಪ್ರಕಟಗೊಂಡ **ನಕ್ಷತ್ರ ದರ್ಶನ** ಮತ್ತು **ರಿಚ್ಟ್ ಮೇಯರ್** ಮತ್ತು **ಕೆನಾರ್ಡ್** ಅವರು 1955ರಲ್ಲಿ ರಚಿಸಿದ **ಇಂಟ್ರೊಡಕ್ಷನ್ ಟು ಮಾಡ್ರನ್ ಫಿಸಿಕ್ಸ್** ಹಾಗೂ ರಿಚಿ ಕಾಲ್ಡರ್ ಬರೆದಿರುವ **ಸೈನ್ಸ್ ಮೇಕ್ಸ್ ಸೆನ್ಸ್** ಮುಂತಾದ ಗ್ರಂಥಗಳು ಸೇರಿವೆ. ಇವರು ಬರೆದಿರುವ ಗ್ರಂಥಗಳ ಸಂಖ್ಯೆ ಸುಮಾರು ಹತ್ತು ಎಂದು ಭಾರತದ ವಿಜ್ಞಾನಿಗಳು ಅಂದಾಜು ಮಾಡಿದ್ದಾರೆ.

ಅಷ್ಟೇ ಅಲ್ಲದೆ ನರಸಿಂಹಯ್ಯನವರು ಇತರರ ಸಹಾಯದಿಂದ ಬರೆದ ವಿಜ್ಞಾನಕ್ಕೆ ಸಂಬಂಧಪಟ್ಟ ಸಂಶೋಧನಾ ಲೇಖನಗಳು ಸುಮಾರು ಹನ್ನೊಂದರಷ್ಟಿವೆ.

ಇವರಿಗೆ ವಿಜ್ಞಾನದ ಸಂಶೋಧನೆಯಲ್ಲಿ ಹೆಚ್ಚಿನ ಆಸಕ್ತಿಯಿದ್ದಿತು. ಇವುಗಳಲ್ಲಿ ಮುಖ್ಯವಾದವುಗಳೆಂದರೆ **ರೇಡಿಯೋ ಇಂಜಿನಿಯರಿಂಗ್** ಹಾಗೂ **ಜೀವ ಭೌತ ವಿಜ್ಞಾನ** ಮುಂತಾದವುಗಳು. ಇವರು ವಿದ್ಯಾರ್ಥಿಗಳಿಗೆ **ಆರ್.ಎಲ್.ಎನ್**. ಎಂದೇ ಪರಿಚಿತರು.

ನರಸಿಂಹಯ್ಯನವರು ಚಿತ್ರದುರ್ಗ ಜಿಲ್ಲೆಯಲ್ಲಿ ಹೈಸ್ಕೂಲು ಶಿಕ್ಷಣವನ್ನು ಮುಗಿಸಿ, ಬೆಂಗಳೂರಿನ ಸೆಂಟ್ರಲ್ ಕಾಲೇಜಿನಿಂದ 1923ರಲ್ಲಿ ಬಿ.ಎಸ್.ಸಿ. ಪದವಿಯನ್ನು ಪಡೆದರು. ಮೈಸೂರು ಸಂಸ್ಥಾನದಲ್ಲಿ ನಾಲ್ಕಾರು ಶಾಲೆಗಳಲ್ಲಿ ಅಧ್ಯಾಪಕರಾಗಿ ಶ್ರಮವಹಿಸಿದ ನರಸಿಂಹಯ್ಯನವರು ವಿದ್ಯಾರ್ಥಿಗಳಿಂದ ಮೆಚ್ಚುಗೆ ಗಳಿಸಿದರು.


ಇವರು ಭೌತ ವಿಜ್ಞಾನದಲ್ಲಿ ಹೆಚ್ಚಿನ ಜ್ಞಾನವನ್ನು ಪಡೆಯುವ ಉದ್ದೇಶದಿಂದ ಅಹಮದಾಬಾದಿಗೆ ಹೋಗಿ ಖ್ಯಾತ ವಿಜ್ಞಾನಿಗಳಾಗಿದ್ದ **ಮೇಘನಾ ಸಹಾ** ಅವರ ಶಿಷ್ಯರಾಗಿದ್ದು, ಉನ್ನತ ವರ್ಗದಲ್ಲಿ ತೇರ್ಗಡೆಯಾಗಿ 1927ರಲ್ಲಿ ಎಂ.ಎಸ್.ಸಿ. ಪದವಿಯನ್ನು ಪಡೆದರು. ಅಹಮದಾಬಾದ್‌ನಿಂದ ಹಿಂದಿರುಗಿದ ಇವರು, 1929ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರ ವಿಭಾಗದಲ್ಲಿ ಅಧ್ಯಾಪಕರಾಗಿ ಸೇರಿಕೊಂಡರು.

ಕಾರ್ಯನಿರತ ವಿಜ್ಞಾನಿಗೆ ನಿವೃತ್ತಿ ಎಂಬುದೇ ಇಲ್ಲ. ಸೆಂಟ್ರಲ್ ಕಾಲೇಜಿನಿಂದ ನಿವೃತ್ತರಾದ ಇವರು ಆಗ ತಾನೇ ಆರಂಭಗೊಂಡಿದ್ದ **ಕನ್ನಡ** ವಿಶ್ವಕೋಶದ ವಿಜ್ಞಾನ ಸಂಪಾದಕರಾಗಿದ್ದರು. ನಂತರ ಇವರು ವಿಶ್ವೇಶ್ವರಯ್ಯ ತಾಂತ್ರಿಕ ಸಂಗ್ರಹಾಲಯದ ಸಲಹೆಗಾರರಾಗಿದ್ದರು.


ನಂತರ ಬೆಂಗಳೂರಿನ **ನ್ಯಾಷನಲ್** ಕಾಲೇಜ್ ಹಾಗೂ ಆಚಾರ್ಯ ಪಾಠಶಾಲೆಗಳಲ್ಲಿ ಪ್ರಾಧ್ಯಾಪಕರಾಗಿದ್ದರು. ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸುತ್ತಿದ್ದ **ಇಂಗ್ಲಿಷ್** ಹಾಗೂ **ಕನ್ನಡ** ನಿಘಂಟಿನ ಪರಿಷ್ಕರಣ ಸಮಿತಿಯ ಸದಸ್ಯರಾಗಿದ್ದರು.

ನರಸಿಂಹಯ್ಯನವರು ಬೆಂಗಳೂರಿನಲ್ಲಿದ್ದ ಜಯಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ 1945 ರಿಂದ 1960ರವರೆಗೆ, ಇವರು **ರೇಡಿಯೋ ಇಂಜಿನಿಯರಿಂಗ್** ಶಾಸ್ತ್ರವನ್ನು ವಿದ್ಯಾರ್ಥಿಗಳಿಗೆ ಪಾಠ ಮಾಡಿದರು. 1954ರಿಂದ **ಅಖಿಲ ಭಾರತ ಮಾನಸಿಕ ಸಂಸ್ಥೆಯನ್ನು** ಇವರು ಬೆಂಗಳೂರಿನಲ್ಲಿ ಸ್ಥಾಪಿಸಿದರು. ಇವರು ಈ ಸಂಸ್ಥೆಯಲ್ಲಿ **ಜೀವ ಭೌತ ವಿಜ್ಞಾನ** ವಿಭಾಗದಲ್ಲಿ ಉಪಾಧ್ಯಾಯರಾಗಿ ಹಾಗೂ **ಎಲೆಕ್ಟ್ರೋಫೆಲೋಗ್ರಾಫ್** ಯಂತ್ರದ ಮೇಲ್ವಿಚಾರಕರಾಗಿದ್ದರು. ಇವರು ಕರ್ನಾಟಕದ **ವೈಜ್ಞಾನಿಕ** ಮುನ್ನಡೆಗೆ ಸಲ್ಲಿಸಿದ ಸೇವೆ ಅದ್ಭುತವಾಗಿದ್ದಿತು.


ನರಸಿಂಹಯ್ಯನವರದ್ದು ಅನುಕರಣೀಯ ಜೀವನ ಹಾಗೂ **ತೀಕ್ಷ್ಣ ಬುದ್ಧಿಶಕ್ತಿ, ಆಳವಾದ ಪಾಂಡಿತ್ಯ, ಲೇಖನ ಕಲೆ, ಕಲೆಯಲ್ಲಿ ಆಸಕ್ತಿ** ಹಾಗೂ ವೈಯಕ್ತಿಕ ಜೀವನದ **ಕಳಂಕ ರಹಿತ ಚಾರಿತ್ರ್ಯ, ಪ್ರಾಮಾಣಿಕತೆ, ವ್ಯವಹಾರದ ಸ್ನೇಹ** ಮುಂತಾದವುಗಳನ್ನು ಒಬ್ಬ ವ್ಯಕ್ತಿಯಲ್ಲಿ ಕಾಣುವುದು ಅಪರೂಪ ಎಂದು ಜಯಚಾಮರಾಜೇಂದ್ರ ಕಾಲೇಜಿನ ಪ್ರಾಧ್ಯಾಪಕರು ಅಭಿಪ್ರಾಯಪಟ್ಟಿದ್ದರಲ್ಲಿ ನರಸಿಂಹಯ್ಯನವರ ಉತ್ತಮ ಗುಣಗಳಿಗೆ ಕನ್ನಡಿ ಹಿಡಿದಂತಿದೆ. ನರಸಿಂಹಯ್ಯನವರು ಕೆಲಸಗಳ ಒತ್ತಡ, ಅಹಮದಾಬಾದ್, ಬೆಂಗಳೂರು ಮತ್ತು ಮೈಸೂರಿಗೆ ಓಡಾಟ ಹಾಗೂ ಈ ಸ್ಥಳಗಳಲ್ಲಿ ವಿಜ್ಞಾನದ ಬಗ್ಗೆ ಉಪನ್ಯಾಸಗಳನ್ನು ನೀಡಿ ಇವರು ಅರವತ್ತೇಳನೆಯ ವಯಸ್ಸಿನಲ್ಲಿ (1969) ನಿಧನರಾದರು. ಅಹಮದಾಬಾದ್, ಬೆಂಗಳೂರು ಹಾಗೂ ಮೈಸೂರುಗಳಲ್ಲಿ ಅನೇಕ ಸಂತಾಪ ಸೂಚಕ ಸಭೆಗಳು ನಡೆದವು.



ಎಚ್.ವಿ.ನಂಜುಂಡಯ್ಯ



ಗುಲ್ಜಾರಿಲಾಲ್ ನಂದಾ



ಆರ್.ಎಲ್.ನರಸಿಂಹಯ್ಯ

ಮೈಸೂರಿನ ಮಲೆಮಹದೇಶ್ವರ ರಸ್ತೆ ಅಗಲೀಕರಣಕ್ಕೆ ಪಾಲಿಕೆ ಆಯುಕ್ತರಿಂದ ಸ್ಥಳ ಪರಿಶೀಲನೆ

- **ಗೋಪಾಲಗೌಡ ಶಾಂತವೇರಿ ವೃತ್ತದಿಂದ ಹಳೇ ಡೈರಿವರೆಗೆ ಅಗಲೀಕರಣ**
- **ಮಾಜಿ ಮೇಯರ್ ಸಂದೇಶ್‌ಸ್ವಾಮಿ ಮನವಿ ಮೇರೆಗೆ ಪರಿಶೀಲಿಸಿದ ಆಯುಕ್ತರು**

ಮೈಸೂರು,ಮಾ.29(ಪಿಎಂ)–ಮೈಸೂರಿನ ನಜರ್‌ಬಾದಿನ ಮಲೆಮಹದೇಶ್ವರ ರಸ್ತೆಯನ್ನು ಗೋಪಾಲಗೌಡ ಶಾಂತವೇರಿ ವೃತ್ತದಿಂದ ಹಳೇ ಡೈರಿವರೆಗೆ ಅಗಲೀಕರಣದೊಂದಿಗೆ ಅಭಿವೃದ್ಧಿಗೊಳಿಸುವಂತೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅವರ ಮನವಿ ಮೇರೆಗೆ ಮಂಗಳವಾರ ಮೈಸೂರು ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಮತ್ತು ಪಾಲಿಕೆ ಅಧೀಕ್ಷಕ ಅಭಿಯಂತರ ಮಹೇಶ್ ಸ್ಥಳ ಪರಿಶೀಲನೆ ನಡೆಸಿದರು.

ಈ ವೇಳೆ ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅವರೂ ಸ್ಥಳಕ್ಕೆ ಭೇಟಿ ನೀಡಿ ಆಯುಕ್ತರು ಹಾಗೂ ಅಧೀಕ್ಷಕ ಅಭಿಯಂತರರಿಗೆ ಸದರಿ ರಸ್ತೆಯ ದುಸ್ಥಿತಿ ಬಗ್ಗೆ ವಿವರಿಸಿದರು. ಸದರಿ ರಸ್ತೆ ಕಿರಿದಾಗಿರುವ ಹಿನ್ನೆಲೆಯಲ್ಲಿ ಅಪಘಾತಗಳು ಹೆಚ್ಚಾಗುತ್ತಿವೆ. ಶೀಘ್ರದಲ್ಲಿ ಅಗಲೀಕರಣದೊಂದಿಗೆ ರಸ್ತೆ ಅಭಿವೃದ್ಧಿಗೊಳಿಸಲು ಕ್ರಮ ಕೈಗೊಳ್ಳುವಂತೆ ಆಯುಕ್ತರಲ್ಲಿ ಸಂದೇಶ್‌ಸ್ವಾಮಿ ಮನವಿ ಮಾಡಿದರು.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಸಂದೇಶ್‌ಸ್ವಾಮಿ, ಸದರಿ ರಸ್ತೆಯಲ್ಲಿ ಪ್ರತಿನಿತ್ಯ ಬೆಳಗ್ಗೆಯಿಂದ ಸಂಜೆವರೆಗೆ 10ರಿಂದ 15 ಸಾವಿರ ವಾಹನಗಳು ಸಂಚರಿಸುತ್ತವೆ. ರಸ್ತೆ ಹದಗೆಟ್ಟಿರುವ ಹಿನ್ನೆಲೆಯಲ್ಲಿ ಹಾಗೂ ಅಗಲೀಕರಣ ಮಾಡದ ಕಾರಣಕ್ಕೆ ವರ್ಷಕ್ಕೆ ಒಂದಿಬ್ಬರಾದರೂ ಅಪಘಾತದಲ್ಲಿ ಸಾವನ್ನಪ್ಪುತ್ತಿದ್ದಾರೆ. ಜೊತೆಗೆ ಸಣ್ಣಪುಟ್ಟ ಅಪಘಾತಗಳಿಂದ ಹಲವರು ಗಾಯಗೊಂಡಿದ್ದಾರೆ. ತುರ್ತಾಗಿ ಈ ರಸ್ತೆಯನ್ನು ಅಗಲೀಕರಣದ ಜೊತೆಗೆ ಅಭಿವೃದ್ಧಿ ಮಾಡಬೇಕಿದೆ. ಈ ಸಂಬಂಧ ಆಯುಕ್ತರಲ್ಲಿ ಮನವಿ ಮಾಡಿದ್ದೆ. ನನ್ನ ಕೋರಿಕೆ ಮೇರೆಗೆ ಇಂದು ಪರಿಶೀಲನೆ ನಡೆಸಿದ್ದಾರೆ ಎಂದು ತಿಳಿಸಿದರು.

ಈ ಹಿಂದೆ ಸದರಿ ರಸ್ತೆಯಲ್ಲಿ ಡೈರಿಯಿಂದ ರಿಂಗ್ ರಸ್ತೆ ಜಂಕ್ಷನ್‌ವರೆಗೆ ಲೋಕೋಪಯೋಗಿ ಇಲಾಖೆ ವತಿಯಿಂದ ಅಗಲೀಕರಣಗೊಳಿಸಿ ಅಭಿವೃದ್ಧಿಪಡಿಸಲಾಗಿದೆ. ಆದರೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಉಂಟಾದ ಸಮಸ್ಯೆ ಸೇರಿದಂತೆ ಇನ್ನಿತರ ಕಾರಣಗಳಿಂದ ಡೈರಿಯಿಂದ ಗೋಪಾಲಗೌಡ ಶಾಂತವೇರಿ ವೃತ್ತವರೆಗೆ ಅಗಲೀಕರಣ ಮಾಡಲಾಗಲಿಲ್ಲ. ರಸ್ತೆಯ ಒಂದೆರಡು ಸ್ಥಳ ಬಿಟ್ಟರೆ ಅಗಲೀಕರಣಕ್ಕೆ ಅಗತ್ಯವಿರುವ ಭೂಮಿ ಲಭ್ಯತೆಗೆ ಈಗ ಯಾವುದೇ ಸಮಸ್ಯೆ ಇಲ್ಲ ಎಂದರು.

ಇಂದು ಪರಿಶೀಲಿಸಿದ ಆಯುಕ್ತರು, ಅಗಲೀಕರಣಕ್ಕೆ ಸ್ಥಳಾವಕಾಶ ಇರುವೆಡೆ ಶೀಘ್ರವೇ ಕಾಮಗಾರಿ ಆರಂಭಿಸಲು ಕ್ರಮ ವಹಿಸುವ ಭರವಸೆ ನೀಡಿದ್ದಾರೆ. ಸದರಿ ರಸ್ತೆ ಅಗಲೀಕರಣಕ್ಕೆ ಉಸ್ತುವಾರಿ ಸಚಿವರು ಹಾಗೂ ಮೇಯರ್ ಅವರಿಗೂ ಮನವಿ ಮಾಡಿದ್ದೇನೆ. ಶೀಘ್ರವೇ ಅಗಲೀಕರಣಗೊಳಿಸಿ, ಮುಂದೆ ಅನಾಹುತ ಆಗದಂತೆ ತಡೆಗಟ್ಟಬೇಕು ಎಂಬುದು ನನ್ನ ಮನವಿ ಎಂದರು.



ಮೈಸೂರಿನ ನಜರ್‌ಬಾದಿನ ಮಲೆಮಹದೇಶ್ವರ ರಸ್ತೆಯನ್ನು ಗೋಪಾಲಗೌಡ ಶಾಂತವೇರಿ ವೃತ್ತದಿಂದ ಹಳೇ ಡೈರಿವರೆಗೆ ಅಗಲೀಕರಣಗೊಳಿಸುವ ಸಂಬಂಧ ಪಾಲಿಕೆ ಆಯುಕ್ತ ಲಕ್ಷ್ಮೀಕಾಂತರೆಡ್ಡಿ ಮಂಗಳವಾರ ಸ್ಥಳ ಪರಿಶೀಲನೆ ನಡೆಸಿದರು. ಮಾಜಿ ಮೇಯರ್ ಸಂದೇಶ್‌ಸ್ವಾಮಿ ರಸ್ತೆಯ ದುಸ್ಥಿತಿ ಬಗ್ಗೆ ಮಾಹಿತಿ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮಾದಪ್ಪನ ಸನ್ನಿಧಿಯ ಪವಿತ್ರ ಅಂತರಗಂಗೆ ಅಪವಿತ್ರ

● ದುರ್ವಾಸನೆ ಬೀರುವ ನೀರಲ್ಲೇ ಮಿಂದೇಳುತ್ತಿರುವ ಭಕ್ತರು ● ಮಲೆ ಮಹದೇಶ್ವರರ ಈ ಸ್ನಾನ ಸನ್ನಿಧಿ ಸೇರುತ್ತಿದೆ ಚರಂಡಿ ನೀರು! ● ನಿರ್ಲಕ್ಷ್ಯದಿಂದಾಗಿ ಧಾರ್ಮಿಕ ಪರಂಪರೆಯ ಪವಿತ್ರ ಗಂಗೆಗೆ ಅಪಚಾರ ● ಭಕ್ತಿಯ ಪರಾಕಾಷ್ಟೆಯಿಂದ ಭಕ್ತರು ಅನಾರೋಗ್ಯಕ್ಕೆ ತುತ್ತಾಗುವ ಆತಂಕ ● ಅಂತರಗಂಗೆ ಸೇರುತ್ತಿರುವ ಕಲುಷಿತ ನೀರಿನ ಮಾರ್ಗ ಬದಲಿಗೆ ಆಗ್ರಹ


ಮಹದೇಶ್ವರ ಬೆಟ್ಟದಲ್ಲಿರುವ ಅಂತರಗಂಗೆ ಕಲುಷಿತಗೊಂಡಿರುವುದು. ಚಿತ್ರದಲ್ಲಿ ಸ್ನಾನ ಮಾಡುತ್ತಿರುವ ಭಕ್ತರನ್ನು ಕಾಣಬಹುದು.

ಅಂತರಗಂಗೆಯಲ್ಲಿ ಸ್ನಾನ ಮಾಡದಂತೆ ಸೂಚನೆ

ಮಹದೇಶ್ವರ ಬೆಟ್ಟದಲ್ಲಿನ ಅಂತರಗಂಗೆಗೆ ಚರಂಡಿ ನೀರು ಸೇರಿ ಕಲುಷಿತಗೊಂಡಿದೆ. ಆದರೆ, ಒಳಚರಂಡಿ ನೀರು ಸೇರಿಲ್ಲ. ಆದರೂ ಅಂತರಗಂಗೆ ಕಲುಷಿತಗೊಂಡಿದೆ. ಆ ನೀರಲ್ಲಿ ಸ್ನಾನ ಮಾಡದಂತೆ ಭಕ್ತರಿಗೆ ಸೂಚನೆ ನೀಡಲಾಗುತ್ತಿದೆ. ಅಂತರಗಂಗೆ ಬಳಿ ಬ್ಯಾನರ್ ಸಹ ಅಳವಡಿಸಲಾಗಿದೆ. ಆದರೂ ಕೆಲವು ಭಕ್ತರು ಅಂತರಗಂಗೆಯಲ್ಲಿ ಸ್ನಾನ ಮಾಡುತ್ತಿದ್ದಾರೆಂಬ ಮಾಹಿತಿ ಇದೆ. ಅಲ್ಲಿ ಸ್ನಾನ ಮಾಡುವುದಕ್ಕೆ ತಕ್ಷಣ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗುವುದು. ಅಂತರಗಂಗೆಯಲ್ಲಿ ಸ್ನಾನ ಮಾಡಲೆಂದು ಬರುವವರಿಗಾಗಿಯೇ ಸ್ನಾನ ಗೃಹ ನಿರ್ಮಿಸಲಾಗಿದ್ದು, ಉಚಿತ ಸೌಲಭ್ಯ ನೀಡಲಾಗಿದೆ. ಇನ್ನೊಂದು ಸ್ನಾನದ ಗೃಹ ನಿರ್ಮಿಸಲು ಕ್ರಮಕೈಗೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಅಂತರಗಂಗೆಗೆ ಸೇರುತ್ತಿರುವ ಚರಂಡಿ ನೀರು ತಡೆಗೆ ಅಗತ್ಯ ಕ್ರಮ ಕೈಗೊಳ್ಳಲು ಡಿಪಿಆರ್ ತಯಾರಿಸಲಾಗುತ್ತದೆ.

-ಜಯವಿಭವಸ್ವಾಮಿ, ಕಾರ್ಯದರ್ಶಿ,
ಮಲೆ ಮಹದೇಶ್ವರ ದೇವಾಲಯ ಅಭಿವೃದ್ಧಿ ಪ್ರಾಧಿಕಾರ


ಕಲುಷಿತ ನೀರು ಸೇರುತ್ತಿರುವುದು.

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಮಾ.29– ಹಳೆ ಮೈಸೂರು ಭಾಗದಲ್ಲಿ ಜಾನಪದ ಭವ್ಯ ಪರಂಪರೆಯ ಧಾರ್ಮಿಕ ನೆಲೆಯೂ ಆದ ಮಲೆ ಮಹದೇಶ್ವರ ಬೆಟ್ಟದ ಅಂತರಗಂಗೆಗೆ ಚರಂಡಿ ನೀರು ಸೇರುತ್ತಿದ್ದು, ಭಕ್ತಿಯ ಪರಾಕಾಷ್ಟೆಯಿಂದಾಗಿ ಭಕ್ತರು ದುರ್ವಾಸನೆ ನಡುವೆ ಅದರಲ್ಲೇ ಮಿಂದೆದ್ದು ಆರೋಗ್ಯ ಕೆಡಿಸಿಕೊಳ್ಳುವ ದುಸ್ಸಾಹಸಕ್ಕಿಳಿದಿದ್ದಾರೆ.

ದಿನದಿಂದ ದಿನಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಹಾಗೂ ಪ್ರವಾಸಿಗರನ್ನು ಸೆಳೆಯುತ್ತಿರುವ ಮಲೆಮಹದೇಶ್ವರ ಬೆಟ್ಟವನ್ನು ಸಮಗ್ರ ಅಭಿವೃದ್ಧಿಪಡಿಸಿ, ಭಕ್ತರಿಗೆ ಮೂಲ ಸೌಲಭ್ಯ ಕಲ್ಪಿಸಲು ಮಲೆ ಮಹದೇಶ್ವರ ದೇವಾಲಯ ಅಭಿವೃದ್ಧಿ ಪ್ರಾಧಿಕಾರ ರಚಿಸಲಾಗಿದೆ. ವಾರ್ಷಿಕ ಕೋಟ್ಯಾಂತರ ರೂ. ಆದಾಯ ಗಳಿಸುವ ಪ್ರಮುಖ ದೇವಾಲಯಗಳಲ್ಲಿ ಮಲೆ ಮಹದೇಶ್ವರ ಬೆಟ್ಟದ ದೇವಾಲಯವೂ ಒಂದಾಗಿದೆ. ಈ ನಡುವೆ ಸರ್ಕಾರದ ಅನುದಾನದಿಂದ ಮಹದೇಶ್ವರ ಬೆಟ್ಟದಲ್ಲಿ ವಿವಿಧ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದರೂ ಅಂತರಗಂಗೆ ಸಂರಕ್ಷಣೆಗೆ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದೇ ಇರುವುದಕ್ಕೆ ಭಕ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಂತರಗಂಗೆ ಕಲುಷಿತ: ಮಲೆ ಮಹದೇಶ್ವರ ಬೆಟ್ಟದ ದಾಸೋಹ ಭವನದ ಬಳಿ ಇರುವ ಅಂತರಗಂಗೆ ಪವಿತ್ರ ಕ್ಷೇತ್ರವಾಗಿತ್ತು. ಮಲೆ ಮಹದೇಶ್ವರರು ಇಲ್ಲಿ ಮಿಂದು, ಜಡೆ ಬಂಡೆಯ ಮೇಲೆ ಕೂದಲನ್ನು ಇಳಿಬಿಟ್ಟು ಒಣಗಿಸಿಕೊಳ್ಳುತ್ತಿದ್ದರು ಎಂಬ ಜಾನಪದ ಹಾಗೂ ಧಾರ್ಮಿಕ ನೆಲೆಗಟ್ಟಿನಲ್ಲಿ 'ಅಂತರಗಂಗೆ'ಗೆ ಪವಿತ್ರ ಸ್ಥಾನ ಇದೆ. ಅದಕ್ಕೆ ಅನುಗುಣವಾಗಿ ಈ ಸ್ಥಳ ಪವಿತ್ರವಾಗಿಯೇ ಇತ್ತು. ಆದರೆ ಕಳೆದ ಕೆಲವು ವರ್ಷಗಳಿಂದ ನಿರ್ಲಕ್ಷ್ಯದಿಂದಾಗಿ ಅಂತರಗಂಗೆ ಅಪವಿತ್ರಗೊಳ್ಳುತ್ತಿದ್ದು, ಇತ್ತೀಚೆಗೆ ದುರ್ನಾತ ಬೀರುವಷ್ಟು ಮಲೀನಗೊಂಡಿದೆ. ಈ ಹಿಂದೆ ಬೆಟ್ಟದಿಂದ ಹರಿದು ಬಂದ ಶುದ್ಧ ನೀರು ಅಂತರಗಂಗೆ ಸೇರುತ್ತಿತ್ತು. ಇದರ ನಡುವೆ ಬೆಟ್ಟದ ಕಣಿವೆಯಿಂದ ಅಂತರ ಜಲವೂ ಸೇರಿ ಅಂತರಗಂಗೆಯ ನೀರು ಪರಿಶುದ್ಧವಾಗಿತ್ತು.


ಆದರೆ ಬೆಟ್ಟದಲ್ಲಿ ಸಾಲೂರು ಮಠದ ರಸ್ತೆ ಸೇರಿದಂತೆ ಸುತ್ತಮುತ್ತಲಿನ ಭಾಗದಲ್ಲಿ ಮನೆಗಳ ಸಂಖ್ಯೆ ಹೆಚ್ಚಾಗಿದ್ದು, ಆ ಮನೆಗಳ ಒಳಚರಂಡಿ ನೀರು ಇಳಿಜಾರಿನ ಅಂತರಗಂಗೆ ಸೇರುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಭಕ್ತರ ವಾಸ್ತವ್ಯಕ್ಕಾಗಿ ನಿರ್ಮಿಸಿರುವ ವಸತಿ ಸಮುಚ್ಛಯಗಳ ಒಳಚರಂಡಿ ನೀರು ಅಂತರಗಂಗೆ ಸೇರುತ್ತಿದೆ. ಈ ಎಲ್ಲಾ ಅವಾಂತರಗಳನ್ನು ಆರಂಭದಲ್ಲಿಯೇ ತಡೆಗಟ್ಟಲು ಯಾವುದೇ ಕ್ರಮ ಕೈಗೊಳ್ಳದ ಕಾರಣ ಇದೀಗ ಅಂತರಗಂಗೆ ದೊಡ್ಡ ಪ್ರಮಾಣದಲ್ಲಿ ಮಲಿನಗೊಳ್ಳಲು ಕಾರಣವಾಗಿದೆ. ಇದರಿಂದ ಪಾವಿತ್ರ್ಯತೆ ಕಾಪಾಡಿಕೊಂಡಿದ್ದ ಅಂತರಗಂಗೆ ಅಪವಿತ್ರಗೊಳ್ಳುತ್ತಿದೆ.

ಗೊತ್ತಿದ್ದರೂ ಸ್ನಾನ: ಅಂತರಗಂಗೆ ಸಮೀಪವೇ ದೇವಾಲಯ ಅಭಿವೃದ್ಧಿ ಪ್ರಾಧಿಕಾರದಿಂದ ಸ್ನಾನದ ಗೃಹ ನಿರ್ಮಾಣ ಮಾಡಲಾಗಿದೆ. ಹರಕೆ ಹೊತ್ತು ಬೆಟ್ಟಕ್ಕೆ ಬಂದು ಮುಡಿ ಕೊಡುವವರು ಅಂತರಗಂಗೆಯಲ್ಲಿ ಸ್ನಾನ ಮಾಡಿದ ನಂತರ ದೇವಾಲಯಕ್ಕೆ ತೆರಳಿ ದರ್ಶನ ಪಡೆಯುವ ಪದ್ಧತಿ ಅನುಸರಿಸುತ್ತಿದ್ದಾರೆ. ಸಮೀಪದ ಸ್ನಾನ ಗೃಹದಿಂದ ಬಳಕೆಯಾದ ಸೋಪಿನ ನೀರು ಅಂತರಗಂಗೆ ಸೇರುತ್ತಿದೆ. ಇಷ್ಟೆಲ್ಲಾ ಮಲೀನಗೊಂಡಿದ್ದರೂ ಮಲೆ ಮಹದೇಶ್ವರರ ಮೇಲಿನ ಭಕ್ತಿಯಿಂದ ಭಕ್ತರು ಮಾತ್ರ ಅದೇ ನೀರಲ್ಲಿ ಸ್ನಾನ ಮಾಡುತ್ತಿದ್ದಾರೆ. ಹಲವು ಮಂದಿ ನೀರು ಮಲೀನಗೊಂಡಿರುವುದನ್ನು ಕಂಡು ತಲೆ ಮೇಲೆ ನೀರು ಪ್ರೋಕ್ಷಣೆ ಮಾಡಿಕೊಂಡು ಸಾಗುತ್ತಿದ್ದರೆ, ಮತ್ತೆ ಕೆಲವರು ಉತ್ಕಟ ಧಾರ್ಮಿಕ ಭಾವನೆಯಿಂದ ಅದೇ ನೀರಲ್ಲಿ ಸ್ನಾನ ಮಾಡುತ್ತಿದ್ದಾರೆ.

ಶುದ್ಧಿಕರಣ ಅಗತ್ಯ: ಭಕ್ತಿಯ ಹಿನ್ನಲೆಯಿರುವ ಅಂತರಗಂಗೆಯ ಶುದ್ಧೀಕರಣಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು. ಈಗಾಗಲೇ ದೇವಾಲಯದ ಅಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಸಾಕಷ್ಟು ಅನುದಾನ ಬಿಡುಗಡೆಯಾಗುತ್ತಿದೆ. ಇದರೊಂದಿಗೆ ಭಕ್ತರ ಕಾಣಿಕೆಯಿಂದ ದೇವಾಲಯಕ್ಕೆ ಕೋಟಿ ಕೋಟಿ ಸಂಗ್ರಹವಾಗುತ್ತಿದೆ. ಅನಗತ್ಯ ಕಾಮಗಾರಿಗೆ ವೆಚ್ಚ ಮಾಡದೇ ಅಂತರಗಂಗೆಯನ್ನು ಶುದ್ಧೀಕರಣ ಮಾಡಿ ಪಾವಿತ್ರ್ಯತೆ ಕಾಪಾಡಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಅಂತರಗಂಗೆಗೆ ಹರಿದು ಬರುವ ಚರಂಡಿ ನೀರು ಹಾಗೂ ಸ್ನಾನ ಮತ್ತು ವಸತಿ ಗೃಹದ ನೀರು ಹರಿದು ಹೋಗಲು ಪೈಪ್‌ಲೈನ್ ನಿರ್ಮಾಣ ಮಾಡಬೇಕು. ಎಷ್ಟೋ ಕೆರೆಗಳನ್ನು ಶುದ್ಧೀಕರಣ ಮಾಡಿರುವ ನಿದರ್ಶನಗಳಿದ್ದು, ಅದೇ ಮಾದರಿಯಲ್ಲಿ ಅಂತರಗಂಗೆಯನ್ನು ಶುದ್ಧೀಕರಿಸಬೇಕು ಎಂದು ಬೆಂಗಳೂರಿನ ಮಲೆಮಹದೇಶ್ವರ ಸ್ವಾಮಿ ಭಕ್ತರಾದ ಭರತ್ ಮಹದೇವು ಆಗ್ರಹಿಸಿದ್ದಾರೆ.

ಹುಣಸೂರಿಗೆ ಬಾರಪ್ಪಾ, ನಾವೆಲ್ಲಾ ಗೆಲ್ಲಿಸುತ್ತೇವೆ: ಸಿದ್ದರಾಮಯ್ಯರಿಗೆ ಎಂಎಲ್‌ಸಿ ವಿಶ್ವನಾಥ್ ಟಾಂಗ್

ಬೆಂಗಳೂರು, ಮಾ.29– ಮುಖ್ಯಮಂತ್ರಿಯಾಗಿದ್ದವರೊಬ್ಬರು ಮುಂದಿನ ವಿಧಾನಸಭಾ ಚುನಾವಣೆಗಾಗಿ ಕ್ಷೇತ್ರ ಹುಡುಕುತ್ತಿದ್ದಾರೆ. ಇದು ಕುರುಬ ಸಮಾಜಕ್ಕೇ ನಾಚಿಕೆಯಾಗುವಂತಹದ್ದು. ಎಲ್ಲೂ ಬೇಡ ಹುಣಸೂರಿಗೆ ಬಾರಪ್ಪ. ನೀನು ಹುಣಸೂರಿಗೆ ಬಂದು ನನ್ನನ್ನು ಸೋಲಿಸಿದ್ದೆ. ಅದೇ ಕ್ಷೇತ್ರದಲ್ಲಿ ನಿನ್ನನ್ನು ನಾವೆಲ್ಲಾ ಗೆಲ್ಲಿಸುತ್ತೇವೆ ಎಂದು ವಿಧಾನಪರಿಷತ್‌ನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಅವರು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿರುದ್ಧ ಕಿಡಿಕಾರಿದರು.



ಕರ್ನಾಟಕ ಪ್ರದೇಶ ಕುರುಬರ ಸಂಘದ ಆಡಳಿತ ಮಂಡಳಿಯ ನಿಯಮಬಾಹಿರ ಕಾರ್ಯವೈಖರಿ ವಿರುದ್ಧ ಹಮ್ಮಿಕೊಳ್ಳಲಾಗಿದ್ದ ಪ್ರತಿಭಟನೆಯಲ್ಲಿ ಮಂಗಳವಾರ ಅವರು ಮಾತನಾಡಿದರು. ನಮಗೆ ವಿಶಾಲ ಮನೋಭಾವವಿದೆ. ಸಮಾಜದ ಹಿತಕ್ಕಾಗಿ ತ್ಯಾಗಕ್ಕೆ ಸಿದ್ಧವಿದ್ದೇವೆ. ಈಗ ಮಠದ ಸ್ಥಿತಿ ಏನಾಗಿದೆ. ಮಠಕ್ಕಾಗಿ ಎಲ್ಲಾ ತ್ಯಾಗಗಳನ್ನೂ ಮಾಡಿದ್ದೆ. ಮೂರು ವರ್ಷ ಹೆಂಡತಿ–ಮಕ್ಕಳು, ಕ್ಷೇತ್ರ ಬಿಟ್ಟು ಸುತ್ತಾಡಿದ್ದೆ. ಮುಖ್ಯಮಂತ್ರಿಯಾಗಿದ್ದಾಗ (ಸಿದ್ದರಾಮಯ್ಯ) ನನ್ನನ್ನೇ ಬಿಟ್ಟು ಬೆಳ್ಳಿ ಹಬ್ಬ ಆಚರಣೆ ಮಾಡಿಸಿದರು. ಇದಕ್ಕಿಂತ ಅನ್ಯಾಯ ಬೇಕೇ. ನಿಮಗೆ ನಾಚಿಕೆ ಆಗುವುದಿಲ್ಲವೇ ಎಂದು ಹರಿಹಾಯ್ದರು. ಇದೇನಾ ಸಂಘಟನೆ. ಇದೇನಾ ಕುರುಬರ ಉದ್ಧಾರ. ಮಠ ಇಬ್ಭಾಗ ಮಾಡಿದೀರಿ. ರಾಜಕೀಯ ಒಡೆದೀರಿ, ಕುರುಬರ ಸಂಘ ಇಬ್ಭಾಗ ಮಾಡಿದೀರಿ. ಇನ್ನೇನು ಉಳಿದಿದೆಯಪ್ಪಾ. ನಾನೂ ಕಾಯುತ್ತಿದ್ದೇನೆ. ದಾವಣಗೆರೆಯಲ್ಲಿ ಸಮುದಾಯದ ಸಭೆ ಕರೆಯುತ್ತೇನೆ. ನೀವೆಲ್ಲಾ ಬಂದು ತೀರ್ಮಾನ ಮಾಡಿ ಎಂದರು. ರೇವಣ್ಣ ಏನಾದ. ಆತನನ್ನು ವಿಧಾನಪರಿಷತ್ ಸದಸ್ಯನನ್ನಾಗಿ ಮಾಡಲು ಆಗಲಿಲ್ಲವಲ್ಲ. ಆತ ಈಗ ಬೀದಿಗೆ ಬಿದ್ದಿದ್ದಾನೆ. ನಿಮ್ಮನ್ನು ಕಾಂಗ್ರೆಸ್‌ಗೆ ಸೇರಿಸಿದ್ದು ನಾವು. ನಿಮಗೆ ಕೃತಜ್ಞತೆ ಇದೆಯಾ. ಕೃತಜ್ಞತೆ ಇಲ್ಲದ ನಾಯಕತ್ವ ಜಾಸ್ತಿ ದಿನ ಉಳಿಯುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನಲ್ಲಿ ಮಾಜಿ ಸಿಎಂ ಬಿಎಸ್‌ವೈ

ಮೈಸೂರು, ಮಾ.29(ಜಿಎ)– ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಮಂಗಳವಾರ ಸಂಜೆ ಮೈಸೂರಿಗೆ ಆಗಮಿಸಿದ್ದು, ನಗರದ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದಾರೆ.



ನಾಳೆ(ಮಾ.30) ಬೆಳಗ್ಗೆ 8.30ಕ್ಕೆ ಮೈಸೂರಿನ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ ಸುತ್ತೂರು ಶ್ರೀಗಳ ಆಶೀರ್ವಾದ ಪಡೆಯಲಿದ್ದಾರೆ. ಬಳಿಕ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲೂಕಿನ ಗೌಡಹಳ್ಳಿಯ ವಿರಕ್ತ ಮಠಕ್ಕೆ ತೆರಳಿ ಶ್ರೀ ಮಹಾಂತಸ್ವಾಮೀಜಿ ಹಾಗೂ ಶ್ರೀ ಸಿದ್ಧಲಿಂಗ ಸ್ವಾಮಿಗಳ ಗದ್ದುಗೆಗಳಿಗೆ ಲಿಂಗ ಪ್ರತಿಷ್ಠಾಪನೆ, ಬಸವ ಭವನ, ಬಸವ ದ್ವಾರ, ಪ್ರಸಾದ ನಿಲಯ ಮತ್ತು ಶ್ರೀ ಮಠದ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ವಿಧಾನ ಪರಿಷತ್ ಕಲಾಪದಲ್ಲಿ 40% ಕಮಿಷನ್ ಜಟಾಪಟಿ

ಬೆಂಗಳೂರು, ಮಾ. 29– ಕರ್ನಾಟಕ ವಿಧಾನ ಪರಿಷತ್‌ನಲ್ಲಿಂದು ಗುತ್ತಿಗೆದಾರರಿಂದ ಶೇ.40ರ ಕಮೀಷನ್ ಪಡೆಯುತ್ತಿರುವ ಆರೋಪ ಕುರಿತ ವಿಚಾರವಾಗಿ ಇವತ್ತು ಗದ್ದಲ ಗಲಾಟೆಗೆ ಕಾರಣವಾಯಿತು. ವಿಧಾನ ಪರಿಷತ್ ಕಲಾಪದ ಶೂನ್ಯವೇಳೆಯಲ್ಲಿ ಗುತ್ತಿಗೆದಾರರಿಂದ 40 ಪರ್ಸೆಂಟ್ ಕಮೀಷನ್ ಪಡೆಯುವುದು ಇನ್ನು ನಿಂತಿಲ್ಲ ಎನ್ನುವ ಕುರಿತು ಗುತ್ತಿಗೆದಾರರ ಸಂಘ ಮಾಡಿರುವ ಆರೋಪದ ಕುರಿತು ಮಾಧ್ಯಮಗಳ ವರದಿ ಉಲ್ಲೇಖಿಸಿ ಈ ಬಗ್ಗೆ ತನಿಖೆ ಆಗಬೇಕು ಎಂದು ಕಾಂಗ್ರೆಸ್ ಸಚೇತಕ ಪ್ರಕಾಶ್ ರಾಥೋಡ್ ಒತ್ತಾಯಿಸಿದರು.

ಸರ್ಕಾರದ ಪರ ಉತ್ತರ ನೀಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆಸಿ ಮಾಧುಸ್ವಾಮಿ, ನಿನ್ನೆ ಸದನ ಮುಗಿದು ಇವತ್ತು ಸದನ ಶುರುವಾಗುವ ಮೊದಲು ಆದ ಘಟನೆಗಳ ಬಗ್ಗೆ ಮಾತ್ರ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಬೇಕು. ಆದರೆ ಮಾಧ್ಯಮಗಳ ವರದಿ ಆಧರಿಸಿ ಆರೋಪ ಮಾಡುತ್ತಿದ್ದಾರೆ. ಯಾವ ಸಚಿವರು, ಶಾಸಕರು ಗುತ್ತಿಗೆದಾರರಿಂದ ಕಮೀಷನ್ ಪಡೆದಿದ್ದಾರೆ ಎಂದು ನಿಖರವಾಗಿ ಹೇಳಬೇಕು. ಪತ್ರಿಕೆಗಳಲ್ಲಿ ಬಂದಿದ್ದನ್ನೆಲ್ಲಾ ಇಲ್ಲಿ ತಂದು ಹೇಳುವಂತಿಲ್ಲ ಅಂತ ವಿರೋಧ ಮಾಡಿದರು.

ಇಂತಹ ವಿಷಯ ಶೂನ್ಯವೇಳೆಯಲ್ಲಿ ತರಬಾರದು. ರಾಥೋಡ್‌ನನ್ನ ಬಳಿ 50 ಸಾವಿರ ಕೇಳಿದರು ಅಂತಾ ಪತ್ರಿಕೆಗೆ ನಾನು ಹೇಳಿದರೆ ಅದನ್ನೂ ಇಲ್ಲಿ ಚರ್ಚೆಗೆ ಅವಕಾಶ ನೀಡಲಾಗುತ್ತದೆಯಾ? ಎಂದು ಕಾಂಗ್ರೆಸ್ ಪ್ರಸ್ತಾವನೆಯನ್ನೇ ತಳ್ಳಿಹಾಕಿದರು. ಈ ವೇಳೆ ಕೆಲಕಾಲ ಗದ್ದಲದ ವಾತಾವರಣ ಸೃಷ್ಟಿಯಾಯಿತು. ಕಾಂಗ್ರೆಸ್, ಬಿಜೆಪಿ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಈ ವೇಳೆ ಸಭಾಪತಿ ಬಸವರಾಜ ಹೊರಟ್ಟಿ ಮಧ್ಯಪ್ರವೇಶ ಮಾಡಿ ಶೂನ್ಯವೇಳೆಯಲ್ಲಿ ಚರ್ಚೆಗೆ ಅವಕಾಶವಿಲ್ಲ ಎಂದು ತಿಳಿಸಿ ಪರಿಸ್ಥಿತಿ ನಿಯಂತ್ರಣ ಮಾಡಿದರು.


ಮಂಗಳವಾರ ಮೈಸೂರಿಗೆ ಆಗಮಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಆತ್ಮೀಯವಾಗಿ ಸ್ವಾಗತಿಸಲಾಯಿತು. ಈ ಸಂದರ್ಭದಲ್ಲಿ ಮುಡಾ ಅಧ್ಯಕ್ಷ ರಾಜೀವ್, ಸದಸ್ಯರಾದ ಶ್ರೀಮತಿ ಲಕ್ಷ್ಮೀದೇವಿ, ಮುಖಂಡರಾದ ಗೆಜ್ಜಗಳ್ಳಿ ಮಹೇಶ್, ನಾಗೇಶ್, ಮುರುಳಿ, ರಂಗನಾಥ್, ಇತರರು ಉಪಸ್ಥಿತರಿದ್ದರು.

25 ವರ್ಷದ ಯುವತಿ ಜೊತೆ ವಿವಾಹವಾಗಿದ್ದ 45 ವರ್ಷದ ಶಂಕರಣ್ಣ ಆತ್ಮಹತ್ಯೆ

ತುಮಕೂರು, ಮಾ.29– ಕಳೆದ ವರ್ಷ 45 ವರ್ಷದ ವ್ಯಕ್ತಿ ಜೊತೆಗೆ 25ರ ಯುವತಿ ಮದುವೆಯಾಗಿದ್ದ ಸುದ್ದಿ ಸೋಶಿಯಲ್ ಮೀಡಿಯಾದಲ್ಲಿ ಭಾರೀ ಸದ್ದು ಮಾಡಿತ್ತು. ಆದರೀಗ ಈ ವ್ಯಕ್ತಿ ಆತ್ಮಹತ್ಯೆಗೆ ಶರಣಾಗಿದ್ದಾರೆ.



ಶಂಕರಣ್ಣ(45) ಮೃತ ದುರ್ದೈವಿಯಾಗಿದ್ದು, ಕಳೆದ ವರ್ಷ ಕುಣಿಗಲ್ ತಾಲೂಕಿನ ಚೌಡನಕುಪ್ಪೆ ಗ್ರಾಮದ ಬಳಿಯಿರುವ ಅಕ್ಕಿಮರಿಪಾಳ್ಯದ ಶಂಕರಣ್ಣ ಮತ್ತು ಮೇಘನಾ ಅವರ ಮದುವೆ ನಡೆದಿತ್ತು.

ಆದರೆ ಮದುವೆಯಾದ ಆರು ತಿಂಗಳಲ್ಲಿಯೇ ಶಂಕರಣ್ಣ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ, ಮೂರ್ನಾಲ್ಕು ದಿನದಿಂದ ಗಂಡ, ಹೆಂಡತಿ ನಡುವೆ ಜಗಳ ನಡೆಯುತ್ತಿತ್ತು ಹೀಗಾಗಿ ಕೋಪ ಮಾಡಿಕೊಂಡು ಸೋಮವಾರ ಮನೆ ಬಿಟ್ಟು ಹೋಗಿದ್ದ ಶಂಕರಣ್ಣನವರು, ಕುಣಿಗಲ್ ತಾಲೂಕಿನ ಅಕ್ಕಿಮರಿಪಾಳ್ಯದಲ್ಲಿದ್ದ ತಮ್ಮ ತೋಟದಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಸಾವನ್ನಪ್ಪಿದ್ದಾರೆ ಎನ್ನಲಾಗಿದೆ.

ಅತ್ತೆ–ಸೊಸೆ ನಡುವೆ ನಿರಂತರವಾಗಿ ಜಗಳ ನಡೆಯುತ್ತಿತ್ತು ಎನ್ನಲಾಗಿದೆ. ಇವರಿಬ್ಬರನ್ನು ಸಮಾಧಾನಪಡಿಸಲು ಶಂಕರಣ್ಣ ಎಷ್ಟು ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಹಾಗಾಗಿ ಏನಾದರೂ ಮಾಡಿಕೊಳ್ಳಿ, ನಾನೇ ಮನೆ ಬಿಟ್ಟು ಹೋಗ್ತೀನಿ ಎಂದು ಹೇಳಿ ಹೋದ ಶಂಕರಣ್ಣ, ತಮ್ಮ ತೋಟದಲ್ಲಿ ಆತ್ಮಹತ್ಯೆಗೆ ಶರಣಾಗಿದ್ದಾರೆ.

2021ರಲ್ಲಿ ಮದುವೆಯಾಗಿದ್ದ ಈ ದಂಪತಿ ಫೋಟೋ ಸೋಶಿಯಲ್ ಮೀಡಿಯಾದಲ್ಲಿ ಭಾರೀ ವೈರಲ್ ಆಗಿತ್ತು. ಸಂತೆ ಮಾವತ್ತೂರು ಗ್ರಾಮದ ನಿವಾಸಿಯಾಗಿದ್ದ ಮೇಘನಾಗೆ ಈ ಮುನ್ನ ಬೇರೆಯವರೊಂದಿಗೆ ಮದುವೆಯಾಗಿತ್ತು ಎನ್ನಲಾಗಿದೆ. ಶಂಕರಣ್ಣ ಅವರ ತಾಯಿ ನೀಡಿದ ದೂರಿನ ಮೇರೆಗೆ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ. ಮೇಘನಾ ಈಗ 4 ತಿಂಗಳ ಗರ್ಭಿಣಿ.

ಮುಷ್ಕರದ ಆಕ್ರೋಶ ರಾಜಕೀಯ ತೀರ್ಮಾನವಾಗಿ ಪರಿವರ್ತನೆ ಆಗಲಿ

ಮೈಸೂರು,ಮಾ.29(ಪಿಎಂ)–ಮುಷ್ಕರದ ಆಕ್ರೋಶ ಒಂದು ರಾಜಕೀಯ ತೀರ್ಮಾನವಾಗಿ ಪರಿವರ್ತನೆಯಾಗಬೇಕು ಎಂದು ಕಾರ್ಮಿಕ ಮುಖಂಡ ಹೆಚ್.ಆರ್.ಶೇಷಾದ್ರಿ ಕರೆ ನೀಡಿದರು. ಮುಷ್ಕರದ ಆಕ್ರೋಶ ಒಂದು ರಾಜಕೀಯ ತೀರ್ಮಾನವಾಗಿ ಪರಿವರ್ತನೆಯಾಗುವ ಮೂಲಕ ಸಂದರ್ಭ ಬಂದಾಗ ನಿಮ್ಮ ತೀರ್ಪು ನೀಡಿ. ಸಂಸತ್ತು ಮತ್ತು ವಿಧಾನಸಭೆಗೆ ಸೂಕ್ತವಾದವರನ್ನು ಚುನಾಯಿಸಿ, ಆಗ ನಿಮ್ಮ ಸಮಸ್ಯೆಗಳು ಸ್ವಲ್ಪವಾದರೂ ಕಡಿಮೆಯಾಗಲಿವೆ ಎಂದು ತಿಳಿಸಿದರು.

ಸಂಸತ್ ಮತ್ತು ಶಾಸನಸಭೆಗಳಲ್ಲಿ ಯಾವುದೇ ಚರ್ಚೆ ಇಲ್ಲದೆ ಕಾನೂನು ಜಾರಿಗೆ ಅನುಮೋದನೆ ನೀಡಲಾಗುತ್ತಿದೆ. 29 ಕಾರ್ಮಿಕ ಪರ ಕಾಯ್ದೆಗಳನ್ನು ಕೇವಲ 4 ಸಂಹಿತೆ ಆಗಿ ಮಾಡಲಾಯಿತು. ಇದು ಜಾರಿಯಾದರೆ ದುಡಿಯುವ ವರ್ಗದ ಹಕ್ಕುಗಳು ಸಂಪೂರ್ಣ ಮೊಟಕಾಗಲಿವೆ. ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ರಿಯಾಯಿತಿ ನೀಡಲಾಗಿದೆ. ಆದರೆ ಜನಸಾಮಾನ್ಯರಿಗೆ ಬೇಕಿರುವ ಯಾವುದೇ ಅಂಶಗಳ ಬಗ್ಗೆ ಇವರು ತಲೆ ಕೆಡಿಸಿಕೊಂಡಿಲ್ಲ ಎಂದು ದೂರಿದರು. ಕೇಂದ್ರ ಸರ್ಕಾರದಲ್ಲಿ 9 ಲಕ್ಷ ಹುದ್ದೆಗಳು ಖಾಲಿ ಇದ್ದರೆ, ರಾಜ್ಯ ಸರ್ಕಾರದಲ್ಲಿ 2 ಲಕ್ಷ 58 ಸಾವಿರ ಹುದ್ದೆಗಳು ಖಾಲಿ ಇವೆ. ಆದರೆ ಭರ್ತಿ ಮಾಡದೇ ನಿರುದ್ಯೋಗ ಸಮಸ್ಯೆ ಕಾಡುವಂತೆ ಮಾಡಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಂಬಾಕು ಬೆಳೆಗೆ ಅವಶ್ಯ ಎಸ್‌ಓಪಿ ಬೆಲೆ ಇಳಿಕೆಗೆ ಕೇಂದ್ರ ರಸಗೊಬ್ಬರ ಸಚಿವ ಖೂಬಾಗೆ ಪ್ರತಾಪ್ ಸಿಂಹ ಮನವಿ

ಮೈಸೂರು, ಮಾ.29(ಎಸ್‌ಬಿಡಿ)– ತಂಬಾಕು ಬೆಳೆಗೆ ಹೆಚ್ಚು ಬಳಸುವ ಪೊಟ್ಯಾಷಿಯಮ್ ಸಲ್ಫೇಟ್(ಎಸ್‌ಓಪಿ) ಬೆಲೆ ಇಳಿಕೆಗೆ ಕ್ರಮ ಕೈಗೊಳ್ಳುವಂತೆ ಮೈಸೂರು–ಕೊಡಗು ಸಂಸದ ಪ್ರತಾಪ್ ಸಿಂಹ, ಕೇಂದ್ರ ರಸಗೊಬ್ಬರ ಖಾತೆ ಸಚಿವ ಭಗವಂತ್ ಖೂಬಾ ಅವರಿಗೆ ಮನವಿ ಸಲ್ಲಿಸಿದ್ದಾರೆ.



ಸಚಿವರನ್ನು ಮಂಗಳವಾರ ನವದೆಹಲಿಯಲ್ಲಿ ಭೇಟಿ ಮಾಡಿದ ಪ್ರತಾಪ್ ಸಿಂಹ, ಪೂರ್ಣ ಪ್ರಮಾಣದಲ್ಲಿ ವಿದೇಶಗಳಿಂದ ಆಮದು ಮಾಡಿಕೊಳ್ಳಲಾಗುತ್ತಿರುವ ಎಸ್‌ಓಪಿ ಬೆಲೆ ಇದೀಗ ದುಪ್ಪಟ್ಟಾಗಿದೆ. ಅಲ್ಲದೆ ಈ ರಸಗೊಬ್ಬರ ಸಬ್ಸಿಡಿ ಯೋಜನೆ(ಎನ್‌ಬಿಎಸ್)ಯಡಿ ಬರುವುದಿಲ್ಲ. ಇದನ್ನು ತಂಬಾಕು ಬೆಳೆಗೆ ಹೆಚ್ಚಿನ ಪ್ರಮಾಣದಲ್ಲಿ ಬಳಸಲಾಗುತ್ತದೆ. ಬೆಲೆ ಏರಿಕೆಯಿಂದ ತಂಬಾಕು ಬೆಳೆಗಾರರಿಗೆ ಆರ್ಥಿಕ ಹೊರೆಯಾಗಲಿದ್ದು, ಎಸ್‌ಓಪಿ ಪೂರೈಸುವ ಐಪಿಎಲ್ ಹಾಗೂ ಟ್ರಾನ್ಸ್‌ವರ್ಲ್ಡ್ ಕಂಪನಿಗಳ ಮೇಲೆ ಒತ್ತಡ ತಂದು ಬೆಲೆ ಇಳಿಕೆ ಮಾಡಿಸುವ ಮೂಲಕ ರೈತರಿಗೆ ನೆರವಾಗಬೇಕು ಎಂದು ಒತ್ತಾಯಿಸಿದರು.

ಬೊಮ್ಮಾಯಿ ಬಜೆಟ್‌ಗೆ ಮೇಲ್ಮನೆಯಲ್ಲಿ ಅಂಗೀಕಾರ

ಬೆಂಗಳೂರು, ಮಾ.29– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇತ್ತೀಚೆಗೆ ಮಂಡಿಸಿದ್ದ 2.65 ಲಕ್ಷಕೋಟಿ ರೂಪಾಯಿಯ ಬಜೆಟ್‌ಗೆ ಮೇಲ್ಮನೆಯಲ್ಲಿಂದು ಧ್ವನಿಮತದ ಅಂಗೀಕಾರ ದೊರೆತಿದೆ.

ಮೇಲ್ಮನೆಯಲ್ಲಿ ಸಭಾಪತಿ ಬಸವರಾಜ ಹೊರಟ್ಟಿ ಶಾಸನ ರಚನಾ ಕಲಾಪ ಕೈಗೆತ್ತಿಕೊಂಡರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭೆಯಲ್ಲಿ ಅಂಗೀಕಾರವಾದ ಕರ್ನಾಟಕ ಧನವಿಧೇಯಕ 2022ನ್ನು ಪರ್ಯಾಲೋಚನೆ ಒಳಪಡಿಸಿ, ಅಂಗೀಕಾರ ನೀಡುವಂತೆ ಮನವಿ ಮಾಡಿದರು. ಬಜೆಟ್ ಮೇಲೆ ಈಗಾಗಲೇ 37 ಮಂದಿ ಸದಸ್ಯರು ಚರ್ಚೆ ಮಾಡಿದ್ದಾರೆ, ನಾನು ಕೂಡ ಉತ್ತರ ನೀಡಿದ್ದೇನೆ. ಹೆಚ್ಚಿನ ವಿವರದ ಅಗತ್ಯ ಇಲ್ಲ. ಎಲ್ಲರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಹೋಗುವುದು ನಮ್ಮ ಉದ್ದೇಶವಾಗಿದೆ. ಬಜೆಟ್ ಒಂದು ಅಂದಾಜು ಪಟ್ಟಿಯಾಗಿದ್ದು, ಇದರ ಅನುಷ್ಠಾನದಲ್ಲಿ ಎಲ್ಲರೂ ಸಹಭಾಗಿಗಳಾಗಬೇಕು. ಜನರು ಬಜೆಟ್ ಕಾರ್ಯಕ್ರಮದಲ್ಲಿ ಪಾಲುದಾರರಾಗಬೇಕು.

ಆರ್ಥಿಕ ಶಕ್ತಿಯನ್ನು ಅಶಕ್ತರಿಗೆ ತಲುಪಬೇಕು, ಜೀವನೋಪಾಯ ಮಾತ್ರವಲ್ಲ, ಆರ್ಥಿಕ ಚಟುವಟಿಕೆಗಳ ಮೂಲಕ ಸಬಲೀಕರಣವಾಗಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ ಎಂದರು. ಹೊಸ ಮೂಲಗಳ ಮೂಲಕ ಸಂಪನ್ಮೂಲ ಕ್ರೋಢೀಕರಣ ಹೆಚ್ಚಿಸಲಾಗಿದೆ. ಸೋರಿಕೆ ತಡೆಯಲಾಗಿದೆ. ಹಾಗಾಗಿ ರಾಜ್ಯಕ್ಕೆ 26 ಸಾವಿರ ಕೋಟಿ ಹೆಚ್ಚುವರಿ ಆದಾಯ ಬಂದಿದೆ. ಸಾಮರ್ಥ್ಯವಿದ್ದರೂ ಕಡಿಮೆ ಸಾಲ ಪಡೆಯಲಾಗಿದೆ. ಮುಂದಿನ ದಿನಗಳಲ್ಲಿ ಒಟ್ಟು ಸಾಲದ ಪ್ರಮಾಣದಲ್ಲೂ ಕಡಿಮೆ ಮಾಡುವುದಾಗಿ ಭರವಸೆ ನೀಡಿದ್ದಲ್ಲದೆ, ತಾವು ಮಂಡಿಸಿದ 2.65 ಲಕ್ಷ ಕೋಟಿ ರೂಪಾಯಿಯ ಬಜೆಟ್ ಗೆ ಅನುಮೋದನೆ ನೀಡುವಂತೆ ಮನವಿ ಮಾಡಿದರು. ಮೇಲ್ಮನೆ ಬಜೆಟ್ ಗೆ ಧ್ವನಿಮತದ ಅಂಗೀಕಾರ ದೊರಕಿತು.

ಅಲ್ಪಸಂಖ್ಯಾತ ಮಕ್ಕಳ ಸ್ಕಾಲರ್‌ಶಿಪ್ ನಿಲ್ಲಿಸಲ್ಲ, ಶಾದಿ ಮಹಲ್ ಮಾತ್ರ ನಿಲ್ಲಿಸುತ್ತೇವೆ

ಬೆಂಗಳೂರು, ಮಾ.29– ಅಲ್ಪಸಂಖ್ಯಾತ ಮಕ್ಕಳ ಸ್ಕಾಲರ್‌ಶಿಪ್ ನಿಲ್ಲಿಸಲ್ಲ ಎಂದು ಸ್ಪಷ್ಟಪಡಿಸಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶಾದಿ ಮಹಲ್ ಮಾತ್ರ ನಿಲ್ಲಿಸುತ್ತೇವೆ ಎಂದಿದ್ದಾರೆ.




ವಿಧಾನಪರಿಷತ್‌ನಲ್ಲಿ ವಿಪಕ್ಷ ನಾಯಕ ಬಿ.ಕೆ. ಹರಿಪ್ರಸಾದ್, ಅಲ್ಪಸಂಖ್ಯಾತ ಮಕ್ಕಳಿಗೆ ಸರ್ಕಾರ ನೀಡುತ್ತಿರುವ ಸ್ಕಾಲರ್‌ಶಿಪ್ ನಿಲ್ಲಿಸುವ ವಿಷಯ ಕೇಳಿ ಬರುತ್ತಿದೆ ಎಂದಾಗ ಮುಖ್ಯಮಂತ್ರಿಗಳು ಪ್ರತಿಕ್ರಿಯಿಸಿದರು. ಶಾಲಾ ಮಕ್ಕಳ ಸ್ಕಾಲರ್ ಶಿಪ್, ಹೈಯರ್ ಎಜುಕೇಶನ್ ನಿಲ್ಲಿಸುವ ಕೆಲ ಪ್ರಯತ್ನ ಈ ಹಿಂದೆ ಆಗಿತ್ತು. ಆದರೆ ಈಗ ಯಾವುದನ್ನೂ ಕೂಡ ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರಲ್ಲದೆ, ಅದರಲ್ಲೂ ಯಾವುದೇ ಅಲ್ಪಸಂಖ್ಯಾತ ಮಕ್ಕಳ ಸ್ಕಾಲರ್‌ಶಿಪ್ ನಿಲ್ಲಿಸೋದಿಲ್ಲ, ಶಾದಿ ಮಹಲ್ ಮಾತ್ರ ನಿಲ್ಲಿಸುತ್ತೇವೆ ಎಂದರು.

ಮಕ್ಕಳ ಸ್ಕಾಲರ್‌ಶಿಪ್ ದಯವಿಟ್ಟು ನಿಲ್ಲಿಸಬೇಡಿ: ಮುಖ್ಯಮಂತ್ರಿಗಳೆ, ಹಿಜಾಬ್ ವಿಚಾರ ನೀವು ಏನಾದ್ರೂ ಮಾಡಿಕೊಳ್ಳಿ, ಆದರೆ ಸ್ಕಾಲರ್‌ಶಿಪ್ ಮಾತ್ರ ದಯವಿಟ್ಟು ನಿಲ್ಲಿಸಬೇಡಿ ಎಂದು ಬಿ.ಕೆ.ಹರಿಪ್ರಸಾದ್ ಅವರು ಸಿಎಂ ಬೊಮ್ಮಾಯಿ ಗಮನಕ್ಕೆ ತಂದಾಗ, ಸ್ಕಾಲರ್‌ಶಿಪ್‌ಗೆಂದೇ 100 ಕೋಟಿ ರೂಪಾಯಿ ಅನುದಾನವನ್ನೂ ಮಂಜೂರು ಮಾಡುತ್ತೇನೆ ಎಂದು ಸಿಎಂ ಭರವಸೆ ನೀಡಿದರು.

ಸಮಗ್ರ ಸಾಹಿತ್ಯ ಸಂಪುಟ ಭಾಗ–1, ಭಾಗ–2 ಕೃತಿ ಲೋಕಾರ್ಪಣೆ

ವಿಶ್ವಕರ್ಮ ಸಮುದಾಯವನ್ನು ಎಚ್ಚರಿಸಲು ಗ್ರಂಥ ರಚನೆ



ಮೈಸೂರು, ಮಾ.29(ಜಿಎ)– ಬೆಂಗಳೂರಿನ ನಾ.ಭಾ. ಪ್ರಕಾಶನ, ಮೈಸೂರಿನ ವಿಶ್ವವಿಕಾಶ ಟ್ರಸ್ಟ್ ಮತ್ತು ಹುಬ್ಬಳ್ಳಿಯ ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ ಆಶ್ರಯದಲ್ಲಿ ಮೈಸೂರಿನ ಕುವೆಂಪುನಗರದ ಗಾನಭಾರತಿ, ವೀಣೆ ಶೇಷಣ್ಣ ಭವನದಲ್ಲಿ ಮಂಗಳವಾರ ಏರ್ಪಡಿಸಿದ್ದ ಗ್ರಂಥಗಳ ಲೋಕಾರ್ಪಣೆ ಸಮಾರಂಭದಲ್ಲಿ ವಿಶ್ವಕರ್ಮ ಜಗದ್ಗುರು ಸುಜ್ಞಾನಪ್ರಭು ಪೀಠದ ಶ್ರೀ ಶಿವಸುಜ್ಞಾನ ತೀರ್ಥ ಸ್ವಾಮೀಜಿ ಅವರು ವೈದಿಕ ವಿದ್ಯಾ ಭೂಷಣ ಮ.ಗಂಗಾಧರ ಮೂರ್ತಿ ಅವರ ಸಮಗ್ರ ಸಾಹಿತ್ಯ ಸಂಪುಟ ಭಾಗ–1 ಮತ್ತು ಭಾಗ–2 ಗ್ರಂಥವನ್ನು ಲೋಕಾರ್ಪಣೆಗೊಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿವಿ ಪ್ರಾಧ್ಯಾಪಕ ಡಾ. ಶೆಲ್ವ ಪಿಳ್ಳೈ ಐಯ್ಯಂಗಾರ್ ಅವರು ಮ.ಗಂಗಾಧರ ಮೂರ್ತಿ ಗ್ರಂಥ ಕುರಿತು ಮಾತನಾಡುತ್ತ ರಾಮಾನುಜರು ವಿಶ್ವಕರ್ಮ ಎಂದರೆ ವಿಷ್ಣು ಎಂದಿದ್ದಾರೆ. ಶಂಕರಾಚಾರ್ಯರು ವಿಶ್ವಕರ್ಮ ಎಂದರೆ ಜಗತ್ತಿನ ಸೃಷ್ಟಿಗೆ ಕಾರಣನಾದವರು ಯಾರೋ ಅವರು ಎಂದು ಬರೆಯುತ್ತಾರೆ. ಮಧ್ವಾಚಾರ್ಯರು ಹರಿ ಎಂದು ಹೇಳುತ್ತಾರೆ ಎಂದರು.

ಈ ಪುಸ್ತಕವನ್ನು ಅಧ್ಯಯನ ಮಾಡಿದರೆ 16 ಸಂಸ್ಕಾರವನ್ನು ಕಲಿಯಬಹುದಾಗಿದೆ. ಮ. ಗಂಗಾಧರಮೂರ್ತಿಯವರು ಸಮುದಾಯವನ್ನು ಎಚ್ಚರಿಸಲು ಪುಸ್ತಕವನ್ನು ಬರೆದಿದ್ದಾರೆ ಅನಿಸುತ್ತಿದೆ. ಏಕೆಂದರೆ 1930ರಲ್ಲಿ ಬಹಳಷ್ಟು ಜನ ಆಚಾರಗಳನ್ನು ಬಿಟ್ಟು ಬಿಟ್ಟಿದ್ದರು. ಶೇ.50ರಷ್ಟು ಮಂದಿ ಅಥಂಬಥ ಸಾಂಪ್ರಾಯನ್ನು ಅನುಸರಿಸುತ್ತಿದ್ದು. ಶೇ.15ರಷ್ಟು ಮಂದಿ ಸಂಪ್ರದಾಯಕವಾಗಿ ಜೀವನವನ್ನು ಸಾಗಿಸುತ್ತಿದ್ದರು. ಸಮುದಾಯದ ಬಾಕಿ ಜನರನ್ನು ಜಾಗೃತಿಗೊಳಿಸಲು ಮ. ಗಂಗಾಧರಮೂರ್ತಿಯವರು ಪುಸ್ತಕಗಳನ್ನು ಬರೆಯಲು ಮುಂದಾಗಿದ್ದಾರೆ. ಕಲಿಯುಗದಲ್ಲಿ ಸಮುದಾಯಗಳು ಒಗ್ಗೂಡದಿದ್ದರೆ ಆ ಸಮುದಾಯವನ್ನು ನಿರ್ಲಕ್ಷಿಸಲಾಗುತ್ತದೆ. ರಾಜಕೀಯವಾಗಿ ಒಗ್ಗೂಡಲು ಸಾಧ್ಯವಾಗುವುದಿಲ್ಲ. ಸಾಂಸ್ಕೃತಿಕವಾಗಿ ಒಗ್ಗೂಡಬೇಕು ಹೊರತು ರಾಜಕೀಯವಾಗಿ ಒಂದು ಪಕ್ಷಕ್ಕೆ ಒಗ್ಗೂಡಿದರೆ ಅತಂತ್ರವಾಗುತ್ತಿರ ಎಂದು ಗ್ರಂಥದಲ್ಲಿ ತಿಳಿಸಿದ್ದಾರೆ ಎಂದರು.

ಇಂದು ಯಾವುದೇ ಸಂಶೋಧನೆ ಮಾಡುತ್ತವೆ ಎಂದರೆ ಎಲ್ಲಾ ಮಾಹಿತಿಗಳು ಸುಲಭವಾಗಿ ದೊರೆಯುತ್ತದೆ. ಗಂಗಾಧರ ಮೂರ್ತಿಯವರು ಅಂದಿನ ಕಾಲದಲ್ಲಿ ಪ್ರತಿಯೊಂದು ಪುಸ್ತಕಗಳನ್ನು ಓದಿ ಅಧ್ಯಯನ ಮಾಡಿ ಅದರ ಆಧಾರದ ಮೇಲೆ ಪುಸ್ತಕಗಳನ್ನು ಬರೆದಿದ್ದಾರೆ. 1200 ಪುಟದ ಪುಸ್ತಕ ಬರೆದಿದ್ದಾರೆ ಎಂದರೆ ಅವರು ಸಾಮಾನ್ಯ ವ್ಯಕ್ತಿಯಲ್ಲ ಎಂದು ಅನಿಸುತ್ತದೆ ಎಂದ ಅವರು, ಇಂದು ನಾ.ಭಾ. ಪ್ರಕಾಶನ, ವಿಶ್ವ ವಿಕಾಸ ಟ್ರಸ್ಟ್ ಮತ್ತು ಶ್ರೀ ವಿಶ್ವಮಯ ಸಾಹಿತ್ಯ ಪ್ರಚಾರ ಸಮಿತಿ ಅವರು ಗ್ರಂಥದಲ್ಲಿರುವ ಎಲ್ಲ ವೇದ ಮಂತ್ರಗಳನ್ನು ಯಾವುದೇ ತಪ್ಪುಗಳಿಲ್ಲದೆ ಅದ್ಭುತವಾಗಿ ಮುದ್ರಿಸಿದ್ದಾರೆ ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ವಿಶ್ವಕರ್ಮ ಮಹಾ ಒಕ್ಕೂಟ ಅಧ್ಯಕ್ಷ ಹುಚ್ಚಪ್ಪಚಾರ್ಯ, ಶಿಲ್ಪಿ ಅರುಣ್ ಯೋಗಿರಾಜ್ ಅವರನ್ನು ಸನ್ಮಾನಿಸಲಾಯಿತು. ಹಾಗೂ ಚಿನ್ಮಯಿ ಆಚಾರ್ಯ ನಡೆಸಿಕೊಟ್ಟ ಭರತನಾಟ್ಯ ಪ್ರದರ್ಶನ ಎಲ್ಲರ ಗಮನಸೆಳೆಯಿತು.

ಕುಂದೂರು ಮಠದ ಶರಚ್ಚಂದ್ರ ಸ್ವಾಮೀಜಿ, ನಿವೃತ್ತ ಐಎಎಸ್ ಅಧಿಕಾರಿ ಕೆಎಸ್.ಪ್ರಭಾಕರ್, ನಿವೃತ್ತ ಕೆಎಎಸ್ ಅಧಿಕಾರಿ ಬಿ.ಎಲ್. ವೇದಮೂರ್ತಿ, ವಿಶ್ವವಿಕಾಸ ಟ್ರಸ್ಟ್ ಅಧ್ಯಕ್ಷ ಮಂಟೇಲಿಂಗಾಚಾರ್ಯ, ನಿವೃತ್ತ ಉಪನ್ಯಾಸಕ ಡಾ.ಸಿ.ನಾಗಣ್ಣ, ನಿವೃತ್ತ ಇಂಜಿನಿಯರ್ ಎನ್.ಸಿ. ಛಾಯಾಪತಿ, ಇಂ.ಭೀಮಸೇನ ಬಡಿಗೇರ್, ಭುವನೇಶ್ವರಿ ಮಂಜುನಾಥ್, ರೇಖಾ, ಪರಬ್ರಹ್ಮಾ ಚಾರ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮೋರಿಗೆ ಬಿದ್ದು ಅಪರಿಚಿತ ವ್ಯಕ್ತಿಗೆ ಗಾಯ

ಮೈಸೂರು, ಮಾ.29– ನಗರದ ನೀಲಗಿರಿ ರಸ್ತೆ(ಮೈಸೂರು–ಬೆಂಗಳೂರು)ಯ ಬದಿಯಲ್ಲಿರುವ ದೊಡ್ಡ ಮೋರಿಗೆ ಬಿದ್ದು ಗಾಯಗೊಂಡಿದ್ದ ಅಪರಿಚಿತ ವ್ಯಕ್ತಿಯನ್ನು ಸಾರ್ವಜನಿಕರು ಪೊಲೀಸರ ಸಹಕಾರದಿಂದ ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ತಿಳಿದುಬಂದಿದೆ.

ಮೈಸೂರಲ್ಲಿ ಸಾಧಾರಣ ಮಳೆ

ಮೈಸೂರು, ಮಾ.29– ಮೈಸೂರಿನ ಕೆಲವೆಡೆ ಮಂಗಳವಾರ ರಾತ್ರಿ ಸಾಧಾರಣ ಮಳೆಯಾಯಿತು. ರಾತ್ರಿ 8.30ರ ವೇಳೆಗೆ ನಗರದ ಬನ್ನಿಮಂಟಪ, ಬಂಬೂ ಬಜಾರ್, ಯಾದವಗಿರಿ, ಒಂಟಿಕೊಪ್ಪಲು ಕೆ.ಟಿ.ಸ್ಟ್ರೀಟ್ ಸೇರಿದಂತೆ ಕೆಲವೆಡೆ ಸಾಧಾರಣ ಮಳೆಯಾಯಿತು. ಪರಿಣಾಮ ಕೆಲಕಾಲ ವಾಹನ ಸವಾರರಿಗೆ, ಪಾದಚಾರಿಗಳಿಗೆ ತೊಂದರೆ ಉಂಟಾಯಿತು.

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಮಳವಳ್ಳಿ ಪುರಸಭೆಯಲ್ಲಿ 77.15 ಲಕ್ಷ ರೂ. ಉಳಿತಾಯ ಬಜೆಟ್ ಮಂಡನೆ



ಮಳವಳ್ಳಿ, ಮಾ.29(ಮೋಹನ್‌ರಾಜ್)- ಪಟ್ಟಣದ ಪುರಸಭೆಯ ಸಾಮಾನ್ಯ ಸಭೆಯಲ್ಲಿ 2022-23ನೇ ಸಾಲಿನ 77.15ಲಕ್ಷ ರೂ. ಉಳಿತಾಯ ಬಜೆಟನ್ನು ಪುರಸಭೆಯ ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟಸ್ವಾಮಿ ಮಂಡಿಸಿದರು.

ಪುರಸಭೆ ಕಾರ್ಯಾಲಯದ ಸಭಾಂಗಣದಲ್ಲಿ ಅಧ್ಯಕ್ಷೆ ರಾಧಾ ನಾಗರಾಜು ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟಸ್ವಾಮಿ ಮಂಡಿಸಿರುವ ಬಜೆಟ್‌ನಲ್ಲಿ ಪಟ್ಟಣದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರದ ವಿವಿಧ ಇಲಾಖೆಗಳ ಅನುದಾನ ಸೇರಿದಂತೆ ಪ್ರಸ್ತುತ ವರ್ಷ 26.93.79.800 ರೂ.ಗಳ ಆದಾಯವನ್ನು ನಿರೀಕ್ಷಿಸಲಾಗಿದೆ. ಅದರಲ್ಲಿ 26.16.64.800 ರೂ.ಗಳನ್ನು ವಿವಿಧ ಬಾಬ್ತಿಗೆ ಖರ್ಚು ಮಾಡಲು ತೀರ್ಮಾನಿಸಲಾಗಿದೆ ಒಟ್ಟು 77.15 ಲಕ್ಷರೂ ಉಳಿತಾಯದ ಗುರಿಯನ್ನು ಹೊಂದಲಾಗಿದೆ ಎಂದರು.

ಜೆಡಿಎಸ್ ಸದಸ್ಯ ಎಂ.ಟಿ.ಪ್ರಶಾಂತ್ ಮಾತನಾಡಿ, ಬಜೆಟ್‌ನಲ್ಲಿ ಅಂಗವಿಕಲರಿಗೆ ಅನುದಾನ ನೀಡಬೇಕು. ಶೆಟ್ಟಹಳ್ಳಿ ಗ್ರಾಮ ಪಂಚಾಯತಿಯ ವ್ಯಾಪ್ತಿಯ ಆಸ್ತಿಯನ್ನು ಪುರಸಭೆ ಹಸ್ತಾಂತರ ಮಾಡಿಕೊಳ್ಳಬೇಕು ಎಂದರು.

ಪಟ್ಟಣದ ಅಭಿವೃದ್ಧಿಗಾಗಿ ಸದಸ್ಯರ ಅಧ್ಯಯನ ಪ್ರವಾಸಕ್ಕೆ ಯೋಜನೆ ರೂಪಿಸಬೇಕು. ರೋಟರಿ ಹಳೆಯ ಕಟ್ಟಡವನ್ನು ಉಪಯೋಗಿಸದ ಹಿನ್ನೆಲೆಯಲ್ಲಿ ಸೂಕ್ತ ಕ್ರಮ ವಹಿಸಲು ಹಳೆಯ ಒಪ್ಪಂದವನ್ನು ರದ್ದು ಪಡಿಸಬೇಕು ಎಂದು ಹೇಳಿದರು.

ಕಾಂಗ್ರೆಸ್ ಸದಸ್ಯ ಎಂ.ಎನ್.ಶಿವಸ್ವಾಮಿ ಮಾತನಾಡಿ, ಪ್ರಕೃತಿ ವಿಕೋಪ ನಿಧಿಯನ್ನು 1 ಲಕ್ಷದಿಂದ 5 ಲಕ್ಷ ರೂ.ಗೆ ಹೆಚ್ಚಳ ಮಾಡಬೇಕು. ಮಳೆ ಬಂದ ಸಂದರ್ಭದಲ್ಲಿ ಮೈಸೂರು ರಸ್ತೆಯಲ್ಲಿ ಆಗುವ ಅನಾಹುತವನ್ನು ತಪ್ಪಿಸಲು 300 ಮೀಟರ್ ಉದ್ದದ ಕಾಮಗಾರಿಗೆ ಹೆಚ್ಚಿನ ಅನುದಾನ ನೀಡಿ ಅಲ್ಲದೇ ತೆರಿಗೆ ವಸೂಲಿಗೆ ಹೆಚ್ಚಿನ ಒತ್ತು ನೀಡಬೇಕು. ಪಟ್ಟಣದ ದಿನದಿಂದ ದಿನಕ್ಕೆ ಬೆಳೆಯುತ್ತಿದ್ದು, ನೀರಿನ ಕರ ವಸೂಲಿಯನ್ನು ಖಾಸಗಿ ಕಂಪನಿಗೆ ವಹಿಸಬೇಕು ಎಂದು ಒತ್ತಾಯಿಸಿದರು. ಬಿಜೆಪಿ ಸದಸ್ಯ ಎಂ.ಎನ್.ಕೃಷ್ಣ ಮಾತನಾಡಿ, ಹೊಸ ಆಯವ್ಯಯದಲ್ಲಿ ಪುರಸಭೆ ವ್ಯಾಪ್ತಿಯಲ್ಲಿ ಬಾಡಿಗೆ ರೂಪದಲ್ಲಿ ಬರೀ 20 ಸಾವಿರ ಆದಾಯ ಬರುತ್ತದೆ ಎಂದರೆ, ಲಕ್ಷಾಂತರ ರೂ.ಆದಾಯ ಬರುವ ಜಾಗದಲ್ಲಿ ಇಷ್ಟು ಕಡಿಮೆ ಎನ್ನುವುದು ಸರಿಯಲ್ಲ, ಕೂಡಲೇ ಮರು ಟೆಂಡರ್ ಕರೆದು ಪುರಸಭೆ ಹೆಚ್ಚಿನ ಆದಾಯ ಬರುವಂತೆ ಮಾಡಬೇಕು ಎಂದು ಆಗ್ರಹಿಸಿದರು.

ಪ್ರತಿ ಸಾಮಾನ್ಯ ಸಭೆಗೂ ಗೈರಾಗುವ ಪ್ರಭಾರ ಎಂಜಿನಿಯರ್ ಬಗ್ಗೆ ಪಕ್ಷಾತೀತವಾಗಿ ಸದಸ್ಯರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಖಾಲಿ ಇರುವ ಎಂಜಿನಿಯರ್ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರ ಸಂಬಂಧ ಎಲ್ಲ ಸದಸ್ಯರು ಸಂಬಂಧಪಟ್ಟ ಸಚಿವರು ಹಾಗೂ ಶಾಸಕರ ಬಳಿಗೆ ನಿಯೋಗ ತೆಗೆದುಕೊಂಡು ಹೋಗುವ ಬಗ್ಗೆ ಚರ್ಚೆ ನಡೆಸಲಾಯಿತು.

ಪುರಸಭೆ ಮುಖ್ಯಾಧಿಕಾರಿ ಕೆ.ಎಂ.ಪವನ್ ಕುಮಾರ್ ಮಾತನಾಡಿ, ಸಂತೆ ಮೈದಾನದಲ್ಲಿ ಇರುವ ಕಟ್ಟಡವು ಹಳೆಯದಾಗಿದ್ದು, ಅದು ಅನುಪಯುಕ್ತವಾಗಿದೆ ಎಂದು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ವರದಿ ನೀಡಿದ್ದಾರೆ. ಹೀಗಾಗಿ ಸರ್ಕಾರಕ್ಕೆ ಪತ್ರ ಬರೆದು ಸೂಕ್ತ ಕ್ರಮ ವಹಿಸಲಾಗುವುದು ಎಂದರು.

ಸಭೆಯಲ್ಲಿ ಸದಸ್ಯರು ಒತ್ತಾಯ ಮಾಡುವ ವಿಷಯಗಳಿಗೆ ಸಂಬಂಧಿಸಿದಂತೆ ತೆಗೆದುಕೊಂಡ ಕ್ರಮಗಳ ಬಗ್ಗೆ ಮುಂದಿನ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳು ಉತ್ತರ ನೀಡಬೇಕು ಎಂದು ಉಪಾಧ್ಯಕ್ಷ ಟಿ.ನಂದಕುಮಾರ್ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಪುರಸಭಾಧ್ಯಕ್ಷೆ ರಾಧ ನಾಗರಾಜು ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟಸ್ವಾಮಿ, ಉಪಾಧ್ಯಕ್ಷರಾದ ಟಿ ನಂದಕುಮಾರ್, ಮುಖ್ಯಾಧಿಕಾರಿ ಪವನ್ ಕುಮಾರ್ ಹಾಜರಿದ್ದರು.

ಧರ್ಮದ ಮಹತ್ವ ಅರಿತು ನಡೆದಾಗ ಬದುಕು ಸುಂದರ

ನಾಗಮಂಗಲ, ಮಾ.29- ಇತಿಹಾಸ ಕಾಲದಿಂದಲೂ ಧರ್ಮವೆಂಬುದು ನಮಗೆ ದಾರಿ ದೀಪವಾಗಿದ್ದು, ಅದನ್ನು ಅರಿತು ಮುನ್ನಡೆದಾಗ ಬದುಕು ಸುಂದರವೆನಿಸುತ್ತದೆಯೆಂದು ಜಿಲ್ಲಾ ವೀರಶೈವ ಮಹಾಸಭಾದ ಉಪಾಧ್ಯಕ್ಷ ಮಂಜುನಾಥ್ ತಿಳಿಸಿದರು.

ಭಾನುವಾರ ಕಸಬಾ ಹೋಬಳಿಯ ನೀಲಕಂಠನಹಳ್ಳಿ ಗ್ರಾಮದಲ್ಲಿ, ಸುತ್ತೂರು ಮಠ ಮತ್ತು ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಲಿಂಗದೀಕ್ಷೆ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ಭಕ್ತಿ ಭಂಡಾರಿ ಬಸವಣ್ಣನವರ ಬಸವಾದಿ ಶರಣರ ತತ್ವ ಆದರ್ಶಗಳು ಜೀವನಕ್ಕೆ ಅತ್ಯಂತ ಅಗತ್ಯವಾಗಿದೆ. ಧರ್ಮದ ಮಹತ್ವವನ್ನು ತಿಳಿದು ನಡೆಯಬೇಕು. ಸುತ್ತೂರು ಮಠದ ಶ್ರೀಗಳ ಮುಂದಾಲೋಚನೆಯಿಂದ ಗ್ರಾಮೀಣ ಪ್ರದೇಶಗಳಲ್ಲಿಯೂ ಸಹ ಲಿಂಗದೀಕ್ಷೆ ಕಾರ್ಯಕ್ರಮಗಳಿಗೆ ಮನ್ನಣೆ ಸಿಗುತ್ತಿದೆಯೆಂದು ಹೇಳಿದರು.



ಜಿಲ್ಲಾಧ್ಯಕ್ಷ ಎ. ಸುಬ್ರಮಣ್ಯ ಮಾತನಾಡಿ, ಮೊದಲು ನಾವು ಸಂಸ್ಕಾರವುಳ್ಳವರಾಗಬೇಕು, ಅಲ್ಲದೇ ಜನ್ಮ ಕೊಟ್ಟ ತಂದೆ ತಾಯಿ, ಗುರುಗಳು, ಹಿರಿಯರ ಬಗ್ಗೆ ಪ್ರೀತಿ ಗೌರವದ ಮನೋಭಾವನೆ ಬೆಳೆಸಿಕೊಂಡು ಮುನ್ನಡೆಯಬೇಕು. ಇಷ್ಟಲಿಂಗ ಪೂಜೆ ಮಾಡುವ ವಿಧಾನವನ್ನು ಬಾಲ್ಯದಿಂದಲೇ ಕಲಿಸುವ ವ್ಯವಸ್ಥೆಯಾಗಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಸಿದ್ದೇಶ್ವರ ಸ್ವಾಮೀಜಿ, ಚಂದ್ರಶೇಖರ ಸ್ವಾಮೀಜಿ, ಪಂಚಾಕ್ಷರಿ ಅವರು ಸುಮಾರು 52 ಭಕ್ತರಿಗೆ ಲಿಂಗದೀಕ್ಷೆ ನೀಡಿ, ಪೂಜಾ ವಿಧಾನ, ಮಂತ್ರೋಪದೇಶವನ್ನು ಹೇಳಿದರು. ತಾಲೂಕು ಅಧ್ಯಕ್ಷ ಮಲ್ಲಿಕಾರ್ಜುನ್, ಭಾರತಿ, ಸುಬ್ರಹ್ಮಣ್ಯ, ಜಗದೀಶ್, ಬಸಪ್ಪಾಜಿ, ಜೈಪ್ರಕಾಶ್ ಮುಂತಾದವರಿದ್ದರು.

ಮಂಡ್ಯದಲ್ಲಿ 108 ಆಂಬುಲೆನ್ಸ್ ಕೊರತೆಯಿಲ್ಲ

ಶಾಸಕ ದಿನೇಶ್ ಗೂಳಿಗೌಡರ ಪ್ರಶ್ನೆಗೆ ಆರೋಗ್ಯ ಸಚಿವ ಸುಧಾಕರ್ ಉತ್ತರ

ಬೆಂಗಳೂರು, ಮಾ.29- ಮಂಡ್ಯ ಜಿಲ್ಲೆಯಲ್ಲಿ 108 ಆಂಬುಲೆನ್ಸ್ ಕೊರತೆ ಇಲ್ಲ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಅವರು, ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರ ಪ್ರಶ್ನೆಗೆ ಉತ್ತರಿಸಿದ್ದಾರೆ.



ದಿನೇಶ್ ಗೂಳಿಗೌಡ



ಡಾ. ಸುಧಾಕರ್

ಮಂಡ್ಯ ಜಿಲ್ಲೆಯಲ್ಲಿ 108 ಆಂಬುಲೆನ್ಸ್ ವಾಹನಗಳು ಹಾಗೂ ಖಾಸಗಿ ಆಂಬುಲೆನ್ಸ್ ವಾಹನಗಳ ಸಂಖ್ಯೆ ಎಷ್ಟು? ಹಾಗೂ ಜನಸಂಖ್ಯೆಗೆ ಅನುಗುಣವಾಗಿ 108 ಆಂಬ್ಯುಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆಯೇ ಮತ್ತು ಕೊರತೆ ಇದ್ದಲ್ಲಿ ಇದನ್ನು ಸರಿದೂಗಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಎಂದು ಶಾಸಕ ದಿನೇಶ್ ಗೂಳಿಗೌಡ ಆರೋಗ್ಯ ಸಚಿವರಿಗೆ ಪ್ರಶ್ನೆಯನ್ನು ಕೇಳಿದ್ದರು.

ಇದಕ್ಕೆ ಉತ್ತರಿಸಿರುವ ಸಚಿವ ಸುಧಾಕರ್, ಮಂಡ್ಯ ಜಿಲ್ಲೆಯಲ್ಲಿ 108 ಆರೋಗ್ಯ ಕವಚ ಯೋಜನೆ ಯಡಿ 21 ಆಂಬುಲೆನ್ಸ್ ಗಳು (09 ಅಡ್ವಾನ್ಸ್ ಲೈಫ್ ಸಪೋರ್ಟ್ ಮತ್ತು 11 ಬೇಸಿಕ್ ಲೈಫ್ ಸಪೋರ್ಟ್) ಕಾರ್ಯನಿರ್ವಹಿಸುತ್ತಿವೆ. ಇದು ಸರ್ಕಾರಿ ಆಂಬುಲೆನ್ಸ್‌ಗಳ ಮಾಹಿತಿಯಾಗಿದ್ದು, ಖಾಸಗಿ ಆಂಬುಲೆನ್ಸ್‌ಗಳ ಬಗ್ಗೆ ಮಾಹಿತಿ ಸಿಕ್ಕಿರುವುದಿಲ್ಲ ಎಂದು ಹೇಳಿದ್ದಾರೆ. ವಿಶ್ವ ಆರೋಗ್ಯ ಸಂಸ್ಥೆ ಹಾಗೂ ರಾಷ್ಟ್ರೀಯ ಆರೋಗ್ಯ ಅಭಿಯಾನದ ಮಾರ್ಗಸೂಚಿಯನ್ವಯ 1 ಲಕ್ಷ ಜನಸಂಖ್ಯೆಗೆ 1 ಆಂಬುಲೆನ್ಸ್ ಲಭ್ಯವಿರಬೇಕಾಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ 2022ನೇ ಸಾಲಿಗೆ 20,57,132 ರಷ್ಟು ಜನಸಂಖ್ಯೆ ಇದೆ. ಈ ಜನಸಂಖ್ಯೆಗೆ ಅನುಗುಣವಾಗಿ ಮಂಡ್ಯ ಜಿಲ್ಲೆಯಲ್ಲಿ 108 ಆಂಬುಲೆನ್ಸ್ ಕೊರತೆ ಇಲ್ಲ. ಜನಸಂಖ್ಯೆಗೆ ಅನುಗುಣವಾಗಿ ಆಂಬುಲೆನ್ಸ್‌ಗಳು ಇವೆ ಎಂದು ಸಚಿವ ಸುಧಾಕರ್ ತಿಳಿಸಿದ್ದಾರೆ.

ಏ.1ರಂದು ಚಿನಕುರಳಿಗೆ ಡಾ. ವೀರೇಂದ್ರ ಹೆಗ್ಗಡೆ ಭೇಟಿ

ಪಾಂಡವಪುರ, ಮಾ.29- ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆಯ ವತಿಯಿಂದ ಏ.1ರಂದು ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ಸಾಧನಾ ಸಮಾವೇಶ ಮತ್ತು ಪುನಶ್ಚೇತನಗೊಂಡ ಕೆರೆ ಹಸ್ತಾಂತರ ಕಾರ್ಯಕ್ರಮಕ್ಕೆ ಧರ್ಮಸ್ಥಳದ ಡಾ.ಡಿ.ವೀರೇಂದ್ರ ಹೆಗ್ಗಡೆ ಭಾಗವಹಿಸಲಿದ್ದಾರೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ಹೇಳಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಧರ್ಮಸ್ಥಳದ ಡಾ.ಡಿ.ವೀರೇಂದ್ರ ಹೆಗ್ಗಡೆ ಕಳೆದ ಹಲವಾರು ವರ್ಷಗಳ ಬಳಿಕ ಕಾರ್ಯಕ್ರಮವೊಂದಕ್ಕೆ ತಾಲೂಕಿಗೆ ಆಗಮಿಸುತ್ತಿದ್ದಾರೆ. 2006ರಲ್ಲಿ ಬೇಬಿಬೆಟ್ಟದ ಜಾತ್ರಾಮಹೋತ್ಸವಕ್ಕೆ ಆಗಮಿಸಿದ್ದರು. ಬಳಿಕ ಇದೇ ಮೊದಲ ಬಾರಿಗೆ ಆಗಮಿಸುತ್ತಿದ್ದಾರೆ. ಹಾಗಾಗಿ ಅವರನ್ನು ಗೌರವಿಸುವುದು ನಮ್ಮ ಜವಬ್ದಾರಿಯಾಗಿದೆ ಎಂದು ತಿಳಿಸಿದರು.

ಏ.1ರಂದು ಮೈಸೂರಿನಿಂದ ತಾಲೂಕಿಗೆ ಆಗಮಿಸುವ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರನ್ನು ತಾಲೂಕಿನ ಗಡಿಭಾಗವಾದ ಪಿಎಸ್‌ಎಸ್‌ಕೆ ಕಾರ್ಖಾನೆಯ ಬಳಿಯೇ ಸ್ವಾಗತಿಸಲಾಗುವುದು. ಅಲ್ಲಿಂದ ತಾಲೂಕಿನ ಸುಂಕಾತೊಣ್ಣೂರು ಗ್ರಾಮದಲ್ಲಿ ಶ್ರೀಧರ್ಮಸ್ಥಳ ಧರ್ಮೋತ್ಥಾನ ಟ್ರಸ್ಟ್‌ನಿಂದ ನವೀಕರಣ ಮಾಡಲಾಗಿರುವ ಶ್ರೀಚನ್ನಕೇಶವ ದೇವಸ್ಥಾನಕ್ಕೆ ಭೇಟಿಕೊಟ್ಟು ಪರಿಶೀಲನೆ ನಡೆಸಲಿದ್ದಾರೆ. ಅಲ್ಲಿಂದ ಬೆಳಗ್ಗೆ 10 ಗಂಟೆಗೆ ತಾಲೂಕಿನ ಹೊನಗಾನಹಳ್ಳಿ ಗ್ರಾಮದಲ್ಲಿ ಧರ್ಮಸ್ಥಳ ಸಂಸ್ಥೆ ವತಿಯಿಂದ ಅಭಿವೃದ್ಧಿಪಡಿಸಲಾಗಿರುವ ಹೆಗ್ಗಡೆ ಕೆರೆಗೆ ಭೇಟಿಕೊಟ್ಟು ಪರಿಶೀಲಿಸಿ ಬಳಿಕ ಕೆರೆಗೆ ಬಾಗಿನ ಅರ್ಪಿಸಿ, ನಾಮಫಲಕವನ್ನು ಉದ್ಘಾಟಿಸಲಿದ್ದಾರೆ.



ಅಲ್ಲಿಂದ ಮೆರವಣಿಗೆಯ ಮೂಲಕ ಚಿನಕುರಳಿ ಗ್ರಾಮಕ್ಕೆ ಕರೆದುಕೊಂಡು ಬಂದು ಗ್ರಾಮ ವತಿಯಿಂದ ಹಮ್ಮಿಕೊಂಡಿರುವ ಹಲವಾರು ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ, ಉದ್ಘಾಟನೆ ನಡೆಸಲಾಗುವುದು ಎಂದರು.

ಧರ್ಮಸ್ಥಳ ಸಂಸ್ಥೆಯ ಮೈಸೂರು ವಿಭಾಗದ ಪ್ರಾದೇಶಿಕ ನಿರ್ದೇಶಕ ಪಿ.ಗಂಗಾಧರ್ ರೈ ಮಾತನಾಡಿ, ಧರ್ಮಸ್ಥಳದ ಡಾ.ಡಿ.ವೀರೇಂದ್ರ ಹೆಗ್ಗಡೆಯವರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಅವರ ಬಗ್ಗೆ ಅಪಾರ ಪ್ರೀತಿ, ವಿಶ್ವಾಸವಿದೆ. ವೀರೇಂದ್ರ ಹೆಗ್ಗಡೆ ಅವರು ಮೈಸೂರು ಭಾಗದಲ್ಲಿ ಕಾರ್ಯಕ್ರಮ ನಡೆಸು ಎಂಬುದಾಗಿ ಕೇಳಿದಾಗ ನಾನು ಪಾಂಡವಪುರ ತಾಲೂಕಿನಲ್ಲಿ ಮಾಡೋಣ ಎಂದು ತಿಳಿಸಿದೆ. ಇದಕ್ಕೆ ಪೂಜ್ಯರು ಸಹ ಒಪ್ಪಿಗೆ ನೀಡಿದರು. ಅದರಂತೆ ಪಾಂಡವಪುರ ತಾಲೂಕಿನಲ್ಲಿ ಶಾಸಕ ಸಿ.ಎಸ್.ಪುಟ್ಟರಾಜು ನೇತೃತ್ವದಲ್ಲಿ ಸಾಧನಾ ಸಮಾವೇಶ ನಡೆಯುತ್ತಿದೆ ಎಂದು ಹೇಳಿದರು. ಗೋಷ್ಠಿಯಲ್ಲಿ ಧರ್ಮಸ್ಥಳ ಸಂಸ್ಥೆಯ ಯೋಜನಾಧಿಕಾರಿ ದಯಾನಂದ ಪೂಜಾರಿ ಹಾಜರಿದ್ದರು.

ಇಂದು ವಿ.ಸಿ ಫಾರಂನಲ್ಲಿ ಒಂದು ದಿನದ ಕೃಷಿ ಯಂತ್ರೋಪಕರಣ ಮೇಳ

ಮಂಡ್ಯ, ಮಾ.29- ವಲಯ ಕೃಷಿ ಸಂಶೋಧನಾ ಕೇಂದ್ರದ ವಿ.ಸಿ.ಫಾರಂ ಆವರಣದಲ್ಲಿ ಮಾ.30 ರಂದು ಒಂದು ದಿನದ ಕೃಷಿ ಯಂತ್ರೋಪಕರಣಗಳ ಮೇಳವನ್ನು ಆಯೋಜಿಸಲಾಗಿದೆ.

ಈ ಕೃಷಿ ಯಂತ್ರೋಪಕರಣಗಳ ಮೇಳದಲ್ಲಿ ಭತ್ತ, ರಾಗಿ, ಕಬ್ಬು, ಮುಸುಕಿನ ಜೋಳ, ಮೇವಿನ ಬೆಳೆ, ತೋಟಗಾರಿಕೆ ಹಾಗೂ ಇನ್ನಿತರೆ ಬೆಳೆಗಳ ಬೇಸಾಯದಲ್ಲಿ ಉಪಯೋಗಿಸುವ ಸುಧಾರಿತ ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಪ್ರಾತ್ಯಕ್ಷಿಕೆಗಳನ್ನು ಏರ್ಪಡಿಸಲಾಗಿದೆ ಎಂದು ಮಂಡ್ಯ ವಲಯ ಕೃಷಿ ಸಂಶೋಧನಾ ಕೇಂದ್ರ ವಿ. ಸಿ. ಫಾರಂನ ಸಹ ಸಂಶೋಧನಾ ನಿರ್ದೇಶಕರು ತಿಳಿಸಿದ್ದಾರೆ.

ಮಿನಿಬಸ್ ಡಿಕ್ಕಿ ಹೊಡೆದು ಬೈಕ್ ಸವಾರ ಸಾವು

ಭಾರತೀನಗರ, ಮಾ.29- ಮದ್ದೂರಿನಿಂದ ಮಳವಳ್ಳಿ ಕಡೆಗೆ ತೆರಳುತ್ತಿದ್ದ ಗಾರ್ಮೆಂಟ್ಸ್ ಕಾರ್ಮಿಕರಿದ್ದ ಮಿನಿ ಬಸ್ ಹಾಗೂ ಬೈಕ್ ನಡುವೆ ಡಿಕ್ಕಿ ಸಂಭವಿಸಿ ಬೈಕ್ ಸವಾರ ಸಾವನ್ನಪ್ಪಿರುವ ಘಟನೆ ಸಮೀಪದ ಹುಣ್ಣನದೊಡ್ಡಿ ಗ್ರಾಮದ ಬಳಿ ನಡೆದಿದೆ.

ಕೊತ್ತಿಪುರ ಗ್ರಾಮದ ಸಚಿನ್ (26) ಮೃತಪಟ್ಟ ಬೈಕ್ ಸವಾರ. ಮದ್ದೂರು ಸಮೀಪ ಸೋಮನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಗಾರ್ಮೆಂಟ್ಸ್‌ನಿಂದ ಮಹಿಳಾ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಮಿನಿಬಸ್ ಹುಣ್ಣನದೊಡ್ಡಿ ಗ್ರಾಮದ ಬಳಿ ಎದುರಿನಿಂದ ಬಂದ ಬೈಕ್ ಸವಾರನಿಗೆ ಡಿಕ್ಕಿ ಹೊಡೆದಿದೆ. ಇದರಿಂದ ತೀವ್ರವಾಗಿ ಗಾಯಗೊಂಡ ಸಚಿನ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ.



ಚಾಲಕ ಸೇರಿದಂತೆ ಬಸ್‌ನಲ್ಲಿದ್ದ ಕಾರ್ಮಿಕರಿಗೆ ಗಂಭೀರ ಗಾಯಗಳಾಗಿದ್ದು, ಅವರನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಸಣ್ಣಪುಟ್ಟ ಗಾಯಗೊಂಡ ವರನ್ನು ಭಾರತೀನಗರದ ಜಿ.ಮಾದೇಗೌಡ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಬಗ್ಗೆ ಭಾರತೀನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಾಲಹಳ್ಳಿಯಲ್ಲಿ ಗೋದಾಮು ಕಟ್ಟಡ ನಿರ್ಮಾಣಕ್ಕೆ ಗುದ್ದಲಿಪೂಜೆ



ಪಾಲಹಳ್ಳಿ, ಮಾ.29(ಮಂಜು)- ಶ್ರೀರಂಗಪಟ್ಟಣ ತಾಲೂಕಿನ ಪಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಬಾರ್ಡ್ ಯೋಜನೆಯಡಿಯಲ್ಲಿ ಗೋದಾಮು ಕಟ್ಟಡ ನಿರ್ಮಾಣಕ್ಕೆ ಅಧ್ಯಕ್ಷ ಭೈರೇಶ್ ಗುದ್ದಲಿಪೂಜೆ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಎಂಡಿಸಿಸಿ ಬ್ಯಾಂಕ್ ಮುಖ್ಯಕಾರ್ಯನಿರ್ವಹಣಾಧಿಕಾರಿ ಎನ್.ಎಂ. ಶಶಿಕುಮಾರ್, ಮತ್ತು ಸಹಕಾರ ಸಂಘಗಳ ಉಪನಿಬಂಧಕ ವಿಕ್ರಮ್ ರಾಜ್ ಅರಸು, ಸಹಕಾರ ಸಂಘಗಳ ಅಭಿವೃದ್ಧಿ ಅಧಿಕಾರಿ ಶ್ರೀಮತಿ ಅನಸೂಯ ಭಾಗವಹಿಸಿದ್ದರು.

ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್.ಚಂದ್ರಶೇಖರ್, ಪಾಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಶ್ರೀಮತಿ ಕಲಾ, ಹಾಲಿನ ಡೈರಿ ಅಧ್ಯಕ್ಷ ಪಿ.ಎಲ್. ಪುಟ್ಟರಾಮು ಹಾಗೂ ಮುಖಂಡರಾದ ಪೈಲ್ವಾನ್ ಮುಕುಂದ, ಶಂಕರೇಗೌಡ, ರಮೇಶ್‌ಬಾಬು, ಗೋವಿಂದರಾಜು, ನಾಗರಾಜು, ಪಿ.ಎಚ್. ಚಂದ್ರಶೇಖರ್, ಪ್ರಭಾಕರ್, ಗೌರಮ್ಮ, ರೇಖಾ, ರಾಘವೇಂದ್ರ, ಜನಾರ್ದನ್, ವಿ. ನಾರಾಯಣ್ ಹಾಗೂ ಸಂಘದ ಸಿಬ್ಬಂದಿ ಹಾಜರಿದ್ದರು.

ದನ ತೊಳೆಯಲು ಹೋಗಿ ನಾಪತ್ತೆಯಾಗಿದ್ದ ವ್ಯಕ್ತಿಯ ಶವ ಪತ್ತೆ

ನಾಗಮಂಗಲ, ಮಾ.29- ಭಾನುವಾರ ನದಿಗೆ ದನ ತೊಳೆಯಲು ಹೋಗಿ ನಾಪತ್ತೆಯಾದ ವ್ಯಕ್ತಿಯ ಶವ ಮಂಗಳವಾರ ಪತ್ತೆಯಾಯಿತು.



ಭಾನುವಾರ ದನ ತೊಳೆಯಲು ಬೆಳ್ಳೂರು ಹೋಬಳಿಯ ತೊರೆಮಾವಿನಕೆರೆಯ ವೀರವೈಷ್ಣವಿ ನದಿ ಬಳಿ ಹೋಗಿದ್ದ ಕೃಷ್ಣಸ್ವಾಮಿ ಎಂಬಾತ ನಾಪತ್ತೆಯಾಗಿದ್ದ ಬಗ್ಗೆ ಬೆಳ್ಳೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಈ ಹಿನ್ನೆಲೆಯಲ್ಲಿ ಅಗ್ನಿಶಾಮಕ ದಳ ಮತ್ತು ನುರಿತ ಈಜುಗಾರರನ್ನು ಕರೆಸಿ ಸತತ ಎರಡು ದಿನಗಳ ಕಾಲ ಕಾರ್ಯಾಚರಣೆ ನಡೆದಿತ್ತಾದರೂ ಶವ ಪತ್ತೆಯಾಗಿರಲಿಲ್ಲ. ಆದರೆ ಮಂಗಳವಾರ ಬೆಳಗ್ಗೆ ದಡದಲ್ಲಿ ಕೃಷ್ಣಸ್ವಾಮಿಯ ಶವ ತೇಲುತ್ತಿದ್ದು, ಪೊಲೀಸರು ಶವದ ಪಂಚನಾಮೆ ನಡೆಸಿ ನಂತರ ಕುಟುಂಬದವರ ವಶಕ್ಕೆ ಒಪ್ಪಿಸಿ ಪ್ರಕರಣ ದಾಖಲು ಮಾಡಿದ್ದಾರೆ.



ಮದ್ದೂರು ತಾಲೂಕು ಹುಲಿಗೆರೆಪುರದಲ್ಲಿ ಮನೆಯ ಛಾವಣಿ ತಡೆಗೋಡೆ ಕುಸಿದು ಗಾಯಗೊಂಡವರನ್ನು ಜಿಲ್ಲಾ ಉಸ್ತುವಾರಿ ಸಚಿವ ಕೆ. ಗೋಪಾಲಯ್ಯ, ಶಾಸಕ ಡಿ.ಸಿ. ತಮ್ಮಣ್ಣ ಭೇಟಿಯಾಗಿ, ಆರೋಗ್ಯ ವಿಚಾರಿಸಿದರು.



ಮದ್ದೂರು ತಾಲೂಕು ಹುಲಿಗೆರೆಪುರದಲ್ಲಿ ನಡೆದ ದುರ್ಘಟನೆಯಲ್ಲಿ ಮೃತಪಟ್ಟ ಪುಟ್ಟಲಿಂಗಮ್ಮ ಕುಟುಂಬಸ್ಥರಿಗೆ ಜೆಡಿಎಸ್ ವತಿಯಿಂದ 1 ಲಕ್ಷ ರೂ. ಪರಿಹಾರದ ಚೆಕ್ ನೀಡಿದ ಯುವ ಜೆಡಿಎಸ್ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ.

ಕೆ.ಎಂ.ದೊಡ್ಡಿಯಲ್ಲಿ ಮಾರಮ್ಮನ ಹಬ್ಬ



ಭಾರತೀನಗರ, ಮಾ.29(ಅ.ಸತೀಶ್)- ಮದ್ದೂರು ತಾಲೂಕಿನ ಕೆ.ಎಂ.ದೊಡ್ಡಿಯಲ್ಲಿ ಮಾರಮ್ಮನ ಹಬ್ಬದ ಹಿನ್ನೆಲೆ ಗ್ರಾಮದ ಮಹಿಳೆಯರೆಲ್ಲರೂ ಮಾರಿಗುಡಿ ಆವರಣದಲ್ಲಿ ಜಮಾಯಿಸಿ ಮಾರಮ್ಮನಿಗೆ ವಿಶೇಷಪೂಜೆ ಸಲ್ಲಿಸಿದರು.

ಬೆಳಗ್ಗೆಯಿಂದ ಸಂಜೆಯವರೆವಿಗೂ ಮಾರಮ್ಮನಿಗೆ ವಿಶೇಷ ಪೂಜೆ ಸಲ್ಲಿಸಿ ತಮ್ಮ ಇಷ್ಟಾರ್ಥ ಈಡೇರಿಸುವಂತೆ ಭಕ್ತರು ಬೇಡಿಕೊಂಡರು. ಗ್ರಾಮದ ಮಾರಮ್ಮನಿಗೆ ಬೇವಿನ ಸೊಪ್ಪು, ತಬ್ಬಿಟ್ಟಿನ ಆರತಿ, ಮೊಸರು ಅನ್ನ, ಎಳೆನೀರು ನೀಡುವುದರ ಮೂಲಕ ಗ್ರಾಮಕ್ಕೆ ಶಾಂತಿ ನೀಡಲೆಂದು ಕೋರಿದರು.

ಒಂದನೇ ಪುಟದಿಂದ

ತಡೆಗೋಡೆ ಕುಸಿದು ಮಹಿಳೆ ಸಾವು

ಅಧಿಕಾರಿಗಳಿಗೆ ಸೂಚಿಸಿದ್ದು, ಗಾಯಾಳುಗಳಿಗೆ ಪರಿಹಾರ ನೀಡುವ ಸಂಬಂಧ ಮುಖ್ಯಮಂತ್ರಿಯೊಟ್ಟಿಗೆ ಚರ್ಚಿಸುವುದಾಗಿ ಹೇಳಿದರು. ಶಾಸಕ ಡಿ.ಸಿ.ತಮ್ಮಣ್ಣ ಮಾತನಾಡಿ, ಮೃತಪಟ್ಟ ಪುಟ್ಟಲಿಂಗಮ್ಮ ಅವರ ಪುತ್ರರೋರ್ವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಉದ್ಯೋಗ ನೀಡುವಂತೆ ಮತ್ತು ಸರ್ಕಾರದಿಂದ ಸಿಗುವ ಪರಿಹಾರವನ್ನು ಕೊಡಿಸಿ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸುವಂತೆ ಸಚಿವರಲ್ಲಿ ಮನವಿ ಮಾಡಿದರು.

ಸ್ಥಳೀಯರ ನೆರವು: ಹುಲಿಗೆರೆಪುರ ಗ್ರಾಮಕ್ಕೆ ಭೇಟಿ ನೀಡಿದ ನಿಖಿಲ್‌ಕುಮಾರಸ್ವಾಮಿ ಮೃತರ ಅಂತಿಮ ದರ್ಶನ ಪಡೆದು, ಜೆಡಿಎಸ್ ಪಕ್ಷದಿಂದ 1 ಲಕ್ಷ ರೂ. ಪರಿಹಾರ ವಿತರಿಸಿದರಲ್ಲದೆ ಮನ್‌ಮುಲ್ ನಿರ್ದೇಶಕರೂ ಆದ ಬಿಜೆಪಿ ಮುಖಂಡ ಎಸ್.ಪಿ.ಸ್ವಾಮಿ 25 ಸಾವಿರ ರೂ., ಜಿ.ಪಂ. ಮಾಜಿ ಅಧ್ಯಕ್ಷ ಎಸ್. ಗುರುಚರಣ್ 25 ಸಾವಿರ ರೂ. ನಗದನ್ನು ಮೃತ ಪುಟ್ಟಲಿಂಗಮ್ಮ ಕುಟುಂಬ ಸದಸ್ಯರಿಗೆ ನೀಡಿದರು. ಕದಲೂರು ಉದಯ್ ಚಾರಿಟಬಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಕದಲೂರು ಉದಯ್ ಗಾಯಗೊಂಡ 50 ಮಂದಿಗೆ ಚಿಕಿತ್ಸಾ ವೆಚ್ಚಕ್ಕೆಂದು ತಲಾ 10 ಸಾವಿರ ರೂ.ಗಳಂತೆ 5 ಲಕ್ಷ ರೂ.ಗಳನ್ನು ವಿತರಿಸಿದರು.

ಸೂತಕದ ಛಾಯೆ: ಸೋಮವಾರ ಹಾಗೂ ಮಂಗಳವಾರ ನಿಗಧಿಯಾಗಿದ್ದ ಹುಲಿಗೆರೆಪುರ ಗ್ರಾಮದ ಬಸವೇಶ್ವರಸ್ವಾಮಿ ದೇವರ ಹಬ್ಬದ ಹಿನ್ನೆಲೆಯಲ್ಲಿ ವಿವಿಧೆಡೆಗಳಿಂದ ಸಾವಿರಾರು ಮಂದಿ ಗ್ರಾಮಕ್ಕೆ ಆಗಮಿಸಿ ಗ್ರಾಮದಲ್ಲಿ ಹಬ್ಬದ ಸಂಭ್ರಮ ನೆಲೆಸಿತ್ತು. ಅವಘಡ ಸಂಭವಿಸುತ್ತಿದ್ದಂತೆ ಕೊಂಡೋತ್ಸವ ರದ್ದುಗೊಳಿಸಿದ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಸೂತಕದ ವಾತಾವರಣ ಕಂಡುಬಂದಿತು.

ಮದ್ದೂರು ತಾಲೂಕಿನ ಹುಲಿಗೆರೆಪುರದಲ್ಲಿ ನಡೆದಿರುವ ದುರಂತ ನೋವು ತಂದಿದೆ. ಗಾಯಾಳುಗಳು ಬೇಗ ಗುಣಮುಖರಾಗಲಿ. ತೀವ್ರ ಗಾಯಗೊಂಡು ಮೈಸೂರು ಹಾಗೂ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಬಗ್ಗೆ ನಿಗಾ ಇಡುವಂತೆ ಸೂಚಿಸಲಾಗಿದೆ. ಚಿಕಿತ್ಸೆ ಪಡೆಯುತ್ತಿರುವವರಿಗೆ ಅಗತ್ಯ ನೆರವು ನೀಡುವಂತೆ ನನ್ನ ಕಚೇರಿ ಸಿಬ್ಬಂದಿಗೆ ಸೂಚಿಸಿದ್ದೇನೆ.

- ಸುಮಲತಾ ಅಂಬರೀಷ್, ಸಂಸದೆ

ಹುಲಿಗೆರೆಪುರ ದುರಂತದಲ್ಲಿ ಓರ್ವ ಮಹಿಳೆ ಸಾವನ್ನಪ್ಪಿ, 40ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ಮಂಡ್ಯ ಮಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಯಾರ ಆರೋಗ್ಯವೂ ಗಂಭೀರವಾಗಿಲ್ಲ. ಮೂಳೆ ಮುರಿತ ಪ್ರಕರಣ ಹೆಚ್ಚಾಗಿದೆ. ಎಲ್ಲರೂ ಗುಣಮುಖರಾಗುವ ವಿಶ್ವಾಸವಿದೆ.

-ಡಾ. ಧನಂಜಯ್, ಮಂಡ್ಯ ಡಿಎಚ್‌ಓ

ಘಟನೆಯಲ್ಲಿ 42 ಮಂದಿಗೆ ಸಣ್ಣಪುಟ್ಟ ಪೆಟ್ಟಾಗಿದೆ. ಒಬ್ಬರು ಮೃತಪಟ್ಟಿದ್ದಾರೆ. ಈಗಾಗಲೇ ಅವರ ಕುಟುಂಬಕ್ಕೆ ಸಾಂತ್ವನ ಹೇಳಿದ್ದೇನೆ. ರೋಗಿಗಳು ಕೂಡಲೇ ಗುಣಮುಖರಾಗಲೆಂದು ದೇವರಲ್ಲಿ ಕೇಳುತ್ತೇನೆ. ನಮ್ಮ ಪಕ್ಷದ ವತಿಯಿಂದ ಆರ್ಥಿಕ ಸಹಾಯ ಮಾಡಿದ್ದೇವೆ. ಮಂಡ್ಯ ಜಿಲ್ಲೆಗೆ ನಮ್ಮ ತಾತ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ನಮ್ಮ ತಂದೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮಂಡ್ಯ ಜಿಲ್ಲೆಯ ಸಂಕಷ್ಟದ ಸಂದರ್ಭದಲ್ಲೂ ಜನತೆಯ ಜೊತೆ ಇರುತ್ತೇವೆ. ಸರ್ಕಾರದಿಂದ ಗಾಯಾಳುಗಳು ಹಾಗೂ ಮೃತರ ಕುಟುಂಬಕ್ಕೆ ಪರಿಹಾರ ಕೊಡಿಸುವ ಬಗ್ಗೆ ನಾವು ಸರ್ಕಾರದ ಜೊತೆ ಮಾತುಕತೆ ನಡೆಸಿದ್ದೇವೆ.

- ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ

ಮದ್ದೂರಿನ ಹುಲಿಗೆರೆಪುರದಲ್ಲಿ ಕೊಂಡೋತ್ಸವ ವೀಕ್ಷಿಸುವ ವೇಳೆ ಛಾವಣಿ ಕುಸಿದು ಮಹಿಳೆ ಸಾವನ್ನಪ್ಪಿರುವುದು ದುರಾದೃಷ್ಟಕರ. ಮೃತ ಮಹಿಳೆ ಆತ್ಮಕ್ಕೆ ಭಗವಂತ ಶಾಂತಿ ಕರುಣಿಸಲಿ, ಕುಟುಂಬಕ್ಕೆ ದುಃಖ ಭರಿಸುವ ಶಕ್ತಿ ನೀಡಲಿ.

- ಕೆ.ಸಿ.ನಾರಾಯಣಗೌಡ, ರೇಷ್ಮೆ, ಕ್ರೀಡಾ ಸಚಿವ

ಭಾರೀ ಪ್ರತಿಭಟನಾ ಮೆರವಣಿಗೆ

ವಿರುದ್ಧ ಘೋಷಣೆಗಳು ಮೊಳಗಿದವು. ನಗರದ ಗಾಂಧಿ ಚೌಕದಲ್ಲಿ ಚಾಲನೆ ಪಡೆದ ಪ್ರತಿಭಟನಾ ಮೆರವಣಿಗೆ, ಮಕ್ಕಾಜಿ ಚೌಕ, ಒಲಂಪಿಯಾ ಥಿಯೇಟರ್ ರಸ್ತೆ, ಸಯ್ಯಾಜಿರಾವ್ ರಸ್ತೆ, ಸರ್ಕಾರಿ ಆಯುರ್ವೇದ ಕಾಲೇಜು ಮತ್ತು ಆಸ್ಪತ್ರೆ ವೃತ್ತ, ಇರ್ವಿನ್ ರಸ್ತೆ, ನೆಹರು ವೃತ್ತ, ಅಶೋಕ ರಸ್ತೆ, ದೊಡ್ಡ ಗಡಿಯಾರ ವೃತ್ತದ ಮಾರ್ಗದಲ್ಲಿ ಸಾಗಿತು. ಅಂತಿಮವಾಗಿ ಪುರಭವನ ಆವರಣ ತಲುಪಿ, ಮೆರವಣಿಗೆ ಅಂತ್ಯಗೊಂಡಿತು.

ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ನೇತೃತ್ವದಲ್ಲಿ ಮೈಸೂರಿನಲ್ಲಿ ಮುಷ್ಕರ ನಡೆದಿದ್ದು, ಮೆರವಣಿಗೆಯಲ್ಲಿ ವಿವಿಧ ಘೋಷಣೆಗಳ ಮೂಲಕ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೀತಿಗಳನ್ನು ತೀವ್ರವಾಗಿ ಖಂಡಿಸಲಾಯಿತು. ನಂಜನಗೂಡಿನ ಎಸ್‌ಜಿಬಿಪಿಎಲ್ ಯುನೈಟೆಡ್ ಎಂಪ್ಲಾಯೀಸ್ ಯೂನಿಯನ್, ಕರ್ನಾಟಕ ರಾಜ್ಯ ಸಂಯುಕ್ತ ಅಕ್ಷರ ದಾಸೋಹ ಕಾರ್ಮಿಕರ ಸಂಘ, ಬಿಎಸ್‌ಎನ್‌ಎಲ್ ಎಂಪ್ಲಾಯೀಸ್ ಯೂನಿಯನ್, ಎಟಿ ಅಂಡ್ ಎಸ್ ಇಂಡಿಯಾ ವರ್ಕರ್ಸ್ ಯೂನಿಯನ್, ಮಾಯಾಬಂದರ್ ಡೋರ್ಸ್ ಎಂಪ್ಲಾಯೀಸ್ ಅಸೋಸಿಯೇಷನ್, ನಂಜನ ಗೂಡಿನ ಕೆಟಿಪಿಎಲ್ ಯುನೈಟೆಡ್ ಎಂಪ್ಲಾಯೀಸ್ ಯೂನಿಯನ್, ವಿಮಾ ನೌಕರರ ಒಕ್ಕೂಟ, ಕರ್ನಾಟಕ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ, ಗಾರ್ಮೆಂಟ್ ಲೇಬರ್ ಯೂನಿಯನ್ ಮೈಸೂರು ಜಿಲ್ಲಾ ಸಮಿತಿ, ಕರ್ನಾಟಕ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಫೆಡರೇಷನ್, ಕರ್ನಾಟಕ ರಾಜ್ಯ ರೈತ ಸಂಘ, ರಾಷ್ಟ್ರೀಯ ಮಜ್ದೂರ್ ಕಾಂಗ್ರೆಸ್ ಮೈಸೂರು ಜಿಲ್ಲಾ ಸಮಿತಿ, ಸೈಡರ್ ಫೋರ್ಜ್‌ರೋಸ್ಸಿ ಎಂಪ್ಲಾಯೀಸ್ ಯೂನಿಯನ್, ಕರ್ನಾಟಕ ರಾಜ್ಯ ಸಂಯುಕ್ತ ವಿಶ್ವವಿದ್ಯಾನಿಲಯಗಳ ಸ್ವಚ್ಛತಾ ಕಾರ್ಯ ನೌಕರರ ಸಂಘ ಸೇರಿದಂತೆ ಮೊದಲಾದ ಸಂಘಟನೆಗಳ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಪುರಭವನ ಹೊರಾವರಣದಲ್ಲಿ ಬಹಿರಂಗ ಸಭೆ: ಪ್ರತಿಭಟನಾ ಮೆರವಣಿಗೆ ಬಳಿಕ ಮೈಸೂರಿನ ಪುರಭವನದ ಹೊರಾವರಣದಲ್ಲಿ ಬೃಹತ್ ಬಹಿರಂಗ ಸಭೆ ನಡೆಸಲಾಯಿತು. ಈ ವೇಳೆ ಮಾತನಾಡಿದ ಮುಖಂಡರು ಕೇಂದ್ರ ಮತ್ತು ರಾಜ್ಯಗಳ ಸರ್ಕಾರಗಳು ರೈತ, ಕಾರ್ಮಿಕ ಮತ್ತು ಜನವಿರೋಧಿ ನೀತಿ ಅನುಸರಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಬಂದ್ ಸ್ವರೂಪದ ಮುಷ್ಕರ: ಕಾರ್ಮಿಕ ಮುಖಂಡರೂ ಆದ ಸಿಪಿಐ ಹಿರಿಯ ಮುಖಂಡ ಹೆಚ್.ಆರ್.ಶೇಷಾದ್ರಿ ಮಾತನಾಡಿ, ಕಳೆದ ಮುಷ್ಕರದಲ್ಲಿ ದೇಶಾದ್ಯಂತ 20 ಕೋಟಿ ಜನ ಪಾಲ್ಗೊಂಡಿದ್ದರು. ಈ ಮುಷ್ಕರದಲ್ಲಿ ಇದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ದುಡಿಯುವ ವರ್ಗ ಭಾಗವಹಿಸಿದೆ. 13 ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ ಈ ಮುಷ್ಕರ ಹಮ್ಮಿಕೊಂಡಿದ್ದು, ಬೇಡಿಕೆಗಳು ಕೇವಲ ಕಾರ್ಮಿಕ ವರ್ಗಕ್ಕೆ ಸೀಮಿತಗೊಂಡಿಲ್ಲ. ದೇಶದ ಎಲ್ಲಾ ದುಡಿಯುವ ವರ್ಗಕ್ಕೆ ಈ ಬೇಡಿಕೆಗಳು ಅನ್ವಯಿಸಲಿವೆ. 9ರಿಂದ 10 ರಾಜ್ಯಗಳಲ್ಲಿ ಈ ಮುಷ್ಕರ ಬಂದ್ ಸ್ವರೂಪ ಪಡೆದು ಯಶಸ್ವಿಯಾಗಿದೆ ಎಂದು ತಿಳಿಸಿದರು.

ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿ ತಂದು ಪ್ರತಿಯೊಂದು ಮನೆಗೆ ಬೇಕಾದ ಅಗತ್ಯ ಪದಾರ್ಥಗಳನ್ನು ಕಾಯ್ದೆಯಿಂದ ಹೊರಗಿಡಲಾಗಿದೆ. ಇದರ ದುಷ್ಪರಿಣಾಮ ಸಾಮಾನ್ಯರು, ದುಡಿಯುವ ವರ್ಗದ ಮೇಲಾಗಿದೆ. ಅಗತ್ಯ ವಸ್ತುಗಳ ಬೆಲೆ ಏರಿಕೆ ಬೇಸಿಗೆ ಬಿಸಿಲಿಗಿಂತಲೂ ಇಂದು ಸಾಮಾನ್ಯ ಜನತೆಯನ್ನು ಸುಡುವಂತಾಗಿದೆ. ಅಡುಗೆ ಎಣ್ಣೆ ಲೀಟರ್‌ಗೆ 190 ರೂ.ಗೆ ಹೆಚ್ಚಳವಾಗಿದೆ. ಖರೀದಿಸುವ ಶಕ್ತಿ ಸಾಮಾನ್ಯ ಜನತೆಯಲ್ಲಿ ಕ್ರಮೇಣ ಕಡಿಮೆಯಾಗುತ್ತಿದೆ ಎಂದು ಕಿಡಿಕಾರಿದರು.

ಕಾರ್ಪೊರೇಟ್ ಕಂಪನಿಗಳು, ವರ್ತಕರು ಬೆಲೆ ನಿಯಂತ್ರಿಸುವ ಪರಿಸ್ಥಿತಿ ನಿರ್ಮಾಣ ಮಾಡಲಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಅಬಕಾರಿ ಸುಂಕದಿಂದ ಕಳೆದ 7 ವರ್ಷಗಳಲ್ಲಿ ಕೇಂದ್ರ ಸರ್ಕಾರದ ಖಜಾನೆಗೆ ಸುಮಾರು 26 ಲಕ್ಷ ಕೋಟಿ ರೂ. ಸಂದಾಯವಾಗಿದೆ. ಆದರೆ ಜನ ಬೆಲೆ ಏರಿಕೆಯಿಂದ ಸಂಕಷ್ಟ ಅನುಭವಿಸುವಂತಾಗಿದೆ. ಇಂದಿನ ಬಿಜೆಪಿ ಕೇಂದ್ರ ಸರ್ಕಾರ ಸಂಸತ್‌ನಲ್ಲಿ ಯಾವುದೇ ಚರ್ಚೆ ಇಲ್ಲದೆ, ಕಾರ್ಪೊರೇಟ್ ಕಂಪನಿಗಳ ಪರವಾಗಿ ಕಾನೂನುಗಳಿಗೆ ತಿದ್ದುಪಡಿ ತರುತ್ತಿದೆ. ಇದು ಸಂವಿಧಾನ ವಿರೋಧಿ ಕ್ರಮ ಎಂದು ಖಂಡಿಸಿದರು.

ಹಣದುಬ್ಬರ ಬೆಲೆ ಏರಿಕೆಗೆ ನೇರವಾಗಿ ಸಂಬಂಧಿಸಿದೆ. ಆದರೆ ಇದನ್ನು ಸರ್ಕಾರ ನಿಯಂತ್ರಿಸಲು ಮುಂದಾಗುತ್ತಿಲ್ಲ. ಕಳೆದ ಹಲವು ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನಿಯಂತ್ರಣಕ್ಕೆ ಯಾವುದೇ ಕ್ರಮ ಕೈಗೊಂಡಿಲ್ಲ. ಅದಕ್ಕೆ ಬದಲಾಗಿ ಅಪಹಾಸ್ಯ ಹೇಳಿಕೆಗಳನ್ನು ಜನಪ್ರತಿನಿಧಿಗಳು ನೀಡುತ್ತಿದ್ದಾರೆ. ಜಾರ್ಖಂಡ್‌ನ ಮಂತ್ರಿಯೋ ಯಾರೋ 'ಬೆಲೆ ಏರಿಕೆ ಅಥವಾ ಹಣದುಬ್ಬರಕ್ಕೆ ಕಾರಣ ಬಾಲ್ಯ ವಿವಾಹ ಎಂದು ಹೇಳಿಕೆ ನೀಡಿದ್ದಾರೆ. ಬಾಲ್ಯ ವಿವಾಹ ಮತ್ತು ಬೆಲೆ ಏರಿಕೆಗೆ ಏನು ಸಂಬಂಧ ಎಂಬುದು ನನಗೆ ಇನ್ನೂ ಅರ್ಥವಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಸಿಐಟಿಯು ರಾಜ್ಯ ಕಾರ್ಯದರ್ಶಿ ಸುನಂದಾ, ಸಿಐಟಿಯು ಮುಖಂಡ ಜಯರಾಮ್, ಜೆಸಿಟಿಯು ಸಂಚಾಲಕ ಎನ್.ಕೆ.ದೇವದಾಸ್, ದಸಂಸ ಮುಖಂಡ ಚೋರನಹಳ್ಳಿ ಶಿವಣ್ಣ, ಎಐಯುಟಿಯುಸಿ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ ಮೇಟಿ ಮತ್ತಿತರರು ಪಾಲ್ಗೊಂಡಿದ್ದರು.

ದುಡಿಯುವ ವರ್ಗದ ಪರವಾಗಿ ಈ ಸರ್ಕಾರ ಇಲ್ಲ. ಯಾರ ಅಭಿವೃದ್ಧಿಗಾಗಿ ನೀವು ಅಧಿಕಾರ ಹಿಡಿದಿದ್ದೀರಿ ಎಂದು ಸರ್ಕಾರಕ್ಕೆ ಪ್ರಶ್ನೆ ಮಾಡಬೇಕಿದೆ. ಧರ್ಮ-ಜಾತಿ ಆಧಾರದಲ್ಲಿ ಸಮಾಜದಲ್ಲಿ ವಿಷಬೀಜ ಬಿತ್ತಲಾಗುತ್ತಿದೆ. ಆರ್‌ಎಸ್‌ಎಸ್ ಅಜೆಂಡಾಗಳನ್ನು ಅಂಗನವಾಡಿ ಕೇಂದ್ರಗಳ ಮೂಲಕ ಜಾರಿಗೊಳಿಸಲು ಈ ಸರ್ಕಾರ ಮುಂದಾಗಿದೆ. ನಾಮಕರಣ, ಪೋಷಣಾ ಅಭಿಯಾನ ಮೊದಲಾದವು ಧರ್ಮದ ಆಧಾರದ ಕಾರ್ಯಕ್ರಮಗಳಾಗಿವೆ.

-ಸಿಐಟಿಯು ರಾಜ್ಯ ಕಾರ್ಯದರ್ಶಿ ಸುನಂದಾ

ಆರ್‌ಎಸ್‌ಎಸ್ ಸಂಘಟನೆಯ ಅಧಿಕ ಪ್ರಸಂಗಿತನ ಹೆಚ್ಚಾಗುತ್ತಿದೆ. ಬೀದಿಯಲ್ಲಿ ಹೋರಾಟ ಮಾಡುತ್ತಿರುವ ಕೆಂಪು, ಹಸಿರು, ನೀಲಿ ಬಣ್ಣದ ಹೋರಾಟಗಾರರು ಎಚ್ಚೆತ್ತುಕೊಳ್ಳಬೇಕು. ನಾವು ಹೀಗೆಯೇ ಮುಂದುವರೆದರೆ ನಾವು ಬೀದಿಯಲ್ಲಿ ನಿಂತು ಹೋರಾಟ ಮಾಡುತ್ತಲೇ ಇರಬೇಕಾಗುತ್ತದೆ.

-ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ

ಮೈಸೂರು ಜಿಲ್ಲೆಯಲ್ಲಿ ಮುಷ್ಕರ ಬೆಂಬಲಿಸಿರುವ ಸಂಘಟನೆಗಳೇ ಪ್ರಬಲವಾಗಿದ್ದು, ಶೇ.90ಕ್ಕೂ ಅಧಿಕ ಸಂಖ್ಯೆಯ ಕಾರ್ಮಿಕರು ಎರಡು ದಿನವೂ ಕರ್ತವ್ಯದಿಂದ ದೂರು ಉಳಿದಿದ್ದರು. ಅಂತೆಯೇ ಇನ್ನಿತರ ನೌಕರರಲ್ಲೂ ಭಾಗಶಃ ನೌಕರರು ಮುಷ್ಕರದ ಹಿನ್ನೆಲೆಯಲ್ಲಿ ಎರಡು ದಿನಗಳೂ ಕರ್ತವ್ಯ ನಿರ್ವಹಿಸಿಲ್ಲ. ಒಟ್ಟಾರೆ ಮೈಸೂರು ಜಿಲ್ಲೆಯಲ್ಲಿ ಮುಷ್ಕರ ಸಂಪೂರ್ಣ ಯಶಸ್ವಿಯಾಗಿದೆ.

-ಜೆಸಿಟಿಯು ಸಂಚಾಲಕ ಎನ್.ಕೆ.ದೇವದಾಸ್

ಮೈಸೂರು ಮಿತ್ರ ಕೊಡಗು ಕಚೇರಿ: ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

ವಿರಾಜಪೇಟೆ: ಹುಲಿ ದಾಳಿಗೆ ಕಾರ್ಮಿಕ ಬಲಿ ಪ್ರಕರಣ

ಅರಣ್ಯ ಇಲಾಖೆ ವಿರುದ್ಧ ಪ್ರತಿಭಟನೆ



ವಿರಾಜಪೇಟೆ, ಮಾ.29– ತಾಲೂಕಿನ ರುದ್ರಗುಪ್ಪೆ ಗ್ರಾಮದಲ್ಲಿ ಮಂಗಳವಾರ ಹುಲಿ ದಾಳಿಯಿಂದ ಕೂಲಿ ಕಾರ್ಮಿಕ ಗಣೇಶ್‌ಪುಟ್ಟು(29) ಸಾವನ್ನಪ್ಪಿದ್ದು, ಘಟನೆ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ರೈತರು ಪ್ರತಿಭಟನೆ ನಡೆಸಿದರು.

ಘಟನೆ ನಡೆದ ಸ್ಥಳದಲ್ಲಿಯೇ ಮೃತ ದೇಹವನ್ನು ಇಟ್ಟು, ಸೋಮವಾರ ರಾತ್ರಿಯಿಂದ ರೈತರು, ಗ್ರಾಮಸ್ಥರು ಹಾಗೂ ಮೃತನ ಸಂಬಂಧಿಕರು ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘದ ಜಿಲ್ಲಾ ಅಧ್ಯಕ್ಷ ಮನು ಸೋಮಯ್ಯ ಮಾತನಾಡಿ, ಹುಲಿ ದಾಳಿಯಿಂದ ಗ್ರಾಮಸ್ಥರು, ರೈತರು ತೋಟಗಳಿಗೆ ತೆರಳಲು ಭಯಗೊಂಡಿದ್ದಾರೆ. ಅರಣ್ಯ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಇಂದು ಕೂಲಿ ಕಾರ್ಮಿಕ ಬಲಿಯಾಗಿದ್ದಾನೆ. ಇದಕ್ಕೆ ಡಿಎಫ್‌ಓ, ಎಸಿಎಫ್, ಸಿಸಿಎಫ್ ಹಾಗೂ ಆರ್‌ಎಫ್ ಅವರು ಹೊಣೆಯಾಗಿದ್ದು, ಅವರ ವಿರುದ್ಧ ಕೂಡಲೇ ಪ್ರಕರಣ ದಾಖಲಿಸಬೇಕು ಎಂದು ಸ್ಥಳದಲ್ಲಿದ್ದ ವಿರಾಜಪೇಟೆ ಡಿವೈಎಸ್‌ಪಿ ಜಯಕುಮಾರ್ ಅವರಿಗೆ ಮನವಿ ಮಾಡಿದರು. ಮನವಿ ಸ್ವೀಕರಿಸಿದ ಜಯಕುಮಾರ್ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ರೈತ ಸಂಘದ ಮುಖಂಡರು ಹಾಗೂ ಗ್ರಾಮಸ್ಥರು ಮಾತನಾಡಿ, ಈ ಭಾಗದಲ್ಲಿ ಕಾಡಾನೆ ಹಾಗೂ ಹುಲಿಗಳ ಹಾವಳಿ ಹೆಚ್ಚಾಗಿದ್ದು, ಕೃಷಿಕರು ಹಾಗೂ ಗ್ರಾಮಸ್ಥರು ತೋಟದಲ್ಲಿ ಭಯದಿಂದ ಕೆಲಸ ಮಾಡುವಂತಾಗಿದೆ. ಈ ಸಂಬಂಧ ಅಧಿಕಾರಿಗಳಿಗೆ ಹಲವು ಬಾರಿ ಮನವಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ ಎಂದು ದೂರಿದರು.

ಉಪ ಅರಣ್ಯ ಸಂರಕ್ಷಣಾಧಿಕಾರಿ ಚಕ್ರಪಾಣಿ ಅವರು, ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲ. ಅವರ ನಿರ್ಲಕ್ಷ್ಯದಿಂದಲೇ ಇಂದು ಹುಲಿ ದಾಳಿಯಿಂದ ಕಾರ್ಮಿಕ ಬಲಿಯಾಗಿದ್ದಾನೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮೃತ ಗಣೇಶ್ ಕುಟುಂಬದಿಂದ ಬಂದ ಮನವಿಗೆ ಸ್ಪಂದಿಸಿದ ಮಡಿಕೇರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಪೂವಯ್ಯ ಅವರು ಗ್ರಾಮಸ್ಥರೊಂದಿಗೆ ಮಾತನಾಡಿ, ಈ ಘಟನೆ ನಡೆಯಬಾರದಿತ್ತು. ಕಾಡುಗಳು ನಮ್ಮ ಅವಿಭಾಜ್ಯ ಅಂಗ. ಹುಲಿ ದಾಳಿಗೆ ಬಲಿಯಾಗಿರುವ ಗಣೇಶ್ ಪುಟ್ಟು ಅವರ ಪತ್ನಿಗೆ ಐದು ವರ್ಷದವರೆಗೂ 2 ಸಾವಿರ ರೂ. ಮಾಸಾಶನ ಹಾಗೂ ಇಲಾಖೆಯಲ್ಲಿ ಕೆಲಸ ನೀಡಲಾಗುವುದು. ಅವರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವುದಾಗಿ ತಿಳಿಸಿದರು.

ವಿರಾಜಪೇಟೆ ತಹಸೀಲ್ದಾರ್ ಆರ್. ಯೋಗನಂದ ಮಾತನಾಡಿ, ಇನ್ನೆರಡು ದಿನದಲ್ಲಿ ಪಡಿತರ ಹಾಗೂ ಇತರ ಸೌಲಭ್ಯಗಳನ್ನು ನೀಡುವ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಮುಖಂಡರು, ಗ್ರಾಮಸ್ಥರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ಪ್ರತಿಭಟನೆ ಸಂದರ್ಭ ಡಿವೈಎಸ್‌ಪಿ ಮುಂದಾಳತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಈ ವೇಳೆ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಜರಿದ್ದರು. ಬಳಿಕ ಗಣೇಶ್ ಪುಟ್ಟು ಮೃತದೇಹವನ್ನು ವಿರಾಜಪೇಟೆ ಗ್ರಾಮಾಂತರ ಠಾಣೆ ಪೊಲೀಸರು ಸಾರ್ವಜನಿಕ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಲಾಯಿತು.

ಮುಖ್ಯಾಂಶಗಳು

- ಸೋಮವಾರ ರಾತ್ರಿ ಯಿಡೀ ಶವವಿಟ್ಟು ಪ್ರತಿಭಟನೆ
- ಅರಣ್ಯ ಇಲಾಖೆಯಿಂದ ಮೃತನ ಪತ್ನಿಗೆ ಉದ್ಯೋಗ, 5 ವರ್ಷಗಳವರೆಗೆ 2 ಸಾವಿರ ರೂ. ಮಾಸಾಶನ, ಮಕ್ಕಳಿಗೆ ಉಚಿತ ಶಿಕ್ಷಣದ ಭರವಸೆ
- ತಾಲೂಕು ಆಡಳಿತದಿಂದ ಪಡಿತರ, ಇತರ ಸೌಲಭ್ಯ ಕಲ್ಪಿಸುವ ಭರವಸೆ
- ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಆಕ್ರೋಶ, ಡಿವೈಎಸ್‌ಪಿಗೆ ದೂರು

ಡಿಎಫ್‌ಓ ಅಡ್ಡಗಟ್ಟಿ ಧಿಕ್ಕಾರ ಕೂಗಿದ ಗ್ರಾಮಸ್ಥರು

ಪ್ರತಿಭಟನೆ ನಡೆಯುತ್ತಿದ್ದ ವೇಳೆ ಪ್ರತಿಭಟನಾಕಾರರು ಹಾಗೂ ಅಧಿಕಾರಿಗಳ ನಡುವೆ ಮಾತಿನ ಚಕಮಕಿ ನಡೆಯಿತು. ಈ ವೇಳೆ ಡಿಎಫ್‌ಓ ಚಕ್ರಪಾಣಿ ಅವರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಗ್ರಾಮಸ್ಥರು, ಕೊಡಗಿಗೆ ನಿಮ್ಮಂತ ಅಧಿಕಾರಿಗಳು ಬೇಡವಾಗಿದೆ. ಕರ್ತವ್ಯಕ್ಕೆ ನೀವು ದ್ರೋಹ ಮಾಡಿದ್ದೀರಿ ಎಂದು ಹರಿಹಾಯ್ದರು. ಬಳಿಕ, ಡಿಎಫ್‌ಓ ಚಕ್ರಪಾಣಿ ಸ್ಥಳದಿಂದ ಕಾಲ್ಕಿತ್ತರು. ಈ ವೇಳೆ ಅವರನ್ನು ಅಡ್ಡಗಟ್ಟಿದ ಪ್ರತಿಭಟನಾಕಾರರು ದಾರಿಯುದ್ದಕ್ಕೂ ಘೋಷಣೆ ಕೂಗಿ ಅವರನ್ನು ಸುತ್ತುವರಿದರು. ಕೂಡಲೇ ಪೊಲೀಸರು ಮಧ್ಯ ಪ್ರವೇಶಿಸಿ ಡಿಎಫ್‌ಓ ಅವರನ್ನು ರಕ್ಷಣೆ ಮೂಲಕ ಕರೆದೊಯ್ದರು. ನಂತರ ಘಟನೆಗೆ ವಿಷಾದ ವ್ಯಕ್ತಪಡಿಸಿದ ಡಿಎಫ್‌ಓ ಸುದ್ದಿಗಾರರೊಂದಿಗೆ ಮಾತನಾಡಿ, ಮುಂದಿನ 7 ದಿನಗಳೊಳಗೆ ಹುಲಿ ಸೆರೆ ಹಿಡಿಯಲಾಗುವುದು ಎಂದು ಭರವಸೆ ನೀಡಿದರು.

ಡಿಎಫ್‌ಓ ಚಕ್ರಪಾಣಿ ವರ್ಗಾವಣೆಗೆ ಎಂಎಲ್‌ಸಿ ವೀಣಾ ಅಚ್ಚಯ್ಯ ಆಗ್ರಹ



ಮಡಿಕೇರಿ, ಮಾ.29– ಕೊಡಗಿನ ಡಿಎಫ್‌ಓ ಚಕ್ರಪಾಣಿ ಅವರನ್ನು ಕೂಡಲೇ ವರ್ಗಾವಣೆ ಮಾಡಬೇಕು ಎಂದು ವಿಧಾನ ಪರಿಷತ್ ಸದಸ್ಯೆ ವೀಣಾ ಅಚ್ಚಯ್ಯ ಸರ್ಕಾರವನ್ನು ಆಗ್ರಹಿಸಿದರು.

ಸದನದ ಶೂನ್ಯ ವೇಳೆಯಲ್ಲಿ ವಿಷಯ ಪ್ರಸ್ತಾಪಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ವನ್ಯ ಪ್ರಾಣಿ– ಮಾನವ ಸಂಘರ್ಷ ಮಿತಿ ಮೀರಿದ್ದು, ಸರ್ಕಾರ ಕೊಡಗಿನ ಜನರ ನೆರವಿಗೆ ಬರಬೇಕು ಎಂದ ಅವರು, ವಿರಾಜ ಪೇಟೆ ರುದ್ರಗುಪ್ಪೆ ಗ್ರಾಮದಲ್ಲಿ ಹುಲಿ ದಾಳಿಯಿಂದ ಕಾರ್ಮಿಕ ಮೃತಪಟ್ಟಿದ್ದಾನೆ. ಆದರೆ, ಅಲ್ಲಿನ ಡಿಎಫ್‌ಓ ಚಕ್ರಪಾಣಿ ಅವರು ಮಾತ್ರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಆ ಅಧಿಕಾರಿಯನ್ನು ಜಿಲ್ಲೆಗೆ ಯಾರು ಕರೆ ತಂದರೋ ಗೊತ್ತಿಲ್ಲ. ಅವರಿಗೆ ಜನರಿಗಿಂತ ಕಾಡು ಪ್ರಾಣಿಗಳ ಮೇಲೆ ಪ್ರೀತಿ ಜಾಸ್ತಿಯಾಗಿದೆ. ತಕ್ಷಣವೇ ಡಿಎಫ್‌ಓ ಚಕ್ರಪಾಣಿ ಅವರನ್ನು ಜಿಲ್ಲೆಯಿಂದ ವರ್ಗಾವಣೆ ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದರು. ಸರ್ಕಾರ ನೆರವಿಗೆ ಬರದಿದ್ದಲ್ಲಿ ಮುಂದೊಂದು ದಿನ ಪರಿಹಾರ ಪಡೆಯಲು ಕೂಡ ಕೊಡಗಿನಲ್ಲಿ ಜನರೇ ಇಲ್ಲದಂತಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಅರಣ್ಯ ಸಚಿವರ ಪರವಾಗಿ ಸದನದಲ್ಲಿ ಮಾತನಾಡಿದ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಈಗಾಗಲೇ ಅರಣ್ಯ ಸಚಿವರು ಶಾಸಕರ ಸಹಿತ ಅರಣ್ಯ ಇಲಾಖೆ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಕೊಡಗಿಗೆ ಭೇಟಿ ನೀಡುವುದಾಗಿ ಹೇಳಿದ್ದರು. ಆದರೆ, ಇದರ ಮಧ್ಯೆ ಹುಲಿ ದಾಳಿ ನಡೆದಿದೆ ಎಂದು ಮಾಹಿತಿ ನೀಡಿದರು.

ಅರಣ್ಯ ಅಧಿಕಾರಿ ಚಕ್ರಪಾಣಿ ವಿರುದ್ಧ ದೂರುಗಳು ಬಂದಿವೆ. ಆ ಕುರಿತು ತನಿಖೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಅರಣ್ಯ ಸಚಿವರಿಗೆ ತಿಳಿಸುತ್ತೇನೆ ಎಂದು ಕೋಟಾ ಶ್ರೀನಿವಾಸ ಪೂಜಾರಿ ಸದನದಲ್ಲಿ ಹೇಳಿದರು.

ನಿರಂತರ ಹುಲಿ ದಾಳಿ: ಸರ್ಕಾರಕ್ಕೆ ಬೇಡವಾದ ಕೊಡಗು

ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ ಟೀಕೆ



ಮಡಿಕೇರಿ, ಮಾ.29– ಕೊಡಗು ಜಿಲ್ಲೆಯಲ್ಲಿ ವನ್ಯಜೀವಿಗಳ ದಾಳಿ ನಿರಂತರವಾಗಿ ನಡೆಯುತ್ತಿದ್ದು, ಮಾನವ ಜೀವಹಾನಿಯಾಗುತ್ತಿದ್ದರೂ ಸಮಸ್ಯೆಯ ಗಂಭೀರತೆಯನ್ನು ಅರಿಯುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ. ಅರಣ್ಯ ಪ್ರದೇಶದಿಂದ ಕೂಡಿರುವ ಕೊಡಗು ಜಿಲ್ಲೆಯನ್ನು ಅರಣ್ಯ ಸಚಿವರು ಮರೆತಿದ್ದಾರೆ ಎಂದು ಎಐಸಿಸಿ ವಕ್ತಾರ ಬ್ರಿಜೇಶ್ ಕಾಳಪ್ಪ ಆರೋಪಿಸಿದ್ದಾರೆ.

ಪತ್ರಿಕಾ ಪ್ರಕಟಣೆ ನೀಡಿರುವ ಅವರು, ದಕ್ಷಿಣ ಕೊಡಗಿನ ರುದ್ರಗುಪ್ಪೆಯಲ್ಲಿ ಹುಲಿ ದಾಳಿಯಿಂದ ಕಾರ್ಮಿಕ ಬಲಿಯಾಗಿರುವ ಘಟನೆ ಕುರಿತು ಆತಂಕ ವ್ಯಕ್ತಪಡಿಸಿದ್ದಾರೆ. ಕಳೆದ 5 ವರ್ಷಗಳಿಂದ ಕೊಡಗು ಜಿಲ್ಲೆಯನ್ನು ವನ್ಯಜೀವಿಗಳು ಅತಿಯಾಗಿ ಕಾಡುತ್ತಿವೆ. ಕಳೆದ ವರ್ಷ ಹುಲಿ ದಾಳಿಗೆ ಮೂವರು ಬಲಿಯಾಗಿದ್ದು, ಇಬ್ಬರು ಗಾಯಗೊಂಡಿದ್ದಾರೆ. ಲೆಕ್ಕವಿಲ್ಲದಷ್ಟು ಜಾನುವಾರುಗಳು ಜೀವ ಕಳೆದುಕೊಂಡಿವೆ. ಇದೀಗ ಮತ್ತೊಂದು ಜೀವ ಬಲಿಯಾಗಿದೆ. ಆದರೆ ಕಳೆದ 20–25 ವರ್ಷಗಳಿಂದ ಜಿಲ್ಲೆಯನ್ನು ಪ್ರತಿನಿಧಿಸುತ್ತಿರುವ ಶಾಸಕರು ಸರ್ಕಾರದ ಮೇಲೆ ಪ್ರಭಾವ ಬೀರಿ ವನ್ಯಜೀವಿ ದಾಳಿ ತಡೆಗೆ ಶಾಶ್ವತ ಪರಿಹಾರ ರೂಪಿಸುವಲ್ಲಿ ವಿಫಲರಾಗಿದ್ದಾರೆ ಎಂದು ಟೀಕಿಸಿದ್ದಾರೆ.

ಸರ್ಕಾರಕ್ಕೆ ಕೊಡಗಿನ ಬಗ್ಗೆ ಕರುಣೆ ಇಲ್ಲದಾಗಿದೆ, ಹುಲಿ ಮತ್ತು ಆನೆಗಳ ದಾಳಿಯಿಂದ ಮಾನವ ಜೀವಗಳು ಬಲಿಯಾಗುತ್ತಿದ್ದರೂ ಅರಣ್ಯ ಸಚಿವರನ್ನು ಜಿಲ್ಲೆಗೆ ಕಳುಹಿಸಿ ಪರಿಹಾರ ಸೂಚಿಸುವಂತೆ ಆದೇಶ ಹೊರಡಿಸುವ ಇಚ್ಛಾಶಕ್ತಿಯನ್ನು ಮುಖ್ಯಮಂತ್ರಿಗಳು ಪ್ರದರ್ಶಿಸುತ್ತಿಲ್ಲ. ಸರ್ಕಾರಕ್ಕೆ ಕೊಡಗು ಬೇಡವಾಗಿದೆ. ಜಿಲ್ಲೆಯಲ್ಲಿ ವನ್ಯಜೀವಿಗಳ ದಾಳಿ ಮಾತ್ರವಲ್ಲದೆ ಅರಣ್ಯ ಹಾಗೂ ಕಂದಾಯ ಇಲಾಖೆಗೆ ಸಂಬಂಧಿಸಿದ ಜ್ವಲಂತ ಸಮಸ್ಯೆಗಳಿವೆ. ಸಂಬಂಧಪಟ್ಟ ಖಾತೆಯ ಸಚಿವರು ಜಂಟಿಯಾಗಿ ಕೊಡಗಿನಲ್ಲೇ ಸಭೆ ನಡೆಸಬೇಕೆನ್ನುವ ಒತ್ತಾಯವನ್ನು ಜನ ಮಾಡಿದ್ದರೂ ನಿರ್ಲಕ್ಷ್ಯ ವಹಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಏ.8ರಂದು ಜಿಲ್ಲೆಗೆ ಅರಣ್ಯ ಸಚಿವ ಉಮೇಶ್ ಕತ್ತಿ ಭೇಟಿ



ಮಡಿಕೇರಿ, ಮಾ.29– ಜಿಲ್ಲೆಗೆ ಏ. 8ರಂದು ಅರಣ್ಯ ಸಚಿವ ಉಮೇಶ್ ಕತ್ತಿ ಅವರು ಆಗಮಿಸಲಿದ್ದು, ಜಿಲ್ಲೆಯಲ್ಲಿ ನಡೆಯುತ್ತಿರುವ ವನ್ಯ ಪ್ರಾಣಿ–ಮಾನವ ಸಂಘರ್ಷ ನಿವಾರಣೆ ಸಂಬಂಧ ಅರಣ್ಯ ಸಚಿವರು ಮತ್ತು ಪ್ರಮುಖರ ಸಭೆ ನಡೆಸಲಿದ್ದಾರೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಣ್ಯ ಸಚಿವರು ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ಆಯೋಜಿತ 'ಪಕ್ಷಿ ಹಬ್ಬ'ದಲ್ಲಿ ಪಾಲ್ಗೊಳ್ಳುವ ಸಂಬಂಧ ಆಗಮಿಸಲಿದ್ದಾರೆ. ಇದೇ ಸಂದರ್ಭ ವನ್ಯ ಪ್ರಾಣಿ ಮತ್ತು ಮಾನವ ಸಂಘರ್ಷ ಕುರಿತಾದ ಸಭೆಯನ್ನೂ ನಡೆಸುವ ಚಿಂತನೆ ನಡೆಸಲಾಗಿದೆ ಎಂದರು. ದಕ್ಷಿಣ ಕೊಡಗು ವ್ಯಾಪ್ತಿಯಲ್ಲಿ ಹುಲಿ ದಾಳಿಯಿಂದ ಯುವಕನ ಸಾವು ಸಂಭವಿಸಿದೆ. ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವ ಅಗತ್ಯತೆ ಇದೆ. ಈಗಾಗಲೆ ವನ್ಯ ಪ್ರಾಣಿ ಹಾವಳಿ ನಿಯಂತ್ರಣದ ಬಗ್ಗೆ ಗಂಭೀರ ಚಿಂತನೆಗಳು ಜಿಲ್ಲಾಡಳಿತ ಮತ್ತು ಸರ್ಕಾರದ ಮಟ್ಟದಲ್ಲಿ ನಡೆದಿದೆ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು.

ಕೊಡಗಿನಲ್ಲಿ ಮುಂದುವರೆದ ವ್ಯಾಘ್ರನ ಅಟ್ಟಹಾಸ



ಗೋಣಿಕೊಪ್ಪ, ಮಾ.29– ಕೊಡಗಿನಲ್ಲಿ ವ್ಯಾಘ್ರನ ಅಟ್ಟಹಾಸ ಮುಂದುವರೆದಿದ್ದು, ಮಂಗಳವಾರ ಸಮೀಪದ ಕುಂದಾ ಗ್ರಾಮದಲ್ಲಿ ಹುಲಿ ದಾಳಿಯಿಂದ ಕರುವೊಂದು ಸಾವನ್ನಪ್ಪಿರುವ ಘಟನೆ ನಡೆದಿದೆ.

ಸೋಮವಾರ ರುದ್ರಗುಪ್ಪೆ ಗ್ರಾಮದ ಕಾಫಿ ತೋಟದಲ್ಲಿ ಹುಲಿ ದಾಳಿಯಿಂದ ಕಾರ್ಮಿಕನೊಬ್ಬ ಸಾವನ್ನಪ್ಪಿದ್ದನು. ಮಂಗಳವಾರ ರುದ್ರಗುಪ್ಪೆ ಗ್ರಾಮದಿಂದ ಕೇವಲ 3 ಕಿ.ಮೀ ದೂರದಲ್ಲಿರುವ ಕುಂದಾ ಗ್ರಾಮದಲ್ಲಿ ಹುಲಿ ದಾಳಿಗೆ ಕರು ಬಲಿಯಾಗಿದ್ದು, ಇದು ನರಭಕ್ಷಕ ಹುಲಿಯಾಗಿರಬಹುದು ಎಂದು ಶಂಕಿಸಲಾಗಿದೆ. ರೈತರಲ್ಲಿ ಹಾಗೂ ಸ್ಥಳೀಯರಲ್ಲಿ ಮತ್ತಷ್ಟು ಆತಂಕ ಉಂಟಾಗಿದೆ.

ಕರು ಸಾವು: ಗ್ರಾಮದ ಕಡೇಮಾಡ ಮೋಹನ್ ಅವರಿಗೆ ಸೇರಿದ ಕರು ಸಾವನ್ನಪ್ಪಿದ್ದು, ಇವರು ಕರುವನ್ನು ತಮ್ಮ ಮನೆಯ ಮುಂಭಾಗದಲ್ಲಿದ್ದ ಕೊಟ್ಟಿಗೆಯ ಹೊರ ಭಾಗದಲ್ಲಿ ಕಟ್ಟಿಹಾಕಿದ್ದರು. ಮಂಗಳವಾರ ಮುಂಜಾನೆ ಕರುವಿನ ಮೇಲೆ ದಾಳಿ ನಡೆಸಿದೆ. ಈ ವೇಳೆ ಮನೆಯಲ್ಲಿದ್ದವರು ಕೂಗಿಕೊಂಡಿದ್ದರಿಂದ ಈ ವೇಳೆ ಹುಲಿ ಕರು ಬಿಟ್ಟು ಪರಾರಿಯಾಗಿದೆ. ಘಟನೆಯಿಂದ ಕರುವಿನ ಹೊಟ್ಟೆ ಹಾಗೂ ತಲೆ ಭಾಗದಲ್ಲಿ ಗಂಭೀರ ಗಾಯವಾಗಿ ಸಾವನ್ನಪ್ಪಿದೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ, ಹುಲಿ ಸೆರೆಗೆ ಬೋನ್ ಇಡಲು ಮುಂದಾಗಿದ್ದಾರೆ.

ಏ.1, 'ಪರೀಕ್ಷಾ ಪೇ ಚರ್ಚಾ' ಸಂವಾದ



ಮಡಿಕೇರಿ, ಮಾ.29– ಶಿಕ್ಷಣದ ಮಹತ್ವವನ್ನು ಮಕ್ಕಳಲ್ಲಿ ಮೂಡಿಸಿ, ಒತ್ತಡ ಮುಕ್ತರಾಗಿ ಪರೀಕ್ಷೆಯನ್ನು ಎದುರಿಸಲು ಪ್ರೇರೇಪಣೆ ನೀಡುವ ನಿಟ್ಟಿನಲ್ಲಿ ಏ. 1ರಂದು ಪ್ರಧಾನಮಂತ್ರಿಗಳ 5ನೇ ಆವೃತ್ತಿಯ 'ಪರೀಕ್ಷಾ ಪೇ ಚರ್ಚಾ' ಸಂವಾದ ಕಾರ್ಯಕ್ರಮ ರಾಷ್ಟ್ರವ್ಯಾಪಿ ಏಕ ಕಾಲದಲ್ಲಿ ನಡೆಯಲಿದ್ದು, ಇದರ ಸದುಪಯೋಗವನ್ನು ಮಕ್ಕಳು ಪಡೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಮನವಿ ಮಾಡಿದ್ದಾರೆ.

ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನ ಮಂತ್ರಿಗಳು ಸೂಚಿತ ದಿನದಂದು ಬೆಳಗ್ಗೆ 11 ಗಂಟೆಗೆ ದೇಶದಾದ್ಯಂತ ಆಯ್ದ ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರೊಂದಿಗೆ ಸುಮಾರು ಒಂದೂವರೆ ಗಂಟೆಗಳ ಕಾಲ ಸಂವಾದ ನಡೆಸಲಿದ್ದಾರೆ. ಈ ಸಂವಾದಕ್ಕೆ ಕೊಡಗಿನ ಕೇಂದ್ರೀಯ ವಿದ್ಯಾಲಯದ 9ನೇ ತರಗತಿ ವಿದ್ಯಾರ್ಥಿನಿ ಪದ್ಮಪ್ರಿಯ ಅವರು ಆಯ್ಕೆಯಾಗಿದ್ದಾರೆ ಎಂದು ಮಾಹಿತಿ ನೀಡಿದರು.

'ಪರೀಕ್ಷೆ ಪೇ ಚರ್ಚಾ' ಕಾರ್ಯಕ್ರಮ ದೂರದರ್ಶನದ ವಿವಿಧ ವಾಹಿನಿಗಳಲ್ಲಿ ನೇರ ಪ್ರಸಾರವಾಗಲಿದ್ದು, ಜಿಲ್ಲೆಯ ಕೇಂದ್ರೀಯ ವಿದ್ಯಾಲಯ, ನವೋದಯ ವಿದ್ಯಾಲಯಗಳಲ್ಲಿ ಸ್ಕ್ರೀನ್ ಅಳವಡಿಸುವ ಮೂಲಕ ಅಲ್ಲಿನ ವಿದ್ಯಾರ್ಥಿಗಳು, ಶಿಕ್ಷಕರು ಪಾಲ್ಗೊಳ್ಳುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ ಎಂದು ವಿವರಿಸಿದರು.


'ಪರೀಕ್ಷಾ ಪೇ ಚರ್ಚಾ' ಸಂವಾದ ಕಾರ್ಯಕ್ರಮದಲ್ಲಿ ನೇರವಾಗಿ ಪ್ರಧಾನ ಮಂತ್ರಿಗಳೊಂದಿಗೆ ಮಾತನಾಡುವ ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ಕಳೆದ ಸಾಲಿನ ಡಿ. 28 ರಿಂದ, ಪ್ರಸಕ್ತ ಸಾಲಿನ ಫೆ. 3ರವರೆಗೆ ನಡೆಯಿತು. ಇದರಲ್ಲಿ ಪ್ರಬಂಧ ಸ್ಪರ್ಧೆ ಸೇರಿದಂತೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಿ, ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ. ಈ ಸ್ಪರ್ಧೆಗಳಲ್ಲಿ ಪಾಲ್ಗೊಂಡ ಜಿಲ್ಲೆಯ ಕೇಂದ್ರೀಯ ವಿದ್ಯಾಲಯದ ಪದ್ಮಪ್ರಿಯ ಸಂವಾದಕ್ಕೆ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಿಡಿಪಿಐ ವೇದಮೂರ್ತಿ, ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರಾದ ಅರ್ಜುನ್ ಸಿಂಗ್, ನವೋದಯ ವಿದ್ಯಾಲಯದ ಪ್ರಾಂಶುಪಾಲರಾದ ಪಂಕಜಾಕ್ಷನ್ ಓ.ಎಂ. ಉಪಸ್ಥಿತರಿದ್ದರು.

6 ನೇರಪ್ರಸಾರ

ಕಾರ್ಯಕ್ರಮ ದೂರದರ್ಶನ (ಡಿಡಿ ನ್ಯಾಷನಲ್, ಡಿಡಿ ನ್ಯೂಸ್, ಡಿಡಿ ಇಂಡಿಯಾ) ದಲ್ಲಿ ನೇರ ಪ್ರಸಾರವಾಗಲಿದ್ದು, ರೇಡಿಯೋ ಚಾನೆಲ್‌ಗಳು, ಟಿವಿ ಚಾನೆಲ್‌ಗಳು, ಎಡುಮಿನೋಫ್ ಇಂಡಿಯಾದ ಯೂಟ್ಯೂಬ್ ಚಾನೆಲ್‌ಗಳು, ನರೇಂದ್ರಮೋದಿ, ಪಿಮೊಯಿಂಡಿಯಾ, ಪಿಬಿಂಡಿಯಾ, ದೂರದರ್ಶನ ನ್ಯಾಷನಲ್, ಮೈಗೌಇಂಡಿಯಾ, ಡಿಡಿನ್ಯೂಸ್, ರಾಜ್ಯಸಭಾ ಟಿವಿ, ಸ್ವಯಂ ಪ್ರಭಾದಲ್ಲಿಯೂ ಪ್ರಸಾರವಾಗಲಿದೆ.

ಮಡಿಕೇರಿ ಸುತ್ತಮುತ್ತ ಗುಡುಗು ಸಹಿತ ಮಳೆ



ಮಡಿಕೇರಿ, ಮಾ.29– ಮಡಿಕೇರಿ ನಗರ ಸೇರಿದಂತೆ ಸುತ್ತಮುತ್ತಲ ಗ್ರಾಮಗಳಲ್ಲಿ ಮಂಗಳವಾರ ಮಧ್ಯಾಹ್ನದ ಬಳಿಕ ಉತ್ತಮ ಮಳೆ ಸುರಿದಿದೆ. ಗುಡುಗು–ಸಿಡಿಲು ಸಹಿತ ಅರ್ಧ ಗಂಟೆಗೂ ಹೆಚ್ಚು ಕಾಲ ಮಳೆ ಸುರಿದಿದ್ದು, ಧರೆಗೆ ತಂಪೆರೆದಂತಾಗಿದೆ.

ಮಡಿಕೇರಿ ನಗರ, ಗಾಳಿಬೀಡು, ಮಕ್ಕಂದೂರು, ಹೆಮ್ಮೆತ್ತಾಳು, ಮೇಘತ್ತಾಳು, ಮುಕ್ಕೋಡ್ಲು, ಹಟ್ಟಿಹೊಳೆ, ಮೇಕೇರಿ, ಹಾಕತ್ತೂರು, ಬಿಳಿಗೇರಿ ವ್ಯಾಪ್ತಿಯಲ್ಲಿ ಮಳೆಯಾಗಿದ್ದು, ಕಾಫಿ ಬೆಳೆಗಾರರಲ್ಲಿ ಮಂದಹಾಸ ಮೂಡಿಸಿದೆ. ಇದೀಗ ಸುರಿದ ಮಳೆಯಿಂದ ಕಾಫಿ ಹೂ ಅರಳಲು ಸಹಕಾರಿಯಾಗಿದೆ. ಇನ್ನು ಪಂಪ್‌ಸೆಟ್‌ಗಳನ್ನು ಬಳಸಿ ನೀರು ಹಾರಿಸುವ ಮೂಲಕ ಕಾಫಿ ಹೂಗಳನ್ನು ಅರಳಿಸಿದ್ದ ಬೆಳೆಗಾರರಿಗೆ ಇದೀಗ ಸುರಿದ ಮಳೆಯಿಂದ ಬ್ಯಾಕಿಂಗ್ ನೀಡಿದಂತಾಗಿದೆ.

ಕಾರ್ಮಿಕ ಸಂಘಟನೆಗಳ ಪ್ರತಿಭಟನೆ




ವಿರಾಜಪೇಟೆ, ಮಾ.29– ಭಾರತ ಉಳಿಸಿ ಜನತೆಯನ್ನು ರಕ್ಷಿಸಿ ಕೇಂದ್ರ ಕಾರ್ಮಿಕ ಸಂಘಟನೆಗಳಿಂದ ರೈತ ಹಾಗೂ ಕಾರ್ಮಿಕ ವಿರೋಧಿ ಕಾನೂನು ರದ್ಧತಿಗಾಗಿ ಮತ್ತು ಬೆಲೆ ಏರಿಕೆ ನಿಯಂತ್ರಣಕ್ಕಾಗಿ ದೇಶಾದ್ಯಂತ ಕರೆ ನೀಡಿದ ಮುಷ್ಕರದ ಅಂಗವಾಗಿ ಪಟ್ಟಣದಲ್ಲಿ ಮಂಗಳವಾರ ಸಿಐಟಿಯು ಹಾಗೂ ಜೆಸಿಟಿಯು ಸಂಘಟನೆ ಸೇರಿದಂತೆ ಇತರ ಅನೇಕ ಕಾರ್ಮಿಕ ಸಂಘಟನೆಗಳಿಂದ ಪ್ರತಿಭಟನೆ ನಡೆಯಿತು.

ಪಟ್ಟಣದ ಗಡಿಯಾರ ಕಂಬದಿಂದ ತಾಲೂಕು ಕಚೇರಿವರೆಗೆ ಕಾರ್ಮಿಕ ಸಂಘಟನೆಗಳು ಮೆರವಣಿಗೆ ನಡೆಸಿ, ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಬಳಿಕ, ತಹಸೀಲ್ದಾರ್ ಆರ್.ಯೋಗನಂದ ಅವರ ಮೂಲಕ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಸಿಐಟಿಯು ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ಸಿ. ಸಾಬು ಮಾತನಾಡಿ, ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ, ಹಾಗೂ ದಿನ ನಿತ್ಯದ ಅಗತ್ಯ ವಸ್ತುಗಳ ಬೆಲೆಗಳನ್ನು ನಿಯಂತ್ರಿಸಬೇಕು, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಗಾಗಿ ಕನಿಷ್ಠ ವೇತನ 26 ಸಾವಿರ ರೂ. ನೀಡಬೇಕು, ಅಂಗನವಾಡಿ ಮತ್ತು ಬಿಸಿಯೂಟ, ಆಶಾ ಕಾರ್ಯಕರ್ತರನ್ನು ಗುರುತಿಸಿ ಖಾಯಂ ವೇತನ ನೀಡುವ ಮೂಲಕ ಸಾಮಾಜಿಕ ಭದ್ರತೆ ಜಾರಿಮಾಡಬೇಕು ಎಂದು ಆಗ್ರಹಿಸಿದರು.

ಸಿಐಟಿಯು ಸಂಘಟನೆಯ ಜಿಲ್ಲಾ ಅಧ್ಯಕ್ಷ ಎ.ಮಹಾದೇವ, ಸಂಘಟನೆಯ ಉಪಾಧ್ಯಕ್ಷ ಎನ್.ಡಿ.ಕುಟ್ಟಪ್ಪ, ಅಕ್ಷರ ದಾಸೋಹದ ಜಿಲ್ಲಾ ಅಧ್ಯಕ್ಷೆ ಕೆ.ಎ. ಪ್ರಮೀಳಾ, ಕಾರ್ಯದರ್ಶಿ ಕುಸುಮಾ, ಜಂಟಿ ಕಾರ್ಯದರ್ಶಿ ರಾಚಪ್ಪಾಜಿ ಸಭೆಯನ್ನುದ್ದೇಶಿಸಿ ಮಾತನಾಡಿದರು. ಪ್ರತಿಭಟನೆಯಲ್ಲಿ ಕಟ್ಟಡ ಕಾರ್ಮಿಕ ಸಂಘಟನೆಯ ಹಮೀದ್, ಖಾಸಿಂ, ಸಂಘಟನೆಯ ಪ್ರಮುಖರು ಸದಸ್ಯರು ಪಾಲ್ಗೊಂಡಿದ್ದರು.

ಯುದ್ಧ–ಪ್ರೇರಿತ ಆರ್ಥಿಕ ಹಿನ್ನಡೆ ತಗ್ಗಿಸಲು ಸರ್ಕಾರ ಯತ್ನ: ಪ್ರಧಾನಿ ಮೋದಿ



ಭೋಪಾಲ್, ಮಾ.29– ಕೋವಿಡ್–19 ಸಾಂಕ್ರಾಮಿಕದ ನಂತರ ಮತ್ತು ಯುದ್ಧ–ಪ್ರೇರಿತ (ಉಕ್ರೇನ್ ಮೇಲೆ ರಷ್ಯಾ ದಾಳಿ) ಆರ್ಥಿಕ ಬಿಕ್ಕಟ್ಟಿನಿಂದಾಗಿ ನಾಗರಿಕರ ಮೇಲಿನ ಹೊರೆ ತಗ್ಗಿಸಲು ಪ್ರಯತ್ನಿಸಲಾಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಹೇಳಿದ್ದಾರೆ.

ಇಂದು ವಿಡಿಯೋ ಕಾನ್ಫರೆನ್ಸ್ ಮೂಲಕ 'ಗ್ರಹ ಪ್ರವೇಶ' ಕಾರ್ಯಕ್ರಮದ ಅಡಿಯಲ್ಲಿ ಮಧ್ಯಪ್ರದೇಶದಲ್ಲಿ ಪಿಎಂಎವೈ ಯೋಜನೆಯ ಫಲಾನುಭವಿಗಳ 5.21 ಲಕ್ಷ ಮನೆಗಳನ್ನು ಉದ್ಘಾಟಿಸಿ ಮಾತನಾಡಿದ ಪ್ರಧಾನಿ ಮೋದಿ, "ಹಿಂದೆ, ಕೊರೊನಾ ವೈರಸ್ ಏಕಾಏಕಿ ಇಡೀ ವಿಶ್ವವನ್ನೇ ತೊಂದರೆಗೆ ಸಿಲುಕಿಸಿತು. ಈಗ, ಜಗತ್ತು ಯುದ್ಧ ಭೂಮಿಗೆ ಪ್ರವೇಶಿಸಿದೆ. ಇದರಿಂದಾಗಿ, ಆರ್ಥಿಕವಾಗಿ ಹೊಸ ಬಿಕ್ಕಟ್ಟುಗಳು ಉದ್ಭವಿಸುತ್ತಿವೆ. ಆದರೆ ಇದರಿಂದ ಭಾರತೀಯ ನಾಗರಿಕರ ಮೇಲೆ ಹೊರೆಯಾಗದಂತೆ ನೋಡಿಕೊಳ್ಳಲು ನಮ್ಮ ಸರ್ಕಾರ ಪ್ರಯತ್ನಿಸುತ್ತಿದೆ ಎಂದು ಹೇಳಿದರು.

ಕೆಲವು ರಾಜಕೀಯ ಪಕ್ಷಗಳು ಬಡತನವನ್ನು ತೊಡೆದುಹಾಕಲು ಸಾಕಷ್ಟು ಘೋಷಣೆಗಳನ್ನು ಕೂಗಿದವು. ಆದರೆ ಬಡವರನ್ನು ಸಬಲೀಕರಣಗೊಳಿಸಲು ಯಾವ ಕಾರ್ಯಕ್ರಮವನ್ನು ಮಾಡಲಿಲ್ಲ. ಬಡವರು ಸಬಲೀಕರಣಗೊಂಡಾಗ ಅದು ಅವರಿಗೆ ಬಡತನದ ವಿರುದ್ಧ ಹೋರಾಡುವ ಧೈರ್ಯವನ್ನು ನೀಡುತ್ತದೆ ಎಂದು ನಾನು ನಂಬುತ್ತೇನೆ. ಪ್ರಾಮಾಣಿಕ ಸರ್ಕಾರದ ಪ್ರಯತ್ನಗಳು ಒಟ್ಟಾಗಿ ಇದ್ದಾಗ ಬಡವರು ಬಡತನವನ್ನು ತೊಡೆದುಹಾಕುತ್ತಾರೆ ಎಂದರು.

ಕೇಂದ್ರದ ಬಿಜೆಪಿ ಸರ್ಕಾರವಿರಲಿ, ರಾಜ್ಯಗಳಲ್ಲಿ ಬಿಜೆಪಿ ಸರ್ಕಾರವಿರಲಿ, ಪಕ್ಷವು 'ಸಬ್ಕಾ ಸಾಥ್ ಸಬ್ಕಾ ವಿಕಾಸ್' ಎಂಬ ಮಂತ್ರದೊಂದಿಗೆ ನಡೆದುಕೊಳ್ಳುತ್ತಿದೆ. ಎಲ್ಲರೂ ಬಡವರ ಸಬಲೀಕರಣಕ್ಕಾಗಿ ಶ್ರಮಿಸುತ್ತಿದ್ದಾರೆ ಎಂದು ಮೋದಿ ಹೇಳಿದರು.

ಹಿಂದಿನ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಪ್ರಧಾನಿ ಮೋದಿ, ಕಳೆದ ಸರ್ಕಾರ ತಮ್ಮ ಅಧಿಕಾರಾವಧಿಯಲ್ಲಿ ಬಡವರಿಗೆ ಕೆಲವೇ ಲಕ್ಷ ಮನೆಗಳನ್ನು ನಿರ್ಮಿಸಿದೆ. ನಮ್ಮ ಸರ್ಕಾರ ಬಡವರಿಗೆ ಸುಮಾರು 2.5 ಕೋಟಿ ಮನೆಗಳನ್ನು ನೀಡಿದೆ. ಇವುಗಳಲ್ಲಿ 2 ಕೋಟಿ ಮನೆಗಳನ್ನು ಹಳ್ಳಿಗಳಲ್ಲಿ ನಿರ್ಮಿಸಲಾಗಿದೆ. ಎರಡು ವರ್ಷಗಳು, ಕೊರೋನಾ ವೈರಸ್ ನಿಂದಾಗಿ ಅಡೆತಡೆಗಳ ಹೊರತಾಗಿಯೂ ಅಭಿವೃದ್ಧಿ ಕೆಲಸ ನಿಧಾನವಾಗಲಿಲ್ಲ ಎಂದರು.

ಬಿಜೆಪಿ ಸಂಸ್ಥಾಪನಾ ದಿನ ಸಾಮರಸ್ಯ ದಿನವಾಗಿ ಆಚರಣೆ

ನವದೆಹಲಿ, ಮಾ.29– ಇದೇ ಏಪ್ರಿಲ್ 6ರಂದು ನಡೆಯಲಿರುವ ಬಿಜೆಪಿ ಸಂಸ್ಥಾಪನಾ ದಿನಾಚರಣೆ ಪ್ರಯುಕ್ತ ಸಾಮರಸ್ಯ ದಿನವನ್ನಾಗಿ ಆಚರಿಸಲು ನಿರ್ಧರಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು ಹತ್ತು–ಹಲವು ಮಹತ್ವದ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ.

ನವದೆಹಲಿಯ ಅಂಬೇಡ್ಕರ್ ಕೇಂದ್ರದಲ್ಲಿ ನಡೆದ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿರುವ ಅವರು, ಏಪ್ರಿಲ್ 6 ರಿಂದ ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನದ ದಿನವಾದ ಏಪ್ರಿಲ್ 14ರವರೆಗೆ ಬಿಜೆಪಿಯಿಂದ ಸರಣಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ರಕ್ತದಾನ ಶಿಬಿರಗಳು ಸೇರಿದಂತೆ ಸಾರ್ವಜನಿಕ ಹಿತಾಸಕ್ತಿ ಕಾರ್ಯಕ್ರಮಗಳೂ ನಡೆಯಲಿವೆ ಎಂದು ಅವರು ತಿಳಿಸಿದ್ದಾರೆ.

14 ಮಾಜಿ ಪ್ರಧಾನಿಗಳ ಕೊಡುಗೆ ಗುರುತಿಸಲು ಎನ್‌ಡಿಎ ಸರ್ಕಾರ ಕ್ರಮ ಕೈಗೊಂಡಿದೆ. ಅದಕ್ಕಾಗಿ ಪ್ರತಿಷ್ಠಿತ ವಸ್ತು ಸಂಗ್ರಹಾಲಯಗಳನ್ನೂ ನಿರ್ಮಿಸಲಾಗಿದ್ದು, ಏಪ್ರಿಲ್ 14ರಂದು ಸಂಗ್ರಹಾಲಯವನ್ನು ಉದ್ಘಾಟಿಸಾಗುವುದು. ನೆಹರೂ ಮ್ಯೂಸಿಯಂನಲ್ಲಿರುವ ಪ್ರಧಾನ ಮಂತ್ರಿ ಸಂಗ್ರಹಾಲಯವು ಎಲ್ಲ ಮಾಜಿ ಪ್ರಧಾನಿಗಳ ಕಾರ್ಯ ವೈಖರಿ, ಅವರು ದೇಶಕ್ಕೆ ನೀಡಿರುವ ಕೊಡುಗೆಗಳನ್ನು ಸ್ಮರಿಸಲಿದೆ. ಈ ಮೂಲಕ ಎಲ್ಲಾ ಪ್ರಧಾನ ಮಂತ್ರಿಗಳ ಕೊಡುಗೆ ಗುರುತಿಸುವುದನ್ನು ತಮ್ಮ ಸರ್ಕಾರ ಖಚಿತಪಡಿಸಿದೆ ಎಂದಿದ್ದಾರೆ ಎಂದು ಸುದ್ದಿ ಸಂಸ್ಥೆಯೊಂದು ವರದಿ ಮಾಡಿದೆ. ಇದರೊಂದಿಗೆ ರಾಷ್ಟ್ರ ರಾಜಧಾನಿಯಲ್ಲಿ ಸ್ಥಾಪಿಸಲಾಗಿರುವ ಡಾ.ಬಿ.ಆರ್.ಅಂಬೇಡ್ಕರ್ ವಸ್ತು ಸಂಗ್ರಹಾಲಯವೂ ಅಂಬೇಡ್ಕರ್ ಜನ್ಮದಿನವಾದ ಏಪ್ರಿಲ್ 14ರಂದೇ ಲೋಕಾರ್ಪಣೆಗೊಳ್ಳಲಿದೆ ಎಂದಿದ್ದಾರೆ.

ಇದೇ ವೇಳೆ ಸಾರ್ವಜನಿಕ ಹಿತಾಸಕ್ತಿ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿರುವ ಸಂಸದರು, ಕೇಂದ್ರ ಸರ್ಕಾರವು ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ (PM-GKAY) ಯೋಜನೆಯನ್ನು ಇನ್ನೂ 6 ತಿಂಗಳವರೆಗೆ ವಿಸ್ತರಿಸಿದೆ.

'ತುರ್ತು ತಾಂತ್ರಿಕ ನೆರವು' ನೀಡಲು ಉಕ್ರೇನ್‌ಗೆ ವಿಶ್ವಸಂಸ್ಥೆ ಪರಮಾಣು ವಾಚ್‌ಡಾಗ್ ಮುಖ್ಯಸ್ಥರ ಭೇಟಿ

ಬರ್ಲಿನ್, ಮಾ.29– ದೇಶದ ಪರಮಾಣು ಸೌಲಭ್ಯಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದರ ಜೊತೆಗೆ 'ತುರ್ತು ತಾಂತ್ರಿಕ ನೆರವು' ನೀಡುವುದರ ಸಂಬಂಧ ಹಿರಿಯ ಸರ್ಕಾರಿ ಅಧಿಕಾರಿಗಳೊಂದಿಗೆ ಚರ್ಚಿಸಲು ವಿಶ್ವಸಂಸ್ಥೆ ಪರಮಾಣು ವಾಚ್‌ಡಾಗ್ ಮಹಾನಿರ್ದೇಶಕರು ಉಕ್ರೇನ್‌ಗೆ ಆಗಮಿಸಿದ್ದಾರೆ.

ಉಕ್ರೇನ್‌ನ ಪರಮಾಣು ತಾಣಗಳ ಸುರಕ್ಷತೆ ಮತ್ತು ಭದ್ರತಾ ಬೆಂಬಲವನ್ನು ಆರಂಭಿಸುವುದು ರಾಫೆಲ್ ಮರಿಯಾನೋ ಗ್ರಾಸ್ಸಿ ಅವರ ಗುರಿಯಾಗಿದೆ ಎಂದು ಇಂಟರ್ನ್ಯಾಷನಲ್ ಅಟಾಮಿಕ್ ಎನರ್ಜಿ ಏಜೆನ್ಸಿ ಹೇಳಿದೆ. ಐಎಇಎ ತಜ್ಞರನ್ನು 'ಆದ್ಯತೆಯ ಸೌಲಭ್ಯ' ಒದಗಿಸುವುದು, ಮೇಲ್ವಿಚಾರಣೆ ಮತ್ತು ತುರ್ತು ಸಲಕರಣೆಗಳನ್ನು ಒಳಗೊಂಡಂತೆ 'ಪ್ರಮುಖ ಸುರಕ್ಷತೆ ಮತ್ತು ಭದ್ರತಾ ಸರಬರಾಜುಗಳನ್ನು' ಕಳುಹಿಸುವುದು ಸೇರಿದೆ.

ಈ ವಾರ ಉಕ್ರೇನ್‌ನ ಪರಮಾಣು ವಿದ್ಯುತ್ ಸ್ಥಾವರಗಳಲ್ಲಿ ಒಂದಕ್ಕೆ ಗ್ರಾಸಿ ಭೇಟಿ ನೀಡಲಿದ್ದಾರೆ. ಆದರೆ ಯಾವುದೆಂದು ಹೇಳಿಲ್ಲ. ಉಕ್ರೇನ್ ನಾಲ್ಕು ಸಕ್ರಿಯ ವಿದ್ಯುತ್ ಸ್ಥಾವರಗಳಲ್ಲಿ 15 ಪರಮಾಣು ರಿಯಾಕ್ಟರ್‌ಗಳನ್ನು ಹೊಂದಿದೆ. 1986ರ ಪರಮಾಣು ದುರಂತದ ಸ್ಥಳವಾದ ಚೆರ್ನೋಬಿಲ್ ಸ್ಥಾವರವನ್ನು ನಿಷ್ಕ್ರಿಯಗೊಳಿಸಲಾಗಿದೆ. ರಷ್ಯಾದ ಪಡೆಗಳು ಚೆರ್ನೋಬಿಲ್ ಮತ್ತು ಝುಪೊರಿಝಿಯಾದಲ್ಲಿನ ಅತಿದೊಡ್ಡ ಸಕ್ರಿಯ ವಿದ್ಯುತ್ ಸ್ಥಾವರದ ನಿಯಂತ್ರಣವನ್ನು ತೆಗೆದುಕೊಂಡಿವೆ. ರಷ್ಯಾ ಸೇನೆ ದಾಳಿಯಿಂದ ಉಕ್ರೇನ್‌ನ ಪರಮಾಣು ವಿದ್ಯುತ್ ಸ್ಥಾವರಗಳು, ವಿಕಿರಣ ಸೋರಿಕೆ ಇತರ ಸೌಲಭ್ಯಗಳು ಹೆಚ್ಚು ಅಪಾಯಕ್ಕೆ ಸಿಲುಕಿಸುತ್ತಿದೆ ಎಂದು ಗ್ರಾಸಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆಗೆ ಕಾಂಗ್ರೆಸ್ ಸಿದ್ಧ

ಬೆಂಗಳೂರು, ಮಾ. 29– ರಾಜ್ಯದಲ್ಲಿ ಅವಧಿಗೆ ಮುನ್ನ ವಿಧಾನಸಭಾ ಚುನಾವಣೆ ನಡೆದರೆ ಮತದಾರರನ್ನು ಎದುರಿಸಲು ತಮ್ಮ ಪಕ್ಷ ಸಿದ್ಧವಿದೆ ಎಂದು ಕರ್ನಾಟಕ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ಹೇಳಿದ್ದಾರೆ. ಅಲ್ಲದೆ ನ.27 ರಂದು ಚುನಾವಣೆ ಘೋಷಣೆ ಮಾಡಬಹುದು ಎಂದು ಸಂಭವನೀಯ ದಿನಾಂಕವನ್ನೂ ಉಲ್ಲೇಖಿಸಿದ್ದಾರೆ.

ಏತನ್ಮಧ್ಯೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈ ವಾರದ ಕೊನೆಯಲ್ಲಿ ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ ಮತ್ತು ಮುಂದಿನ ವರ್ಷ ನಡೆಯಲಿರುವ ವಿಧಾನಸಭಾ ಚುನಾವಣೆಗೆ ಪಕ್ಷದ ತಯಾರಿ ಮತ್ತು ಪದಾಧಿಕಾರಿಗಳೊಂದಿಗೆ ಸರಣಿ ಸಭೆಗಳನ್ನು ನಡೆಸಲಿದ್ದಾರೆ.

ರಾಜ್ಯದಲ್ಲಿ ಅವಧಿಗೂ ಮುನ್ನ ವಿಧಾನಸಭೆ ಚುನಾವಣೆ ನಡೆಯುವ ಸಾಧ್ಯತೆ ಕುರಿತ ಪ್ರಶ್ನೆಗೆ ಉತ್ತರಿಸಿದ ಡಿಕೆಶಿ, ಅವರು (ಚುನಾವಣಾ ಆಯೋಗ) ಬಯಸಿದಾಗ ಅದನ್ನು(ಚುನಾವಣೆ ಘೋಷಿಸಲಿ) ಮಾಡಲಿ... ನಾಳೆಯೇ, ಈ ತಿಂಗಳು, ನವೆಂಬರ್ 27 ಅಥವಾ ಮುಂದಿನ ಮಾರ್ಚ್‌ನಲ್ಲಿ ಚುನಾವಣೆ ಘೋಷಿಸಲಿ. ಕಾಂಗ್ರೆಸ್ ಚುನಾವಣೆ ಎದುರಿಸಲು ಸಿದ್ಧವಾಗಿದೆ ಎಂದಿದ್ದಾರೆ.

ನವೆಂಬರ್ 27 ಅನ್ನು ಚುನಾವಣೆ ಘೋಷಣೆಯ ದಿನಾಂಕ ಎಂದು ನಿರ್ದಿಷ್ಟವಾಗಿ ಉಲ್ಲೇಖಿಸಿರುವ ಬಗ್ಗೆ ಕೇಳಿದಾಗ, "ನೀವು (ವರದಿಗಾರರು) ಮಾಹಿತಿ ಪಡೆಯುವಂತೆಯೇ ನಮಗೂ ಕೆಲವು ಮಾಹಿತಿಗಳು ಸಿಗುತ್ತವೆ" ಎಂದು ಶಿವಕುಮಾರ್ ಹೇಳಿದರು.

ರಾಹುಲ್ ಗಾಂಧಿ ಅವರ ರಾಜ್ಯ ಪ್ರವಾಸದ ವಿವರಗಳನ್ನು ಹಂಚಿಕೊಂಡ ಶಿವಕುಮಾರ್ ಅವರು, ಮಾರ್ಚ್ 31 ರಂದು ಕರ್ನಾಟಕಕ್ಕೆ ಬರುತ್ತಿದ್ದು, ತುಮಕೂರು ಜಿಲ್ಲೆಯ ಪ್ರಮುಖ ಲಿಂಗಾಯತ ಮಠವಾದ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಶಿವಕುಮಾರ ಸ್ವಾಮೀಜಿಗಳ 115ನೇ ಜನ್ಮ ವಾರ್ಷಿಕೋತ್ಸವದಂದು ಅವರ ಗದ್ದುಗೆಗೆ ನಮನ ಸಲ್ಲಿಸಲಿದ್ದಾರೆ ಎಂದರು.

ಅಂದು ಮಧ್ಯಾಹ್ನ 2 ಗಂಟೆಗೆ ಬೆಂಗಳೂರಿಗೆ ಆಗಮಿಸುವ ರಾಹುಲ್ ಗಾಂಧಿ, ನೇರವಾಗಿ ಮಠಕ್ಕೆ ಭೇಟಿ ನೀಡಿ ನಗರಕ್ಕೆ ವಾಪಸಾಗಲಿದ್ದಾರೆ. ಬಳಿಕ ಏಪ್ರಿಲ್ 1 ರಂದು ಬೆಳಗ್ಗೆ 11 ಗಂಟೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವ್ಯಾಪ್ತಿಯ ಕಾಂಗ್ರೆಸ್ ಕಚೇರಿಯಲ್ಲಿ ಪಕ್ಷದ ಮುಖಂಡರನ್ನು ಭೇಟಿ ಮಾಡಲಿದ್ದಾರೆ. ಅಲ್ಲದೆ ಶಾಸಕರು, ಪರಾಜಿತ ಅಭ್ಯರ್ಥಿಗಳು, ಮಾಜಿ ಸಂಸದರು ಮತ್ತು ಪದಾಧಿಕಾರಿಗಳನ್ನು ಒಳಗೊಂಡಂತೆ ರಾಜ್ಯ ಕಾಂಗ್ರೆಸ್‌ನ ವಿಸ್ತೃತ ಕಾರ್ಯಕಾರಿ ಸಮಿತಿಯನ್ನು ಭೇಟಿ ಮಾಡಲಿದ್ದಾರೆ ಎಂದು ಅವರು ಹೇಳಿದರು.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ

ಚಾ.ನಗರದಲ್ಲಿ ಭಾರೀ ಪ್ರತಿಭಟನೆ



ಚಾಮರಾಜನಗರ, ಮಾ.29(ಎಸ್‌ಎಸ್)- ಕೇಂದ್ರ ಸರ್ಕಾರದ ಕಾರ್ಮಿಕ ನೀತಿಗಳು ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ಸಿಐಟಿಯು, ಎಐಯುಟಿಯುಸಿ ಸೇರಿದಂತೆ ವಿವಿಧ ಕಾರ್ಮಿಕ ಸಂಘಟನೆಗಳು ಹಾಗೂ ಒಕ್ಕೂಟಗಳು ಕರೆ ನೀಡಿರುವ ರಾಷ್ಟ್ರವ್ಯಾಪಿ ಮುಷ್ಕರದ 2ನೇ ದಿನವಾದ ಮಂಗಳವಾರ ನಗರದಲ್ಲಿ ವಿವಿಧ ಸಂಘಟನೆಗಳು ಭಾರೀ ಪ್ರತಿಭಟನೆ ನಡೆಸಿದವು.

ಮುಷ್ಕರಕ್ಕೆ ಬೆಂಬಲ ಸೂಚಿಸಿ ನಗರದಲ್ಲಿ ಅಂಗನವಾಡಿ ನೌಕರರು, ಆಶಾ ಕಾರ್ಯಕರ್ತೆಯರು ಹಾಗೂ ಗ್ರಾಪಂ ನೌಕರರು ಶ್ರೀಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಸಮಾವೇಶಗೊಂಡು, ಅಲ್ಲಿಂದ ಮೆರವಣಿಗೆಯೊಂದಿಗೆ ಭುವನೇಶ್ವರಿ ವೃತ್ತ, ಬಿ.ರಾಚಯ್ಯ ಜೋಡಿರಸ್ತೆಯ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಕೆಲಕಾಲ ಪ್ರತಿಭಟಿಸಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

ಕೇಂದ್ರ ಸರ್ಕಾರ ಕಡಿತ ಮಾಡಿರುವ ಶೇ.40 ಅನುದಾನ ಕೊಡಬೇಕು. 45 ಮತ್ತು 46ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಯೋಜನೆಗಳಲ್ಲಿ ದುಡಿಯುವವರನ್ನು ನೌಕರರೆಂದು ಎಂದು ಪರಿಗಣಿಸಬೇಕು. ಶಾಸನಬದ್ಧ ಸವಲತ್ತು ನೀಡಬೇಕು. ಆಹಾರ ಭದ್ರತೆಗೆ ಕಡಿತವಾಗಿರುವ 65 ಸಾವಿರ ಕೋಟಿ ಅನುದಾನ ವಾಪಸ್ಸು ಕೊಡಬೇಕು. ಈಗಿರುವ ಸಂಪೂರ್ಣ ಅನುದಾನ ಬಳಸಬೇಕು. 24 ಸಾವಿರ ಕನಿಷ್ಠ ವೇತನದ ಜಾರಿ ಮಾಡಬೇಕು. ಐಸಿಡಿಎಸ್ ಯೋಜನೆಗಳನ್ನು ಖಾಯಂಗೊಳಿಸಬೇಕು ಎಂದು ಪ್ರತಿಭಟನಾನಿರತರು ಆಗ್ರಹಿಸಿದರು. ಐಸಿಡಿಎಸ್ ಯೋಜನೆಯನ್ನು ಖಾಸಗೀಕರಣ ಮಾಡಬಾರದು. ಎಲ್ಲಾ ಯೋಜನಾ ನೌಕರರಿಗೂ ನಿವೃತ್ತಿ ಸೌಲಭ್ಯ ಕೊಡಬೇಕು. ಕಾರ್ಮಿಕ ಸಂಹಿತೆಗಳನ್ನು ರದ್ದುಗೊಳಿಸಬೇಕು. ಎನ್‌ಎಂಪಿಯನ್ನು ರದ್ದು ಮಾಡಬೇಕು. ಆದಾಯ ತೆರಿಗೆ ಪಾವತಿಸದ ಕುಟುಂಬಗಳಿಗೆ ತಿಂಗಳಿಗೆ 7,500 ರೂ. ಆಹಾರ ಹಾಗೂ ಆದಾಯ ಬೆಂಬಲ ನೀಡಬೇಕು. ಗುತ್ತಿಗೆ, ಹೊರಗುತ್ತಿಗೆ ಸೇರಿದಂತೆ ಎಲ್ಲಾ ಅನೌಪಚಾರಿಕ ವಲಯದ ಕಾರ್ಮಿಕರಿಗೆ ಜೀವನ ಯೋಗ್ಯ ವೇತನ ಮತ್ತು ಸಾಮಾಜಿಕ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು.

ಕೊರೊನಾ ನಡುವೆ ಜನರಿಗೆ ಸೇವೆ ಸಲ್ಲಿಸುತ್ತಿರುವ ಮುಂಚೂಣಿ ಕಾರ್ಮಿಕರಿಗೆ ಸೂಕ್ತ ರಕ್ಷಣೆ ಹಾಗೂ ವಿಮಾ ಸೌಲಭ್ಯ ಒದಗಿಸಬೇಕು. ಬೆಲೆ ಏರಿಕೆಯನ್ನು ನಿಗ್ರಹಿಸಲು ದೃಢವಾದ ಪರಿಹಾರ ಕ್ರಮಗಳನ್ನು ಘೋಷಿಸಬೇಕು ಎಂದು ಪ್ರತಿಭಟನಾನಿರತರು ಒತ್ತಾಯಿಸಿದರು.

ಬಳಿಕ ಪ್ರತಿಭಟನಾನಿರತರು ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಅವರಿಗೆ ಮನವಿ ಸಲ್ಲಿಸಿದರು. ರಾಜ್ಯ ಅಂಗನವಾಡಿ ನೌಕರರ ಸಂಘದ ಜಿಲ್ಲಾ ಸಮಿತಿ ಅಧ್ಯಕ್ಷೆ ಕೆ.ಸುಜಾತಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎ.ನಾಗಮಣಿ, ಖಜಾಂಚಿ ಜೆ.ಭಾಗ್ಯಾ, ರೇಮ್ಮ ಶಾಯಿದಾ, ಯಶೋದಾ, ವಿಮಲಾ, ಪಾರ್ವತಮ್ಮ, ಪುಟ್ಟಬಸಮ್ಮ, ಪುಷ್ಪಾ, ಗೌರಿ, ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾಧ್ಯಕ್ಷೆ ಕವಿತಾ, ತಾಲೂಕು ಅಧ್ಯಕ್ಷೆ ರಾಣಿ, ಗೀತಾ, ಲಕ್ಷ್ಮಿ, ಬಿಸಿಯೂಟದ ಸುಂದ್ರಮ್ಮ, ನಾಗಮ್ಮ, ಶಿವಮ್ಮ, ರತ್ನಮ್ಮ, ಗ್ರಾಪಂ ನೌಕರರಾದ ಕೊತ್ತಲವಾಡಿ ಮಹದೇವಸ್ವಾಮಿ, ಸಿದ್ದರಾಜು, ದೊರೆ, ಕಿಟ್ಟಿ ಇತರರಿದ್ದರು.

ಮುಷ್ಕರ ಬೆಂಬಲಿಸಿ ಅಂಚೆ ನೌಕರರ ಧರಣಿ

ಚಾಮರಾಜನಗರ, ಮಾ.29- ಅಂಚೆ ಇಲಾಖೆ ನೌಕರರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಅಂಚೆ ನೌಕರರ ಸಂಘಗಳ ಜಂಟಿ ಕ್ರಿಯಾ ಸಮಿತಿಯಿಂದ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ಬೆಂಬಲಿಸಿ ನಗರದಲ್ಲಿ ಜಿಲ್ಲಾ ಅಂಚೆ ನೌಕರರು ಕರ್ತವ್ಯದಿಂದ ಹೊರಗುಳಿದು ಧರಣಿ ನಡೆಸಿದರು.

ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ಮುಖ್ಯ ಅಂಚೆಯ ಬಳಿಯಲ್ಲಿ ಜೆಸಿಎ ಛೇರ್ಮನ್ ಪ್ರಭುಸ್ವಾಮಿ ಅವರ ನೇತೃತ್ವದಲ್ಲಿ ಧರಣಿ ಆರಂಭಿಸಿ, ಕೇಂದ್ರ ಸರ್ಕಾರ ವಿರುದ್ಧ ಘೋಷಣೆ ಕೂಗಿದರು.

ಈ ಸಂದರ್ಭದಲ್ಲಿ ಎಐಪಿಇಯು ಕಾರ್ಯದರ್ಶಿ ಆರ್.ಮಂಜುನಾಥ ಮಾತನಾಡಿ, ಹೊಸ ಪೆನ್ಷನ್ ರದ್ದುಪಡಿಸಿ ಹಳೆಯ ಪದ್ಧತಿ ಮುಂದುವರಿಸಬೇಕು. ಅಂಚೆ ಇಲಾಖೆ ಖಾಸಗೀಕರಣದ ಹುನ್ನಾರ ಕೈ ಬಿಡಬೇಕು. 18 ತಿಂಗಳಿನಿಂದ ಹಿಡಿದಿರುವ ತುಟ್ಟಿಭತ್ಯೆ ಬಾಕಿ ಜಾರಿ ಮಾಡಬೇಕು. ಎಲ್‌ಎಸ್‌ಜಿ, ಹೆಚ್‌ಎಸ್‌ಜಿ ಹುದ್ದೆಗಳನ್ನು ಭರ್ತಿ ಮಾಡಬೇಕು. ಕೋವಿಡ್‌ನಿಂದ ಮೃತಪಟ್ಟ ಕುಟುಂಬಗಳಿಗೆ 10 ಲಕ್ಷ ರೂ. ಪರಿಹಾರ ಘೋಷಿಸಬೇಕು ಎಂದು ಒತ್ತಾಯಿಸಿದರಲ್ಲದೆ, ಒಟ್ಟಾರೆ ತಮ್ಮ 16 ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಧರಣಿಯಲ್ಲಿ ಎನ್‌ಯುಪಿಇ ಮಹದೇವಸ್ವಾಮಿ, ಎಂಟಿಎಸ್ ಮಹೇಂದ್ರ, ಜಿಡಿಎಸ್ ಮಹೇಶ್, ಎಐಪಿಇಯು ಅಧ್ಯಕ್ಷ ರಾಬರ್ಟ್, ಖಜಾಂಚಿ ರಂಗನಾಥ್, ಮಾದೇಶ್, ರಾಜರಾಂ, ಪ್ರೇಮ್‌ಕುಮಾರ್, ಶ್ರೀನಿವಾಸ, ಚನ್ನಬಸಪ್ಪ, ಸುನೀತಾ, ಅರವಿಂದಮ್ಮ, ಅನಿತಾ, ಪ್ರೀತಿ, ಕೀರ್ತಿನಾ, ಮರಿಸ್ವಾಮಿ, ಅಂಚೆ ಪಾಲಕರಾದ ನಾಗರಾಜ ರಾಜಶೇಖರ್, ಮೋಹನ್ ಕುಮಾರ್, ಚಂದ್ರಶೇಖರ್, ಪುಟ್ಟಸ್ವಾಮಿ ಇತರರಿದ್ದರು.

ಗಾಳಿ-ಮಳೆಗೆ ಬಾಳೆ ನಾಶ

ಚಾಮರಾಜನಗರ, ಮಾ.29(ಎಸ್‌ಎಸ್)-ತಾಲೂಕಿನ ಲಿಂಗನಪುರ, ಅರಕಲವಾಡಿ, ವಡ್ಡಗಲಪುರ ಹಾಗೂ ವಡ್ಡಗಲಪುರ ಹುಂಡಿ ಗ್ರಾಮಗಳಲ್ಲಿ ಸೋಮವಾರ ಸಯಂಕಾಲ ಸುರಿದ ಬಿರುಗಾಳಿ ಸಹಿತ ಮಳೆಯಾಗಿದ್ದು, ಬಾಳೆ, ತೆಂಗು ಫಸಲು, ಮನೆಗಳು ಹಾನಿಗೀಡಾಗಿದ್ದು, ವಿದ್ಯುತ್‌ಕಂಬಗಳು ಧರೆಗುರುಳಿವೆ. ಸಾಯಂಕಾಲ 4 ಗಂಟೆ ಸುಮಾರಿಗೆ ಅರ್ಧಗಂಟೆಗೂ ಹೆಚ್ಚು ಕಾಲ ಬಿರುಗಾಳಿ ಸಹಿತ ಮಳೆಯಾಗಿದೆ. ಇದರಿಂದ ಲಿಂಗನಪುರ ಗ್ರಾಮದ ಮಲ್ಲು, ಚೆನ್ನಪ್ಪ, ಪ್ರಸಾದ್ ಅವರ ಜಮೀನಿನಲ್ಲಿ ಬೆಳೆದಿದ್ದ ಬಾಳೆ ಸಂಪೂರ್ಣ ನಾಶವಾಗಿದೆ. ಸ್ವಾಮಿ ಅವರ ಮನೆಯ ಮೇಲ್ಛಾವಣಿ ಹಾರಿ ಹೋಗಿದೆ. ಮಂಜು ಅವರಿಗೆ ಸೇರಿದ ತೆಂಗಿನ ಮರಗಳು ನೆಲಕ್ಕುರುಳಿವೆ. ಇದಲ್ಲದೆ ಎರಡು ವಿದ್ಯುತ್ ಕಂಬಗಳು ಮುರಿದು ಬಿದ್ದಿದೆ. ಗಾಳಿ-ಮಳೆಯಿಂದ ಆದ ಹಾನಿಗೆ ಸೂಕ್ತ ಪರಿಹಾರ ಕಲ್ಪಿಸುವಂತೆ ಸಂತ್ರಸ್ತರು ಒತ್ತಾಯಿಸಿದ್ದಾರೆ.



ಸಚಿವ ವಿ.ಸೋಮಣ್ಣ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಸಭೆ

ಮೂಲ ಸೌಕರ್ಯ ಕಾಮಗಾರಿಗಳ ನಿರ್ವಹಣೆಗೆ ಸೂಚನೆ



ಚಾಮರಾಜನಗರ, ಮಾ.29- ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ-4ರ ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಗದಿಪಡಿಸಿದ ಅನುದಾನದಲ್ಲಿ ಮೂಲ ಸೌಕರ್ಯ ಸಮರ್ಪಕವಾಗಿ ಒದಗಿಸುವಂತೆ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಸೂಚಿಸಿದರು.

ಬೆಂಗಳೂರಿನ ವಿಧಾನಸೌಧದಲ್ಲಿರುವ ಸಮಿತಿ ಸಭಾಂಗಣದಲ್ಲಿಂದು ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಹಂತ-4ರ ಯೋಜನೆಯಡಿ ಅನುದಾನ ಹಂಚಿಕೆಗೆ ಸಂಬಂಧಿಸಿದ ಕ್ರಿಯಾ ಯೋಜನೆ ಕುರಿತ ಜಿಲ್ಲಾ ಮಟ್ಟದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಗರೋತ್ಥಾನ ಯೋಜನೆಯಡಿ ರಸ್ತೆ, ಕುಡಿಯುವ ನೀರು, ಒಳಚರಂಡಿ, ವಿದ್ಯುತ್ ದೀಪ, ಸೇರಿದಂತೆ ಇತರೆ ಮೂಲ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ತಿಳಿಸಿದರು.

ಯೋಜನೆಯಡಿ ಗುಣಮಟ್ಟದ ಕೆಲಸ ನಿರ್ವಹಿಸಬೇಕು. ಯಾವುದೇ ಲೋಪವಾಗಬಾರದು. ಜನರ ಅಗತ್ಯಕ್ಕೆ ಅನುಗುಣವಾಗಿ ಯೋಜನೆಯಡಿ ಕಾಮಗಾರಿ ನಿರ್ವಹಿಸಿ ಪ್ರಯೋಜನ ತಲುಪುವಂತೆ ನೋಡಿಕೊಳ್ಳಬೇಕು ಎಂದು ಸಚಿವರು ಸೂಚಿಸಿದರು.

> **ನಗರೋತ್ಥಾನ ಅನುದಾನ ಹೊರತುಪಡಿಸಿ ಜಿಲ್ಲೆಗೆ ಕೊಳಗೇರಿ ಅಭಿವೃದ್ಧಿ ಮಂಡಳಿ ಅನುದಾನದಡಿ ಚಾಮರಾಜನಗರಕ್ಕೆ 2 ಕೋಟಿ ರೂ., ಕೊಳ್ಳೇಗಾಲಕ್ಕೆ 1.5 ಕೋಟಿ ರೂ., ಗುಂಡ್ಲುಪೇಟೆಗೆ 1.5 ಕೋಟಿ ರೂ., ಹನೂರಿಗೆ 1 ಕೋಟಿ ರೂ., ಯಳಂದೂರಿಗೆ 50 ಲಕ್ಷ ರೂ. ಸೇರಿದಂತೆ ಒಟ್ಟು 6.5 ಕೋಟಿ ರೂ. ಗಳನ್ನು ಒದಗಿಸಲಾಗುತ್ತಿದೆ. ಈ ವಿಶೇಷ ಅನುದಾನವನ್ನು ಸಹ ಬಳಕೆ ಮಾಡಿಕೊಂಡು ಅಭಿವೃದ್ಧಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಬೇಕು.**
>
> -ವಿ. ಸೋಮಣ್ಣ, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವ.

ಚಾಮರಾಜನಗರ, ಕೊಳ್ಳೇಗಾಲ ನಗರಸಭೆ ಗುಂಡ್ಲುಪೇಟೆ ಪುರಸಭೆ, ಹನೂರು, ಯಳಂದೂರಿನ ಪಪಂಗೆ ನಗ ರೋತ್ಥಾನದಡಿ ಕಾಮಗಾರಿ ನಿರ್ವಹಿಸಲು ಅನುದಾನ ಹಂಚಿಕೆ ಸಂಬಂಧ ವಿವರವಾಗಿ ಸಮಾಲೋಚಿಸಿದ ಸಚಿವರು, ಈಗಾಗಲೇ ಕೈಗೆತ್ತಿಕೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು ಚುರುಕುಗೊಳಿಸಬೇಕು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಕಾಮಗಾರಿಗಳನ್ನು 4 ರಿಂದ 5 ತಿಂಗಳೊಳಗೆ ಪೂರ್ಣಗೊಳಿಸಬೇಕು. ಆಯಾ ಭಾಗದ ಸ್ಥಳೀಯ ಜನಪ್ರತಿನಿಧಿಗಳು ಶಾಸಕರ ಗಮನಕ್ಕೆ ತಂದು ನಿಗದಿತ ಅವಧಿಯೊಳಗೆ ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನ ಮಾಡಬೇಕೆಂದು ಸಚಿವರು ತಾಕೀತು ಮಾಡಿದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ, ಆರ್.ನರೇಂದ್ರ ಎನ್.ಮಹೇಶ್, ಸಿ.ಎಸ್.ನಿರಂಜನ್ ಕುಮಾರ್, ಚಾಮರಾಜನಗರ ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ, ಕೊಳ್ಳೇಗಾಲ ನಗರಸಭೆ ಅಧ್ಯಕ್ಷೆ ಸುಶೀಲ, ಗುಂಡ್ಲುಪೇಟೆ ಪುರಸಭೆ ಅಧ್ಯಕ್ಷ ಆರ್.ಗಿರೀಶ್, ಯಳಂದೂರು ಪಪಂ ಅಧ್ಯಕ್ಷೆ ಆರ್. ಪ್ರಭಾವತಿ, ಹನೂರು ಪಪಂ ಅಧ್ಯಕ್ಷೆ ಚಂದ್ರಮ್ಮ, ಪ್ರಭಾರ ಜಿಲ್ಲಾಧಿಕಾರಿ ಕೆ.ಎಂ.ಗಾಯತ್ರಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರು ಹಾಗೂ ಕಾರ್ಯಪಾಲಕ ಇಂಜಿನಿಯರ್ ಟಿ.ಕೆ.ವರದರಾಜು, ನಗರಸಭೆ ಆಯುಕ್ತ ಕರಿಬಸವಯ್ಯ, ಎಸ್.ನಂಜುಂಡಸ್ವಾಮಿ, ಪುರಸಭೆ ಮುಖ್ಯಾಧಿಕಾರಿ ಆರ್.ಹೇಮಂತರಾಜು, ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಮಲ್ಲೇಶ್, ಪರಶಿವಯ್ಯ, ಜಿಲ್ಲಾ ನಗರಾಭಿವೃದ್ಧಿ ಕೋಶದ ವ್ಯವಸ್ಥಾಪಕ ವೈ.ಗಿರಿರಾಜ್, ಇತರರು ಸಭೆಯಲ್ಲಿದ್ದರು.

ಗುಂಡ್ಲುಪೇಟೆ ಎಪಿಎಂಸಿ 12 ಕ್ಷೇತ್ರಗಳಿಗೆ ನಾಮಪತ್ರ ಸಲ್ಲಿಕೆ



ಗುಂಡ್ಲುಪೇಟೆ, ಮಾ.29(ಸೋಮ್.ಜಿ)-ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಡಳಿತ ಮಂಡಳಿಯ ಚುನಾವಣೆ ಹಿನ್ನೆಲೆಯಲ್ಲಿ ನಾಮಪತ್ರ ಸಲ್ಲಿಸಲು ಅಂತಿಮ ದಿನವಾದ ಸೋಮವಾರ ಬಿಜೆಪಿ ಹಾಗೂ ಕಾಂಗ್ರೆಸ್‌ನ ಅಭ್ಯರ್ಥಿಗಳು ಉಮೇದುವಾರಿಕೆ ಸಲ್ಲಿಸಿದರು. 12 ಕ್ಷೇತ್ರಗಳಿಗೆ ಬಿಜೆಪಿ ಹಾಗೂ ಕಾಂಗ್ರೆಸ್ ಅಭ್ಯರ್ಥಿಗಳು ತಮ್ಮ ನಾಯಕರೊಂದಿಗೆ ತಾಲೂಕು ಕಚೇರಿಗೆ ಆಗಮಿಸಿ ಚುನಾವಣಾಧಿಕಾರಿಯಾದ ತಹಸೀಲ್ದಾರ್ ಸಿ.ಜೆರವಿಶಂಕರ್ ಅವರಿಗೆ ನಾಮಪತ್ರ ಸಲ್ಲಿಸಿದರು.

ಹೊರೆಯಾಲ ಸಾಮಾನ್ಯ ಕ್ಷೇತ್ರದಿಂದ ಕೆ.ಆರ್.ಲೋಕೇಶ್ (ಬಿಜೆಪಿ), ಆರ್.ಸಿ.ನಾಗರಾಜು(ಕಾಂಗ್ರೆಸ್). ಸೋಮಹಳ್ಳಿ-ಕೆ.ಎಸ್.ಶಿವಪ್ರಕಾಶ್(ಬಿಜೆಪಿ), ಶಿವನಾಗಪ್ಪ(ಕಾಂಗ್ರೆಸ್). ಕಬ್ಬಹಳ್ಳಿ ಮಹಿಳಾ ಕ್ಷೇತ್ರ-ಭಾಗ್ಯ(ಬಿಜೆಪಿ), ಗಾಯತ್ರಿ(ಕಾಂಗ್ರೆಸ್). ಬೇಗೂರು ಕ್ಷೇತ್ರ-ಹೆಚ್.ಆರ್.ಮಹದೇವಪ್ರಸಾದ್(ಬಿಜೆಪಿ), ವಿರೂಪಾಕ್ಷ (ಕಾಂಗ್ರೆಸ್). ಬರಗಿ ಕ್ಷೇತ್ರ-ಮಾಡ್ರಹಳ್ಳಿ ನಾಗೇಂದ್ರ(ಬಿಜೆಪಿ), ನಾಗರಾಜು(ಕಾಂಗ್ರೆಸ್). ಕಣ್ಣೇಗಾಲ ಕ್ಷೇತ್ರ-ಅರಸಶೆಟ್ಟಿ(ಬಿಜೆಪಿ), ಮಾದಶೆಟ್ಟಿ(ಕಾಂಗ್ರೆಸ್). ವಿಜಯಪುರ ಕ್ಷೇತ್ರ-ಸೋಮಪ್ಪ (ಬಿಜೆಪಿ), ಬಸವರಾಜಪ್ಪ(ಕಾಂಗ್ರೆಸ್). ತೆರಕಣಾಂಬಿ ಕ್ಷೇತ್ರ-ಮಹೇಶ್ (ಬಿಜೆಪಿ), ಪಿ.ಮಹದೇವಪ್ಪ(ಕಾಂಗ್ರೆಸ್). ಕುಂದಕೆರೆ ಕ್ಷೇತ್ರ-ವೆಂಕಟನಾಯ್ಕ (ಬಿಜೆಪಿ), ಜೋಗನಾಯ್ಕ(ಕಾಂಗ್ರೆಸ್). ಬೊಮ್ಮಲಾಪುರ ಕ್ಷೇತ್ರ-ನಾಗರತ್ನ(ಬಿಜೆಪಿ), ಮಹದೇವಮ್ಮ (ಕಾಂಗ್ರೆಸ್). ಹಂಗಳ ಕ್ಷೇತ್ರ-ಹೂವಯ್ಯ(ಬಿಜೆಪಿ), ರಾಜು (ಕಾಂಗ್ರೆಸ್). ವರ್ತಕರ ಕ್ಷೇತ್ರ-ಮಾಡ್ರಹಳ್ಳಿ ಮಹದೇವಪ್ಪ (ಬಿಜೆಪಿ), ಮಂಜುನಾಥ(ಕಾಂಗ್ರೆಸ್) ಅವರು ನಾಮಪತ್ರ ಸಲ್ಲಿಸಿದರು.

ಶಾಸಕರ ಸಾಥ್: ಬಿಜೆಪಿ ಅಭ್ಯರ್ಥಿ ಕೆ.ಆರ್.ಲೋಕೇಶ್ ನಾಮಪತ್ರ ಸಲ್ಲಿಸುವ ವೇಳೆ ಅವರಿಗೆ ಶಾಸಕ ಸಿ.ಎಸ್.ನಿರಂಜನ ಕುಮಾರ್, ಮಂಡಲಾಧ್ಯಕ್ಷ ಜಗದೀಶ್, ಮುಖಂಡರಾದ ಬೇಗೂರು ನಾರಾಯಣಸ್ವಾಮಿ, ಶಿವಬಸಪ್ಪ, ರಾಜೇಶ್, ಬಸವರಾಜು, ಗುರು ಇತರರು ಸಾಥ್ ನೀಡಿದರು.

'ಪರೀಕ್ಷಾ ಪೇ ಚರ್ಚಾ'ಗೆ ಜಿಲ್ಲೆಯ ಶ್ರೇಯಾ ಆಯ್ಕೆ

ಚಾಮರಾಜನಗರ, ಮಾ.29- ವಿದ್ಯಾರ್ಥಿಗಳು ಪರೀಕ್ಷೆಯನ್ನು ಅತಂಕವಿಲ್ಲದೆ, ಧೈರ್ಯದಿಂದ ಎದುರಿಸುವ ಸಲುವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಏ.1ರಂದು ನಡೆಸಿಕೊಡಲಿರುವ 'ಪರೀಕ್ಷಾ ಪೇ ಚರ್ಚಾ ಪ್ರಧಾನ ಮಂತ್ರಿಗಳೊಂದಿಗೆ ವಿದ್ಯಾರ್ಥಿಗಳ ಸಂವಾದ' ಕಾರ್ಯಕ್ರಮಕ್ಕೆ ಜಿಲ್ಲೆಯ ಕೇಂದ್ರೀಯ ವಿದ್ಯಾಲಯದ ವಿದ್ಯಾರ್ಥಿನಿ ಶ್ರೇಯಾ ಆಯ್ಕೆಯಾಗಿದ್ದು, ಹೆಚ್ಚುವರಿ ಜಿಲ್ಲಾಧಿಕಾರಿ ಎಸ್.ಕಾತ್ಯಾಯಿನಿದೇವಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಈ ವಿಷಯ ತಿಳಿಸಿದರು.

ಪ್ರಸ್ತುತ ಪರೀಕ್ಷಾ ಪೇ ಚರ್ಚಾ ಸಂವಾದವು 5ನೇ ಸಂವಾದವಾಗಿದೆ. ಏ.1 ರಂದು ಬೆಳಗ್ಗೆ 11 ಗಂಟೆಗೆ ನವದೆಹಲಿಯ ತಾಳ್ಕಟೋರಾ ಕ್ರೀಡಾಂಗಣದಲ್ಲಿ ಸಂವಾದ ಕಾರ್ಯಕ್ರಮ ನಡೆಯಲಿದೆ. ಸಂವಾದಕ್ಕೆ ದೇಶಾದ್ಯಂತ 15.7 ಲಕ್ಷ ವಿದ್ಯಾರ್ಥಿಗಳು ತಮ್ಮ ಹೆಸರು ನೋಂದಾಯಿಸಿಕೊಂಡಿದ್ದು, ಪರೀಕ್ಷಾ ಪೇ ಚರ್ಚಾ ಸಂವಾದ ಕಾರ್ಯಕ್ರಮವು ದೂರದರ್ಶನದಲ್ಲಿ ನೇರ ಪ್ರಸಾರವಾಗಲಿದೆ. ಅಲ್ಲದೆ ಆಕಾಶವಾಣಿ, ಯೂಟ್ಯೂಬ್, ಪಿಎಂಓ ಇಂಡಿಯಾ, ರಾಜ್ಯಸಭಾ ಟಿವಿ, ಸ್ವಯಂಪ್ರಭಾ ಟಿವಿ ಸೇರಿದಂತೆ ಇತರೆ ಮಾಧ್ಯಮಗಳಲ್ಲೂ ಪ್ರಸಾರವಾಗಲಿದೆ ಎಂದರು.

> **ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಮಾತನಾಡಲು ನನಗೆ ಅವಕಾಶ ದೊರೆತಿರುವುದನ್ನು ತಿಳಿದು ಬಹಳ ಖುಷಿ ಆಯಿತು. ಪರೀಕ್ಷೆ ಬಗ್ಗೆ ನನಗಿರುವ ಭಯದ ಬಗ್ಗೆ ಪ್ರಶ್ನೆ ಕೇಳಿ ಸಲಹೆ ಪಡೆದುಕೊಳ್ಳುತ್ತೇನೆ.**
>
> 
>
> - ಶ್ರೇಯಾ, ವಿದ್ಯಾರ್ಥಿನಿ.

ಶ್ರೇಯಾ ಚಾಮರಾಜನಗರ ಪಟ್ಟಣದ ರಾಮಸಮುದ್ರ ನಿವಾಸಿ ಪೊಲೀಸ್ ಇಲಾಖೆಯ ನಾಗರಾಜು, ಜಯಲಕ್ಷ್ಮಿ ದಂಪತಿ ಪುತ್ರಿಯಾಗಿದ್ದು, ಕೇಂದ್ರೀಯ ವಿದ್ಯಾಲಯದಲ್ಲಿ 9ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಸುಂದರ ಹಾಗೂ ಸೃಜನಾತ್ಮಕ ಬರವಣಿಗೆ(ಕ್ರಿಯೇಟಿವ್ ರೈಟಿಂಗ್) ಸ್ಪರ್ಧೆಯಲ್ಲಿ ಶ್ರೇಯಾ ಸಂವಾದ ಕಾರ್ಯಕ್ರಮಕ್ಕೆ ಜಿಲ್ಲೆಯಿಂದ ಆಯ್ಕೆಯಾಗಿದ್ದಾಳೆ. ಡಿಜಿಟಲ್ ಇಂಟರ್‌ಯಾಕ್ಷನ್ ಇನ್ ಕ್ಲಾಸ್ ರೂಂ ಸಂಬಂಧ ಸಂವಾದದಲ್ಲಿ ಶ್ರೇಯಾ ಪ್ರಧಾನಿ ಅವರೊಂದಿಗೆ ಮಾತನಾಡಲಿದ್ದಾಳೆ ಎಂದು ಎಡಿಸಿ ತಿಳಿಸಿದರು.

ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲೆ ನಿರ್ಮಲಾಕುಮಾರಿ ಮಾತನಾಡಿ, ಪರೀಕ್ಷಾ ಪೇ ಚರ್ಚಾ ಪ್ರಧಾನಮಂತ್ರಿ ಮೋದಿಯವರ ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಬಹಳ ಉಪಯೋಗವಾಗಲಿದೆ ಎಂದರು. ಹೊಂಡರಬಾಳು ನವೋದಯ ಶಾಲೆಯ ಹಿರಿಯ ಕುರಿಯನ್ ಥಾಮಸ್, ವೈ.ಕೆ. ಬೈಯುಪ್ಪುರ್ ಸುದ್ದಿಗೋಷ್ಠಿಯಲ್ಲಿದ್ದರು.

ಇತರೆ ಸುದ್ದಿಗಳು..

ದ್ವಿತೀಯ ಪಿಯುಸಿ ಉತ್ತರ ಪತ್ರಿಕೆ ಅಸಮರ್ಪಕ ಮೌಲ್ಯಮಾಪನ

2,777 ವಿದ್ಯಾರ್ಥಿಗಳಿಗೆ ತೊಂದರೆ; ತಪ್ಪು ಮಾಡಿದ ಶಿಕ್ಷಕರಿಗೆ 400 ರೂ. ದಂಡ!

ಬೆಂಗಳೂರು, ಮಾ.29- ದ್ವಿತೀಯ ಪಿಯುಸಿ ಉತ್ತರ ಪತ್ರಿಕೆಗಳ ಅಸಮರ್ಪಕ ಮೌಲ್ಯಮಾಪನದಿಂದ ಕಳೆದ 3 ವರ್ಷಗಳಲ್ಲಿ 2,777 ವಿದ್ಯಾರ್ಥಿಗಳಿಗೆ ತೊಂದರೆ ಆಗಿದ್ದು, ಮೌಲ್ಯಮಾಪನ ದೋಷಗಳನ್ನು ಸರಿಪಡಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ತಿಳಿಸಿದ್ದಾರೆ.



ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಎನ್. ರವಿಕುಮಾರ್ ಪ್ರಶ್ನೆಗೆ ಉತ್ತರಿಸಿದ ಸಚಿವರು, ಅಸಮರ್ಪಕ ಮೌಲ್ಯಮಾಪನದಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗಿದ್ದು ನಿಜ. ಇಲಾಖೆ ದಂಡ ವಸೂಲಿ ಮಾಡಿಲ್ಲ.ಇದು ಯಾಕೆ ಎಂಬುದು ಗೊತ್ತಿಲ್ಲ. ಈಗಿನದ್ದು ಪೈಪೋಟಿಯ ಕಾಲ. ಪಾಯಿಂಟ್‌ಗಳಲ್ಲಿ ಅಂಕಗಳನ್ನು ಅಳೆಯಲಾಗುತ್ತದೆ. ಹೀಗಿರುವಾಗ 6ಕ್ಕಿಂತ ಕಡಿಮೆ ಅಥವಾ 6ಕ್ಕಿಂತ ಹೆಚ್ಚು ಅಂಕಗಳ ವ್ಯತ್ಯಾಸದ ಬಗ್ಗೆಯೂ ಪರಿಶೀಲಿಸಬೇಕಾಗಿದೆ ಎಂದರು.

2019-20ನೇ ಸಾಲಿನಲ್ಲಿ ಪಿಯುಸಿ ಪರೀಕ್ಷೆಯ ಉತ್ತರಪತ್ರಿಕೆಗಳ ಅಸಮರ್ಪಕ ಮೌಲ್ಯಮಾಪನ ಮಾಡಿದ ನಾಲ್ವರು ಮೌಲ್ಯಮಾಪಕರಿಂದ ಕೇವಲ 400 ರೂ. ದಂಡ ವಸೂಲಿ ಮಾಡಲಾಗಿದೆ. 2020-21ನೇ ಸಾಲಿನಲ್ಲಿ ಕೋವಿಡ್-19 ಕಾರಣಕ್ಕೆ ವಾರ್ಷಿಕ ಪರೀಕ್ಷೆ ನಡೆದಿಲ್ಲ.

ಆದರೆ, ಸರ್ಕಾರಿ ಆದೇಶದ ಅನ್ವಯ ಫಲಿತಾಂಶ ಒಪ್ಪದಿರುವ ಅಭ್ಯರ್ಥಿಗಳಿಗೆ ಮಾತ್ರ ಪರೀಕ್ಷೆ ನಡೆಸಲಾಗಿದೆ. ಈ ಸಾಲಿನಲ್ಲಿಯೂ ಅಸಮರ್ಪಕ ಮೌಲ್ಯಮಾಪನ ಮಾಡಿದ ಮೌಲ್ಯಮಾಪಕರಿಂದ ಯಾವುದೇ ದಂಡ ವಸೂಲಿ ಮಾಡಿಲ್ಲ ಎಂದು ವಿವರಿಸಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಪಿಯುಸಿ ಪರೀಕ್ಷೆಯ ಅಸಮರ್ಪಕ ಮೌಲ್ಯಮಾಪನದಿಂದ ಒಟ್ಟು 2,777 ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಈ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳ ಸ್ಕ್ಯಾನ್ ಮಾಡಿರುವ ಪ್ರತಿ ನೀಡಿ ಮರು ಎಣಿಕೆ ಮತ್ತು ಮರುಮೌಲ್ಯಮಾಪನದ ಮೂಲಕ ಶೇ 6 ಅಥವಾ 6ಕ್ಕಿಂತ ಹೆಚ್ಚು ಅಂಕಗಳು ವ್ಯತ್ಯಾಸವಾಗಿದ್ದರೆ ಪಾವತಿಸಿದ ಹಣವನ್ನು ವಾಪಸ್ ನೀಡಲಾಗಿದೆ ಎಂದು ತಿಳಿಸಿದ್ದಾರೆ. ಅಸಮರ್ಪಕ ಮೌಲ್ಯಮಾಪನ ನಡೆಸುವವರ ವಿರುದ್ಧ ಯಾವ ರೀತಿ ಕ್ರಮಕೈಗೊಳ್ಳಬೇಕು ಎನ್ನುವ ಬಗ್ಗೆ ಪರಿಷತ್ ಸದಸ್ಯರ ಜತೆ ಚರ್ಚಿಸಲಾಗುವುದು. 2019ರಲ್ಲಿ 1008 ವಿದ್ಯಾರ್ಥಿಗಳ ಉತ್ತರಪತ್ರಿಕೆಗಳಲ್ಲಿ ಶೇ6ಕ್ಕಿಂತ ಹೆಚ್ಚು ಅಂಕಗಳು ವ್ಯತ್ಯಾಸವಾಗಿವೆ ಎಂದು ತಿಳಿಸಿದ್ದಾರೆ.

ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನ ಮುಜರಾಯಿ ವಶಕ್ಕೆ



ಉಮ್ಮತ್ತೂರು, ಮಾ.29(ನಾಗೇಶ್)- ಚಾಮರಾಜನಗರ ತಾಲೂಕಿನ ಉಮ್ಮತ್ತೂರು ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನವನ್ನು ಮುಜರಾಯಿ ಇಲಾಖೆಯ ಆದೇಶದಂತೆ ಕಂದಾಯ ಹಾಗೂ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಶುಕ್ರವಾರ ವಶಕ್ಕೆ ಪಡೆದುಕೊಳ್ಳಲಾಯಿತು.

ಉಮ್ಮತ್ತೂರು ಗ್ರಾಮದ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನವನ್ನು ಮಾ.10ರಂದು ಸರ್ಕಾರ ಮುಜರಾಯಿ ಇಲಾಖೆಗೆ ಸೇರ್ಪಡೆ ಮಾಡಿ, ಆದೇಶ ಹೊರಡಿಸಿತ್ತು. ಉಮ್ಮತ್ತೂರು ಗ್ರಾಮದ ಸರ್ವ ಜನಾಂಗದ ಮುಖಂಡರು ಇದನ್ನು ಸ್ವಾಗತಿಸಿದರಲ್ಲದೆ, ತಡ ಮಾಡದೇ ದೇವಸ್ಥಾನವನ್ನು ಮುಜರಾಯಿ ಇಲಾಖೆ ಅಧಿಕಾರಿಗಳು ವಶಕ್ಕೆ ಪಡೆದು ದೇವಸ್ಥಾನದ ಹೆಸರಿನಲ್ಲಿರುವ ಟ್ರಸ್ಟ್ ವಜಾಗೊಳಿಸುವಂತೆ ಒತ್ತಾಯಿಸಿದ್ದರು.

ಟ್ರಸ್ಟ್ ಅಧ್ಯಕ್ಷರಿಗೆ ನೋಟೀಸ್: ಜಿಲ್ಲಾ ಹಾಗೂ ತಾಲೂಕು ಆಡಳಿತ ಉಮ್ಮತ್ತೂರು ಉರುಕಾತೇಶ್ವರಿ ಅಮ್ಮನವ ದೇವಸ್ಥಾನಕ್ಕೆ ಆಡಳಿತಾಧಿಕಾರಿಯಾಗಿ ತಹಸೀಲ್ದಾರ್ ಗ್ರೇಡ್-2 ವೈ.ಎನ್. ನಂಜಯ್ಯ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಯಾಗಿ ರಂಗರಾಜು ಅವರನ್ನು ನೇಮಕ ಮಾಡಿದೆ. ಅದರಂತೆ ನಂಜಯ್ಯ, ದೇಗುಲ ಟ್ರಸ್ಟ್ ಅಧ್ಯಕ್ಷರು ಹಾಗೂ ಪದಾಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ದೇವಸ್ಥಾನಕ್ಕೆ ಸಂಬಂಧಪಟ್ಟ ಬೀಗದ ಕೈಗಳು ಹಾಗೂ ಲೆಕ್ಕಪತ್ರಗಳು, ದಾಖಲಾತಿಗಳನ್ನು ಮಾ.25ರಂದು ಹಸ್ತಾಂತರಿಸುವಂತೆ ತಿಳಿಸಿದ್ದರು. ಅಲ್ಲದೆ ಖುದ್ದು ಮನೆಗೆ ಹೋದರೂ ಸಹ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ನೋಟಿಸ್ ಪಡೆಯದ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು ಟ್ರಸ್ಟ್ ಅಧ್ಯಕ್ಷರ ಮನೆ ಬಾಗಿಲು, ದೇವಸ್ಥಾನ ಹಾಗೂ ದಾಸೋಹ ಭವನಕ್ಕೂ ಸಹ ನೋಟಿಸ್ ಅಂಟಿಸಿದ್ದರು.

ದೇವಸ್ಥಾನ, ದಾಸೋಹ ಭವನಕ್ಕೆ ಬೀಗ: ಟ್ರಸ್ಟ್ ಅಧ್ಯಕ್ಷರು ಆಡಳಿತಾಧಿಕಾರಿ ಹಾಗೂ ಕಾರ್ಯನಿರ್ವಾಹ ಅಧಿಕಾರಿಗಳ ನೋಟಿಸ್‌ಗೆ ಸ್ಪಂದಿಸದ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿ ನಂಜಯ್ಯ ಹಾಗೂ ಸಿಬ್ಬಂದಿ ಶುಕ್ರವಾರ ಬೆಳಗ್ಗೆ ಪೊಲೀಸ್ ಅಧಿಕಾರಿಗಳೊಂದಿಗೆ ದೇವಸ್ಥಾನಕ್ಕೆ ಆಗಮಿಸಿ, ಮುಜರಾಯಿ ಇಲಾಖೆಗೆ ಸೇರ್ಪಡೆಯಾಗಿರುವ ನಾಮಫಲಕವನ್ನು ದೇವಸ್ಥಾನ ಹಾಗೂ ದಾಸೋಹ ಭವನ ಮುಂದೆ ಅಳವಡಿಸಿದರು. ಅಲ್ಲದೆ ಮುಜರಾಯಿ ಇಲಾಖೆಯಿಂದ ಬೀಗ ಜಡಿದರು. ಸ್ಥಳದಲ್ಲಿದ್ದ ಗ್ರಾಮಸ್ಥರ ಸಮ್ಮುಖದಲ್ಲಿ ವರದಿ ತಯಾರಿಸಿ, ಸಹಿ ಪಡೆದರು.

ಪ್ರತಿ ತಿಂಗಳ ಮೊದಲ ಮಂಗಳವಾರ ಎಂದಿನಂತೆ ದೇವಸ್ಥಾನದ ಬೀಗ ತೆಗೆದು ಪೂಜೆ ಸಲ್ಲಿಸಲಾಗುತ್ತದೆ. ಏ.5ರ ಮಂಗಳವಾರದ ವರೆಗೆ ಟ್ರಸ್ಟ್ ಅಧ್ಯಕ್ಷರು ತಮ್ಮಲ್ಲಿರುವ ದೇವಸ್ಥಾನದ ಬೀಗ ಮತ್ತು ಲೆಕ್ಕಪತ್ರ ಒಪ್ಪಿಸಿದರೆ ಒಳಿತು. ಇಲ್ಲದಿದ್ದರೆ ಅಂದು ದೇವಸ್ಥಾನ ಮತ್ತು ದಾಸೋಹ ಭವನದ ಬೀಗ ಒಡೆದು ಸರ್ಕಾರದ ಆದೇಶದಂತೆ ಕಾರ್ಯ ನಿರ್ವಹಣೆ ಮಾಡಲಾಗುತ್ತದೆ. ಅಲ್ಲದೆ ಅವರ ವಿರುದ್ಧ ಶಿಸ್ತು ಕ್ರಮಕ್ಕೂ ಸಹ ಶಿಫಾರಸ್ಸು ಮಾಡಬೇಕಾಗುತ್ತದೆ ಎಂದು ಆಡಳಿತಾಧಿಕಾರಿ ವೈ.ಎನ್.ನಂಜಯ್ಯ ಎಚ್ಚರಿಕೆ ನೀಡಿದ್ದಾರೆ.

ಗ್ರಾಮದ ಮುಖಂಡರಾದ ಎಸ್.ಬಸವನಾಯಕ, ಎಸ್.ಪ್ರಭುಸ್ವಾಮಿ, ಪಿ.ರಾಜಶೇಖರಮೂರ್ತಿ, ಕೆಂಪಣ್ಣ, ರಾಮಯ್ಯ, ಬಿ.ಪುಟ್ಟಣ್ಣ, ಪುಟ್ಟಸ್ವಾಮಿ, ಶಿವಲಿಂಗ, ನಿಂಗಶೆಟ್ಟಿ, ರಾಜಶೆಟ್ಟಿ, ಶಿವರಾಜು ಸೇರಿದಂತೆ 30ಕ್ಕೂ ಹೆಚ್ಚು ಮಂದಿ ಸಹಿ ಮಾಡಿ, ಮುಜರಾಯಿ ಇಲಾಖೆಗೆ ದೇವಸ್ಥಾನ ಸೇರ್ಪಡೆ ಸಾಕ್ಷೀಕರಿಸಿದರು. ಗ್ರಾಮದಲ್ಲಿ ಮುನ್ನಚ್ಚರಿಕೆಯಾಗಿ 144 ಸೆಕ್ಷನ್ ಜಾರಿ ಮಾಡಲಾಗಿದೆ. ಸಂತೇಮರಹಳ್ಳಿಯ ಸರ್ಕಲ್ ಇನ್ಸ್‌ಪೆಕ್ಟರ್ ಮಹೇಶ್ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಕುದೇರು ಠಾಣೆ ಪಿಎಸ್‌ಐ ಹನುಮಂತ ಉಪ್ಪಾರ್, ರಾಜಸ್ವ ನಿರೀಕ್ಷ ಪರಮೇಶ್, ಗ್ರಾಮ ಲೆಕ್ಕಿಗರಾದ ದಿಲೀಪ್, ಉಲ್ಲಾಸ್, ಮುಜರಾಯಿ ಗುಮಾಸ್ತ ಮಹದೇವಸ್ವಾಮಿ, ನೌಕರರಾದ ಬಸವರಾಜು ಪುಟ್ಟಸ್ವಾಮಿ ಮೊದಲಾದವರಿದ್ದರು.

ಭಗವದ್ಗೀತೆ, ಟಿಪ್ಪು ಪಠ್ಯ, ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧ ವಿವಾದ

ಮುಖ್ಯಮಂತ್ರಿಗೆ ಪತ್ರ ಬರೆದ ಚಿಂತಕರು

ಬೆಂಗಳೂರು, ಮಾ.29- ಹಿಜಾಬ್ ವಿವಾದ ಕುರಿತು ಹೈಕೋರ್ಟ್ ತೀರ್ಪು ಹೊರಬಂದ ನಂತರ ಕರಾವಳಿ-ಮಲೆನಾಡು ಭಾಗಗಳಲ್ಲಿ ಹಿಂದೂ-ಮುಸ್ಲಿಂ ವ್ಯಾಪಾರ ವಿವಾದ, ಮುಸ್ಲಿಮರ ಅಂಗಡಿಗಳಿಗೆ ಹಿಂದೂಗಳು ಹೋಗಿ ಖರೀದಿಸಬಾರದು ಎಂಬ ವಿಷಯ, ಶಾಲಾ ಪಠ್ಯಪುಸ್ತಕದಲ್ಲಿ ಟಿಪ್ಪು, ಭಗವದ್ಗೀತೆ ಸೇರ್ಪಡೆ ವಿಷಯಗಳು ಸಾಕಷ್ಟು ವಿವಾದ-ಗದ್ದಲವೆಬ್ಬಿಸುತ್ತಿದೆ.

ಇದು ರಾಜ್ಯದಲ್ಲಿನ ಅನೇಕ ಚಿಂತಕರು, ಬುದ್ಧಿಜೀವಿಗಳನ್ನು ಪ್ರಶ್ನೆ ಮಾಡುವಂತೆ ಮಾಡಿದೆ. ರಾಜ್ಯದ ಹಿರಿಯ ಬುದ್ಧಿ ಜೀವಿಗಳು ಈ ಕುರಿತು ಸಿಎಂ ಬೊಮ್ಮಾಯಿಗೆ ಪತ್ರ ಬರೆದಿದ್ದು, ಭಗವದ್ಗೀತೆಯನ್ನು ಪಠ್ಯದಲ್ಲಿ ಕೈಬಿಡುವಂತೆ ಪತ್ರದಲ್ಲಿ ಒತ್ತಾಯಿಸಿದ್ದಾರೆ.


ಜಾತ್ರೆಯಲ್ಲಿ ಮುಸ್ಲಿಂ ವ್ಯಾಪಾರಿಗಳಿಗೆ ನಿರ್ಬಂಧದ ಬಗ್ಗೆ ಕೆಲ ಹಿರಿಯ ಸಾಹಿತಿಗಳು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪೀಪಲ್ಸ್ ಯೂನಿಯನ್ಸ್‌ನ ವಕೀಲರಿಂದ ಇದನ್ನು ಪ್ರಶ್ನಿಸಿ ಕೋರ್ಟ್‌ಗೆ ಹೋಗುವ ಚಿಂತನೆ ನಡೆಸುತ್ತಿದ್ದಾರೆ. ಇನ್ನು ಭಗವದ್ಗೀತೆಯನ್ನು ಪಠ್ಯದಲ್ಲಿ ಅನ್ವಯ ಮಾಡುವ ಬಗ್ಗೆಯೂ ಪತ್ರದಲ್ಲಿ ಆಕ್ಷೇಪ ಮಾಡಲಾಗಿದ್ದು, ಮಕ್ಕಳಿಗೆ ಭಗವದ್ಗೀತೆಗಿಂತ ಬೇಕಾಗಿರೋದು ಸಂವಿಧಾನ. ಅದನ್ನು ಓದಿಸಿ ಎಂದು ಕೆಲವು ಸಾಹಿತಿ, ಚಿಂತಕರು ಸಿಎಂಗೆ ಪತ್ರದಲ್ಲಿ ಒತ್ತಾಯಿಸಿದ್ದಾರೆ.

ಹಿಜಾಬ್ ಧರಿಸಿ ಮಕ್ಕಳಿಗೆ ಪರೀಕ್ಷೆಗೆ ಅನುವು ಮಾಡಲು ಪತ್ರದಲ್ಲಿ ಒತ್ತಾಯ ಮಾಡಲಾಗಿದ್ದು, ಮುಸ್ಲಿಂ ವ್ಯಾಪಾರಿಗಳಿಗೆ ತೊಂದರೆ ಕೊಡದಂತೆ ಹೇಳುವ ಕಾನೂನು ತಿದ್ದುಪಡಿ ಮಾಡಿ ಎಂದು ಒತ್ತಾಯಿಸಿದ್ದಾರೆ. ಸಾಹಿತಿಗಳಾದ ಡಾ ಕೆ. ಮರುಳಸಿದ್ಧಪ್ಪ, ಎಸ್.ಜಿ.ಸಿದ್ದರಾಮಯ್ಯ, ಬೋಳುವಾರ್ ಮಹಮ್ಮದ್ ಕುಂಞ, ಬಂಜಗೆರೆ ಜಯಪ್ರಕಾಶ್, ರೆಹಮತ್ ತರೀಕೆರೆ ಸೇರಿದಂತೆ ಒಟ್ಟು 61 ಮಂದಿ ಪತ್ರಕ್ಕೆ ಸಹಿ ಹಾಕಿದ್ದಾರೆ.

'ವಿನಯ ಸಾಮರಸ್ಯ' ಅಭಿಯಾನ

ಗ್ರಾಮ ಪಂಚಾಯತ್ ಮಟ್ಟದಲ್ಲಿ ಅಸ್ಪೃಶ್ಯತೆ ಕಡಿವಾಣಕ್ಕೆ ಸರ್ಕಾರದ ವಿನೂತನ ಕ್ರಮ

ಬೆಂಗಳೂರು, ಮಾ.29- ಗ್ರಾಮ ಪಂಚಾಯತ್‌ಗಳಲ್ಲಿರುವ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ವಿನಯ ಸಾಮರಸ್ಯ ಅರಿವು ಕಾರ್ಯಕ್ರಮವನ್ನು ಕರ್ನಾಟಕ ಸರ್ಕಾರ ಜಾರಿಗೊಳಿಸಲಿದೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಅಭಿಯಾನಕ್ಕೆ ಚಾಲನೆ ನೀಡಲಿದ್ದು, ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಕಾರ್ಯಕ್ರಮಕ್ಕೆ ಬೆಂಬಲ ನೀಡಲಿದ್ದಾರೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದ್ದಾರೆ. ಅಸ್ಪೃಶ್ಯತೆ ಪದ್ಧತಿ ವಿರುದ್ಧ ಹೋರಾಡುವ ಗ್ರಾಮ ಪಂಚಾಯತ್‌ಗಳಿಗೆ ಸರ್ಕಾರ ಹೆಚ್ಚಿನ ಅನುದಾನ ನೀಡಲಿದೆ.

ಸದನದಲ್ಲಿ ಬಜೆಟ್ ಮೇಲಿನ ಕಲಾಪ ವೇಳೆ ಉತ್ತರಿಸಿದ ಕೋಟ ಶ್ರೀನಿವಾಸ ಪೂಜಾರಿಯವರು 2021 ಸೆಪ್ಟೆಂಬರ್‌ನ ಘಟನೆಯನ್ನು ಉಲ್ಲೇಖಿಸಿದರು. ಕುಷ್ಟಗಿ ತಾಲೂಕಿನ ಮಿಯಾಪುರ್ ಗ್ರಾಮದಲ್ಲಿ ದೇವಸ್ಥಾನವೊಂದರ ಆವರಣಕ್ಕೆ ಎರಡು ವರ್ಷದ ದಲಿತ ಜಾತಿಯ ಮಗು ವಿನಯ್ ಹೋಯಿತು ಎಂದು ಮಗುವಿನ ಕುಟುಂಬಸ್ಥರಿಗೆ ಹೊಡೆದಿದ್ದಲ್ಲದೆ 25 ಸಾವಿರ ರೂಪಾಯಿ ದಂಡ ವಿಧಿಸಲಾಗಿತ್ತು.

ಈ ಘಟನೆಗೆ ವ್ಯಾಪಕ ಖಂಡನೆ ವ್ಯಕ್ತವಾಗಿತ್ತು ಸಮಾಜದ ವಿವಿಧ ವರ್ಗದ ಜನರು ಆಕ್ಷೇಪ ವ್ಯಕ್ತಪಡಿಸಿದ್ದರು. ವಿನಯ್‌ನ ಸಂಪೂರ್ಣ ಶಿಕ್ಷಣ ವೆಚ್ಚವನ್ನು ಸರ್ಕಾರ ಭರಿಸುವುದಾಗಿ ಸಚಿವರು ಇದೇ ಸಂದರ್ಭದಲ್ಲಿ ಎಚ್ಚರಿಕೆ ನೀಡಿದರು. ಆ ಮಗು ದೊಡ್ಡವನಾದ ಮೇಲೆ ಯಾವುದೇ ಶಿಕ್ಷಣ ಕಲಿಯುವುದಿದ್ದರೂ ಸರ್ಕಾರವೇ ಭರಿಸಲು ಸಿದ್ಧವಿದೆ ಎಂದು ಕೋಟ ಶ್ರೀನಿವಾಸ ಪೂಜಾರಿ ಸದನದಲ್ಲಿ ಹೇಳಿದರು.

ಈ ಪದ್ಧತಿ ರಾಜ್ಯದ ಹಲವು ಕಡೆಗಳಲ್ಲಿದ್ದು ವಿನಯ್ ನ ಹೆಸರಿನಲ್ಲಿ ಇನ್ನು ಮುಂದೆ ರಾಜ್ಯ ಸರ್ಕಾರ ವಿನಯ ಸಾಮರಸ್ಯ ಕಾರ್ಯಕ್ರಮವನ್ನು ಆರಂಭಿಸಲಿದೆ. ಪಂಚಾಯತ್ ಮಟ್ಟದಲ್ಲಿ ಅರಿವು ಕಾರ್ಯಕ್ರಮ ಇದಾಗಿರುತ್ತದೆ. ಮುಖ್ಯಮಂತ್ರಿಗಳು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು ಪ್ರಧಾನಿ ಮೋದಿಯವರ ಸಂದೇಶವಿರುತ್ತದೆ ಎಂದರು.

ಏಪ್ರಿಲ್ 14ರಂದು ಅಂಬೇಡ್ಕರ್ ಜಯಂತಿಯಂದು ಕಾರ್ಯಕ್ರಮ ಉದ್ಘಾಟಿಸುವ ಪ್ರಸ್ತಾವನೆಯಿದ್ದು, ಪ್ರಧಾನ ಮಂತ್ರಿಗಳು ಇದನ್ನು ವರ್ಚುವಲ್ ಮೂಲಕ ಉದ್ಘಾಟಿಸಲು ಸಾಧ್ಯವೇ ಎಂದು ನಾವು ನೋಡುತ್ತಿದ್ದೇವೆ. ಆದರೂ ಅವರ ಸಂದೇಶವನ್ನು ಅತಿ ಹೆಚ್ಚು ಜನರಿಗೆ ತಲುಪಿಸುವುದು ಉದ್ದೇಶವಾಗಿದೆ ಎಂದು ಕೋಟ ಶ್ರೀನಿವಾಸ ಪೂಜಾರಿ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಹರ್ಷ ಕೊಲೆ ಪ್ರಕರಣ; NIA ತಂಡದಿಂದ ತನಿಖೆ ಆರಂಭ

ಬೆಂಗಳೂರು, ಮಾ.29- ರಾಜ್ಯದಲ್ಲಿ ಭಾರೀ ಕೋಲಾಹಲ ಸೃಷ್ಟಿಸಿದ್ದ ಬಜರಂಗದಳದ ಕಾರ್ಯಕರ್ತ ಹರ್ಷ ಕೊಲೆ ಪ್ರಕರಣವನ್ನು ಎನ್‌ಐಎ ತನಿಖೆಗೆ ನೀಡಲಾಗಿತ್ತು. ಇದೀಗ ಎನ್‌ಐಎ ತಂಡ ತನ್ನ ತನಿಖೆ ಆರಂಭಿಸಿದೆ.

ಫೆಬ್ರವರಿ 20 ರಂದು ಬಜರಂಗದಳ ಕಾರ್ಯಕರ್ತ ಹರ್ಷ ಕೊಲೆಯಾಗಿತ್ತು. ನಗರದ ಎನ್‌ಐಎ ಅಧಿಕಾರಿಗಳು ಶಿವಮೊಗ್ಗದಲ್ಲಿ ಬಜರಂಗದಳ ಕಾರ್ಯಕರ್ತ ಹರ್ಷ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕೃತವಾಗಿ ತಮ್ಮ ಕಚೇರಿಯಲ್ಲಿ ಕಾರ್ಯ ಆರಂಭಿಸಿದ್ದಾರೆ. ದೊಮ್ಮಲೂರಲ್ಲಿ ಎನ್‌ಐಎ ಪ್ರಾದೇಶಿಕ ಕಚೇರಿ ಕಾರ್ಯಾರಂಭವಾಗಿದೆ. ಇದಕ್ಕಾಗಿ ಓರ್ವ ಡಿಐಜಿ, ಒಬ್ಬರು ಎಸ್‌ಪಿ, ಇನ್ಸ್‌ಪೆಕ್ಟರ್, ಪಿಎಸ್‌ಐ, ಎಎಸ್‌ಐ, ಹೆಚ್‌ಸಿಸಿ, ಪಿಸಿ ಸೇರಿದಂತೆ 20 ಜನ ಸಿಬ್ಬಂದಿ ನೇಮಕ ಮಾಡಲಾಗಿದೆ. ಸದ್ಯ ದೆಹಲಿಯಲ್ಲಿ ದಾಖಲಾಗಿದ್ದ ಹರ್ಷ ಕೊಲೆ ಪ್ರಕರಣದ ಕೇಸ್ ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿದೆ.

ರಷ್ಯಾ-ಉಕ್ರೇನ್ ಸಮರ ಶೀಘ್ರ ಸಮಾಪ್ತಿ ಸಂಭವ

ಪುಟಿನ್-ಝುಲೆನ್ಸ್ಕಿ ಮಾತುಕತೆಗೆ ಸಿದ್ಧತೆ

ಇಸ್ತಾನ್‌ಬುಲ್, ಮಾ.29– ಸರಿ ಸುಮಾರು 33 ದಿನಗಳ ಬಳಿಕ ರಷ್ಯಾ ಹಾಗೂ ಉಕ್ರೇನ್ ನಡುವಿನ ಮಾತುಕತೆ, ಸಂಧಾನ ಸಫಲವಾಗುವ ಲಕ್ಷಣ ಕಂಡು ಬಂದಿದೆ.



ಟರ್ಕಿಯ ಇಸ್ತಾನ್‌ಬುಲ್‌ನಲ್ಲಿ ನಡೆದ ಚರ್ಚೆಯ ನಂತರ ಕೀವ್ ಮತ್ತು ಚೆರ್ನಿಹಿವ್ ಬಳಿ ಮಿಲಿಟರಿ ಚಟುವಟಿಕೆಯನ್ನು ಕಡಿಮೆ ಮಾಡುವುದಾಗಿ ಮಾಸ್ಕೋ ಹೇಳಿದೆ. ಆ ಮೂಲಕ ಮಂಗಳವಾರ ನಡೆದ ಸಂಧಾನ ಮಾತುಕತೆಯು ಯಶಸ್ವಿಯಾಗಿದೆ ಎಂದು ಹೇಳಲಾಗುತ್ತಿದೆ. ಇದರ ಜೊತೆಗೆ ಪುಟಿನ್- ಝುಲೆನ್ಸ್ಕಿ ಮಾತುಕತೆ ಇದೀಗ ಸಾಧ್ಯ ಎಂದ ಉಕ್ರೇನ್‌ನ ಪ್ರಮುಖ ಸಂಧಾನಕಾರರು ಸುಳಿವು ನೀಡಿದ್ದಾರೆ. ಉಕ್ರೇನ್‌ನ ಕೀವ್ ಮತ್ತು ಚೆರ್ನಿಹಿವ್ ಸುತ್ತಮುತ್ತಲಿನ ಮಿಲಿಟರಿ ಚಟುವಟಿಕೆಯನ್ನು ತೀವ್ರವಾಗಿ ಕಡಿತಗೊಳಿಸಲು ರಷ್ಯಾ ನಿರ್ಧರಿಸಿದೆ ಎಂದು ಇಸ್ತಾನ್‌ಬುಲ್‌ನಲ್ಲಿ ರಷ್ಯಾ ಮತ್ತು ಉಕ್ರೇನಿಯನ್ ನಿಯೋಗಗಳ ನಡುವಿನ ಮಾತುಕತೆಯ ನಂತರ ರಕ್ಷಣಾ ಸಚಿವರೊಬ್ಬರು ಹೇಳಿದ್ದಾರೆ.

ಉಭಯ ದೇಶಗಳ ಅಧ್ಯಕ್ಷರ ನಡುವಿನ ಸಭೆಯನ್ನು ಸಕ್ರಿಯಗೊಳಿಸಲು ರಷ್ಯಾದೊಂದಿಗಿನ ಸಂಘರ್ಷವನ್ನು ಪರಿಹರಿಸಲು ಟರ್ಕಿಯಲ್ಲಿ ಮಂಗಳವಾರ ನಡೆದ ಮಾತುಕತೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಎಂದು ಉಕ್ರೇನ್‌ನ ಉನ್ನತ ಸಮಾಲೋಚಕರು ಹೇಳಿದರು. "ಇಂದಿನ ಸಭೆಯ ಫಲಿತಾಂಶಗಳು ನಾಯಕರ ಮಟ್ಟದಲ್ಲಿ ಸಭೆಗೆ ಸಾಕಾಗುತ್ತದೆ" ಎಂದು ಉಕ್ರೇನಿಯನ್ ಸಮಾಲೋಚಕ ಡೇವಿಡ್ ಅರಾಖಮಿಯಾ ಹೇಳಿದರು, ವೊಲೊಡಿಮಿರ್ ಝುಲೆನ್ಸ್ಕಿ ಮತ್ತು ವ್ಲಾಡಿಮಿರ್ ಪುಟಿನ್ ನಡುವಿನ ಸಭೆಯ ಸಾಧ್ಯತೆಯನ್ನು ಹೆಚ್ಚಿಸಿದೆ ಎಂದರು.

ರಷ್ಯಾ ತನ್ನ ನೆರೆಹೊರೆಯ ಮೇಲೆ ಆಕ್ರಮಣ ಮಾಡಿದ ಒಂದು ತಿಂಗಳ ನಂತರ ಟರ್ಕಿ ರಾಜಧಾನಿ ಇಸ್ತಾನ್‌ಬುಲ್‌ನಲ್ಲಿ ಶಾಂತಿ ಮಾತುಕತೆಯಲ್ಲಿ ಉಕ್ರೇನಿಯನ್ ಪ್ರತಿನಿಧಿಗಳೊಂದಿಗೆ "ಅರ್ಥಪೂರ್ಣ" ಪ್ರಗತಿಯನ್ನು ರಷ್ಯಾದ ಸಮಾಲೋಚಕರು ಸ್ವಾಗತಿಸಿದರು. ಉಕ್ರೇನಿಯನ್ ಪ್ರದೇಶಗಳಲ್ಲಿನ ಮಾನವೀಯ ಪರಿಸ್ಥಿತಿ ಮತ್ತು ಇತರ ವಿಷಯಗಳ ನಡುವೆ ಉಕ್ರೇನ್ ತಟಸ್ಥ ರಾಜ್ಯವಾಗಬೇಕೆಂಬ ರಷ್ಯಾದ ಬೇಡಿಕೆಯ ಮೇಲೆ ಕೇಂದ್ರೀಕರಿಸುತ್ತವೆ. ಏತನ್ಮಧ್ಯೆ, ಉಕ್ರೇನ್ ಅಂತಾರಾಷ್ಟ್ರೀಯ ಒಪ್ಪಂದಕ್ಕೆ ಕರೆ ನೀಡಿತು, ಅದರ ಅಡಿಯಲ್ಲಿ ಇತರ ದೇಶಗಳು ತನ್ನ ಭದ್ರತೆಯನ್ನು ಖಾತರಿಪಡಿಸುತ್ತವೆ.

ಉಕ್ರೇನಿಯನ್ ಸಮಾಲೋಚಕ ಡೇವಿಡ್ ಅರಾಖಮಿಯಾ, NATOನ ಆರ್ಟಿಕಲ್ 5 ಅನ್ನು ಹೋಲುವಂತಿರಬೇಕು, ಇದು ಮೈತ್ರಿಕೂಟದ ಸದಸ್ಯರು ಪರಸ್ಪರ ರಕ್ಷಿಸಿಕೊಳ್ಳಲು ಬದ್ಧವಾಗಿದೆ ಎಂದರು. ಉಕ್ರೇನ್ ಮೇಲೆ ರಷ್ಯಾದ ಆಕ್ರಮಣದ ನಂತರ, ನ್ಯಾಟೋ ಸದಸ್ಯ ಲಿಥುವೇನಿಯಾ ಆರ್ಟಿಕಲ್ 4 ಅನ್ನು ಬಳಸುವುದಾಗಿ ಘೋಷಿಸಿ ದ್ದನ್ನು ಇಲ್ಲಿ ಸ್ಮರಿಸಬಹುದು. ಈ ದೇಶವು ಬೆಲಾರಸ್‌ನ ಗಡಿಯನ್ನು ಹೊಂದಿದೆ, ಅಲ್ಲಿ ರಷ್ಯಾದ ಪಡೆಗಳು ನೆಲೆಗೊಂಡಿವೆ. ಎಸ್ಟೋನಿಯಾ, ಲಾಟ್ವಿಯಾ, ಪೋಲೆಂಡ್, ಸ್ಲೋವಾಕಿಯಾ, ಹಂಗೇರಿ ಮತ್ತು ರೊಮೇನಿಯಾದಂತೆಯೇ, ಬಾಲ್ಟಿಕ್ ರಾಜ್ಯವು ನ್ಯಾಟೋದ "ಪೂರ್ವ ಪಾರ್ಶ್ವದ" ಭಾಗವಾಗಿದೆ. ಆದರೆ, ಬಹುತೇಕ ಎಲ್ಲಾ ದೇಶಗಳು ರಷ್ಯಾ ಪರ ನಿಲುವು ಹೊಂದಿವೆ.

ಒಂದನೇ ಪುಟದಿಂದ

ಸಮರ್ಥ ಆಡಳಿತಕ್ಕೆ ಸಾಕ್ಷಿ

ವ್ಯಕ್ತಿಯೊಬ್ಬ ತಪ್ಪಿಸಿಕೊಂಡಿರುವುದು ಗಮನಕ್ಕೆ ಬಂದಿದೆ. ಇದೆಲ್ಲದರ ಹಿನ್ನೆಲೆಯಲ್ಲಿ ಮುಂದಿನ ವರ್ಷಕ್ಕೆ ಆದಾಯ ಹೆಚ್ಚಳಕ್ಕೆ ಗಮನಹರಿಸಲಾಗುವುದು ಎಂದರು.

2021-22ನೇ ಸಾಲಿನಲ್ಲಿ ಮೊದಲ 5 ತಿಂಗಳಲ್ಲಿ 5 ಸಾವಿರ ಕೋಟಿ ರೂ. ಕಡಿಮೆ ಆದಾಯ ಸಂಗ್ರಹವಾಗಿತ್ತು, ಅಧಿಕಾರಿಗಳು ಬಜೆಟ್ ಗಾತ್ರ ತಗ್ಗಿಸುವಂತೆ ಸಲಹೆ ಮಾಡಿದ್ದರು, ಆದರೂ, 2022-23ರ ಬಜೆಟ್ ಗಾತ್ರ 2,65,720 ಕೋಟಿ ರೂ. ಆಗಿದ್ದು, ಕಳೆದ ವರ್ಷಕ್ಕಿಂತ ಶೇ.7.9ರಷ್ಟು ಹೆಚ್ಚಾಗಿದೆ. 14,129ಕೋಟಿ ರೂ. ಸಾಲ ಮರು ಪಾವತಿಗೆ ಮೀಸಲಿಡಲಾಗಿದೆ, ಒಟ್ಟಾರೆ ರಾಜಸ್ವ ಸ್ವೀಕೃತಿ ಶೇ.10.23ರಷ್ಟು ಹೆಚ್ಚಾಗಿದೆ ಎಂದರು. ಜಿಎಸ್‌ಟಿ ಪರಿಹಾರ ಜೂನ್‌ಗೆ ಅಂತ್ಯವಾಗಿರುವುದರಿಂದ ಅದನ್ನು ಬಜೆಟ್‌ನಲ್ಲಿ ಪರಿಗಣಿಸಲಾಗಿಲ್ಲ, ಒಟ್ಟು ಸಾಲದ ಹೊಣೆಗಾರಿಕೆ 5,18,366 ಕೋಟಿ ರೂ. ಆಗಿದೆ. 14 ಸಾವಿರ ಕೋಟಿ ರೂ.ನಷ್ಟು ರಾಜಸ್ವ ಕೊರತೆ ಅಂದಾಜು ಮಾಡಲಾಗಿದೆ, ಅದನ್ನು ಮತ್ತಷ್ಟು ಕಡಿತಗೊಳಿಸಲಾಗುವುದು. ಎಸ್‌ಟಿಎಸ್‌ಪಿಎಸ್‌ಇ ಯೋಜನೆಯಡಿ ಕಳೆದ ವರ್ಷಕ್ಕಿಂತ 2200 ಕೋಟಿ ರೂ. ಒದಗಿಸಲಾಗಿದೆ. ಅನವಶ್ಯಕ ವೆಚ್ಚ ತಗ್ಗಿಸಿ, ಆದಾಯ ಹೆಚ್ಚಿಸಿ, ಆರ್ಥಿಕ ಶಿಸ್ತು ತಂದು ಆಡಳಿತ ಸುಧಾರಣೆ ಮಾಡಲು ಬದ್ಧರಾಗಿದ್ದೇವೆ ಎಂದರು. ಕಳೆದ 2 ವರ್ಷಗಳಿಂದ ಕೋವಿಡ್‌ನಿಂದಾಗಿ ಆರ್ಥಿಕ ಬೆಳವಣಿಗೆ ಕುಂಠಿತವಾಗಿತ್ತು. 15 ಸಾವಿರ ಕೋಟಿ ರೂ.ನಷ್ಟು ಕೋವಿಡ್ ಮತ್ತಿತರ ವೆಚ್ಚ ಬಾಬ್ತುಗಳಿಗೆ ವೆಚ್ಚ ಮಾಡಲಾಗಿದೆ ಎಂದರು. ಅಮೃತ ನಗರೋತ್ಥಾನ ಯೋಜನೆಯಡಿ ಬೆಂಗಳೂರು ನಗರಕ್ಕೆ 6 ಸಾವಿರ ಕೋಟಿ ರೂ., ಇತರೆ ನಗರಗಳಿಗೆ 4 ಸಾವಿರ ಕೋಟಿ ರೂ. ಒದಗಿಸಲಾಗಿದೆ ಎಂದರು.

ಕೊಡವರಿಗೆ ಅವಕಾಶ

ಪೂರ್ವದಿಂದಲೂ ಜುಮ್ಮಾ ಹಿಡುವಳಿದಾರರು, ಅಂದಿನಿಂದ ಅವರು ಈ ವಿನಾಯಿತಿಯ ಲಾಭವನ್ನು ಪಡೆಯುತ್ತಿದ್ದಾರೆ. ಹೀಗಾಗಿ ಈಗಲೂ ಅವರಿಗೆ ಅನಿರ್ದಿಷ್ಟ ಅವಧಿಗೆ ವಿನಾಯಿತಿ ನೀಡಲಾಗಿದೆ. ಈ ವಿನಾಯಿತಿ ಕೆಲವು ನಿಯಮಗಳು ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ಅಧಿಸೂಚನೆಯ ಸಾಂವಿಧಾನಿಕ ಸಿಂಧುತ್ವವನ್ನು ಎತ್ತಿಹಿಡಿಯಲಾಗಿದೆ ಎಂದು ಈ ಹಿಂದೆ ಹೈಕೋರ್ಟ್ ಆದೇಶದಲ್ಲಿ ತಿಳಿಸಿತ್ತು. ಕೊಡಗಿನ ಜನರ ವಿಶಿಷ್ಟ ಸಂಸ್ಕೃತಿಯ ಭಾಗ ಕೋವಿ. ಯೋಧ ಪರಂಪರೆಯ ಜನಾಂಗ ಕೊಡವರಿಗೆ ಕೋವಿ ಬಳಸಲು ವಿಶೇಷ ವಿನಾಯಿತಿಯ ಅನುಮತಿಯಿದೆ. ಇಂಡಿಯನ್ ಆರ್ಮ್ಸ್ ಆಕ್ಟ್ ಸೆಕ್ಷನ್ ಮೂರರ ಪ್ರಕಾರ ಯಾರಿಗೂ ಇಲ್ಲದ ಅನುಮತಿ ಕೊಡವರಿಗೆ ಇದೆ. ಕೊಡಗಿನ ಜನರ ಹಬ್ಬ ಹರಿದಿನ. ಹುಟ್ಟು, ಸಾವು ಎಲ್ಲದರಲ್ಲಿಯೂ ಕೋವಿಯ ಮಹತ್ವವಿದೆ. ಬಂದೂಕು ಕೊಡವರಿಗೆ ಕೇವಲ ಒಂದು ಆಯುಧವಲ್ಲ, ಇದು ಇಲ್ಲಿನ ಜನರ ಧಾರ್ಮಿಕ ಸಂಕೇತ ಕೊಡವರಲ್ಲಿ ಕೋವಿಗೆ ಪೂಜ್ಯಭಾವನೆಯಿದೆ, ಪವಿತ್ರ ಸ್ಥಾನವಿದೆ.

ಕುಮಾರಸ್ವಾಮಿ ಕೆಂಡಾಮಂಡಲ

ನಿಷೇಧ ಹೇರಬೇಕು ಎನ್ನುವ ಸಂದೇಶದಲ್ಲಿ ಸುಮಾರು 23 ವಿಚಾರಗಳ ವಿಷಯಗಳ ಬಗ್ಗೆ ಪ್ರೋತ್ಸಾಹ ಕೊಡಬೇಡಿ ಅಂತ ಬರೆಯಲಾಗಿದೆ. ಹಣ್ಣಿನ ವ್ಯಾಪಾರ, ಹೋಟೆಲ್, ಹಾರ್ಡ್‌ವೇರ್, ಟ್ರಾವೆಲ್ ಬುಕಿಂಗ್, ಕಿರಾಣಿ ಅಂಗಡಿ, ಮುಸ್ಲಿಂ ವೈದ್ಯರ ಬಳಿ ಹೋಗಬೇಡಿ ಎಂದು ಜನರ ತಲೆ ಕೆಡಿಸುವ ಕೆಲಸ ಆಗುತ್ತಿದೆ ಎಂದು ಟೀಕಿಸಿದರು.

ಹಿಂದೂಗಳ ಅಂಗಡಿಗಳಿಗೆ ಮಾತ್ರ ಹೋಗಿ ಅಂತ ಸಂದೇಶ ಹರಡುತ್ತಿದ್ದಾರೆ. ಇವರು ನಮ್ಮ ದೇಶವನ್ನು ಎಲ್ಲಿಗೆ ಒಯ್ಯುತ್ತಿದ್ದಾರೆ. ಸರ್ವ ಜನಾಂಗದ ತೋಟವನ್ನು ಸರ್ವನಾಶ ಮಾಡುತ್ತಿದ್ದಾರೆ. ಇಂತಹವರನ್ನು ಸುಮ್ಮನೆ ಬಿಡಬಾರದು, ಹಿಂದೂಗಳ ಅಂಗಡಿಗಳಲ್ಲಿ ಮಾತ್ರ ವ್ಯಾಪಾರ ಮಾಡಿ ಎಂದರೆ ಅರ್ಥವೇನು. ಕರ್ನಾಟಕದಲ್ಲಿ ಈ ರೀತಿಯ ಪರಿಸ್ಥಿತಿ ಬರಲಿಕ್ಕೆ ಜೆಡಿಎಸ್ ಆಗಲಿ ಅಥವಾ ಕುಮಾರಸ್ವಾಮಿ ಕಾರಣ ಅಲ್ಲ, ಕಾಂಗ್ರೆಸ್ ನೇರ ಕಾರಣ, ಅವರಿಂದಲೇ ಇಂಥ ಸರಕಾರ ಬಂದಿತು ಎಂದು ನೇರ ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ನಾಯಕರ ತೀರ್ಮಾನಗಳು ಮತ್ತು ನಮಗೆ ಕಾಂಗ್ರೆಸ್‌ನವರು ಕೊಟ್ಟ ಕಿರುಕುಳ ಇಂಥ ಪರಿಸ್ಥಿತಿಗೆ ಕಾರಣವಾಗಿದೆ.

ಈ ಪರಿಸ್ಥಿತಿಗೆ ಒಂದು ಕಡೆ ಕಾಂಗ್ರೆಸ್, ಮತ್ತೊಂದು ಕಡೆ ಬಿಜೆಪಿ ಕಾರಣ, ಹಿಂದೂ ಸಮುದಾಯದವರಿಗೆ ಕೈಮುಗಿದು ಹೇಳುತ್ತೇನೆ, ರಾಜ್ಯ ಹಾಳು ಮಾಡಬೇಡಿ. ರಾಜಕೀಯಕ್ಕಾಗಿ ಮನಸುಗಳನ್ನು ಕೆಡಿಸುವ ಕಿಡಿಗೇಡಿಗಳ ಮಾತು ಕೇಳಬೇಡಿ, ಯಾರೂ ಇಲ್ಲಿ ಶಾಶ್ವತ ಅಲ್ಲ ಎಂದು ಮನವಿ ಮಾಡಿದರು. ಬಿಜೆಪಿಯವರು ರಾಜ್ಯವನ್ನು ಕೆಟ್ಟ ಪರಿಸ್ಥಿತಿಗೆ ತೆಗೆದುಕೊಂಡು ಹೋಗುತ್ತಿದ್ದಾರೆ. ಸರ್ಕಾರ ಎನ್ನುವುದು ಇದೆಯೇ, ಅದು ಏನು ಮಾಡುತ್ತಿದೆ, ಪ್ರಚೋದನೆ ಮಾಡುವವರು ಶಾಸಕರಾಗಿರಲಿ, ಸಚಿವರೇ ಆಗಿರಲಿ ಅರೆಸ್ಟ್ ಮಾಡಿ ಎಂದು ಅವರು ಆಗ್ರಹಿಸಿದರು. ರಾಜ್ಯದಲ್ಲಿ ಇಂಥ ಕೃತ್ಯಗಳು ನಡೆಯುತ್ತಿದ್ದರೆ ಸದನದಲ್ಲಿ ಸಭಾಧ್ಯಕ್ಷರು ಚುನಾವಣೆ ಸುಧಾರಣೆ ಬಗ್ಗೆ ಚರ್ಚೆ ಇಟ್ಟುಕೊಂಡಿದ್ದಾರೆ. ಯಾವ ಪುರುಷಾರ್ಥಕ್ಕೆ ಈ ಚರ್ಚೆ, ಇವುಗಳ ಹಿಂದೆ ಇರುವವರನ್ನು ಹೊರಗೆ ಎಳೆಯಬೇಕು ಎನ್ನುವ ಬಗ್ಗೆ ಮಾತನಾಡಲು ಕಲಾಪಕ್ಕೆ ಬಂದೆ, ಸದನದಲ್ಲಿ ಇಂಥ ವಿಚಾರ ಚರ್ಚೆ ಆಗಬೇಕು ಎಂದು ಅವರು ಪ್ರತಿಪಾದಿಸಿದರು. ಉತ್ತರ ಭಾರತದಲ್ಲಿ ಮತಕ್ಕಾಗಿ ಮಾಡಿದ್ದನ್ನೇ ಇಲ್ಲಿಯೂ ಮಾಡಲು ಹೊರಟಿದ್ದಾರೆ, ಉತ್ತರವೇ ಬೇರೆ, ದಕ್ಷಿಣವೇ ಬೇರೆ, ಉತ್ತರದಲ್ಲಿ ಮೊಘಲರ ಆಡಳಿತ ಇತ್ತು, ಅನೇಕ ದಾಳಿಗಳು ನಡೆದವು. ಆದರೆ ಇಲ್ಲಿನ ಪರಿಸ್ಥಿತಿ ಬೇರೆ, ನಮ್ಮ ರಾಜ್ಯ ನೆಮ್ಮದಿಯ ನಾಡು. ಆದರೂ ಅಶಾಂತಿ ಹುಟ್ಟು ಹಾಕುವ ಕೃತ್ಯ ನಡೆಯುತ್ತಿದೆ, ಇದು ಖಂಡಿತಾ ಸರಿಯಲ್ಲ ಎಂದರು.

ಯಡಿಯೂರಪ್ಪ ರಹಸ್ಯ ಮಾತುಕತೆ

ಅವಧಿಗೂ ಮುನ್ನ ಚುನಾವಣೆ ಮಾಡಬೇಕೇ ಅಥವಾ ಬೇಡವೇ ಅಥವಾ ನಿಗದಿತ ಸಮಯದಲ್ಲೇ ಚುನಾವಣೆ ಮಾಡಬೇಕೇ ಎಂಬ ಬಗ್ಗೆ ಮಾಹಿತಿ ಪಡೆಯುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಚುನಾವಣೆಯಲ್ಲಿ ಯಾರ ನಾಯಕತ್ವ ಇರಬೇಕು, ಬೊಮ್ಮಾಯಿ ಅವರನ್ನು ಬದಲಾವಣೆ ಮಾಡಿ ಹೊಸ ನಾಯಕತ್ವದಲ್ಲಿ ಚುನಾವಣೆ ಎದುರಿಸಬೇಕೇ ಎಂಬ ಬಗ್ಗೆ ಚರ್ಚೆ ಮಾಡಲಿದ್ದಾರೆ ಎನ್ನಲಾಗಿದೆ. ಎಲ್ಲದಕ್ಕೂ ಮಿಗಿಲಾಗಿ ಅಸಮಾಧಾನಗೊಂಡಿರುವ ಯಡಿಯೂರಪ್ಪ ಅವರನ್ನು ಸಮಾಧಾನಪಡಿಸಿ, ಅವರ ಮಾರ್ಗದರ್ಶನದಲ್ಲೇ ಮುಂದಿನ ಚುನಾವಣೆ ಎದುರಿಸುವುದಾಗಿ ಹೇಳುವ ಮೂಲಕ ಅವರನ್ನು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿಡುವ ಪ್ರಯತ್ನವಾಗಿ ಈ ಸಮಯ ನಿಗದಿಪಡಿಸಲಾಗಿದೆ. ಯಡಿಯೂರಪ್ಪ ಪುತ್ರ ವಿಜಯೇಂದ್ರ ನೀಡಿರುವ ಆಹ್ವಾನದ ಮೇರೆಗೆ ಕೇಂದ್ರ ಗೃಹ ಸಚಿವರು 2 ದಿನಗಳ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದಾರೆ. ಸಿದ್ದಗಂಗಾ ಶ್ರೀಗಳ 114ನೇ ಜಯಂತಿ ಉತ್ಸವದ ಪೂರ್ಣ ಜವಾಬ್ದಾರಿಯನ್ನು ವಿಜಯೇಂದ್ರ ವಹಿಸಿಕೊಂಡಿದ್ದಾರೆ. ಈ ಕಾರ್ಯಕ್ರಮಕ್ಕೆ ಅಮಿತ್ ಷಾ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ಸುಮಾರು 90 ನಿಮಿಷಗಳ ಕಾಲ ತುಮಕೂರಿನ ಶ್ರೀಕ್ಷೇತ್ರದಲ್ಲಿ ಕಾಲ ಕಳೆಯಲಿದ್ದಾರೆ. ಒಟ್ಟಾರೆ ಈ ಉಭಯ ನಾಯಕರ ರಹಸ್ಯ ಮಾತುಕತೆ ರಾಜ್ಯ ಬಿಜೆಪಿ ಮತ್ತು ಆಡಳಿತದಲ್ಲಿ ಕೆಲವು ಮಹತ್ತರ ಬದಲಾವಣೆಗೆ ನಾಂದಿಯಾಗಬಹುದು.

ವಿವಿಧ ಕ್ಷೇತ್ರಗಳ ಸಾಧಕ ಮಹಿಳೆಯರಿಗೆ ರಾಜಮಾತೆ ಕೆಂಪನಂಜಮ್ಮಣ್ಣಿ ಪ್ರಶಸ್ತಿ ಪ್ರದಾನ

ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಮಹಿಳೆಯರೂ ಸಾಧಕರೇ

ಜಿಲ್ಲಾ ನ್ಯಾಯಾಲಯದ ಪಬ್ಲಿಕ್ ಪ್ರಾಸಿಕ್ಯೂಟರ್ ಮಂಜುಳಾ ಅಭಿಮತ



ಮೈಸೂರು, ಮಾ.29(ಆರ್‌ಕೆಬಿ)– ಪ್ರತಿಯೊಬ್ಬ ಮಹಿಳೆಯರೂ ಸಾಧಕಿಯೇ ಆಗಿರುತ್ತಾರೆ. ಮನೆಯಲ್ಲಿ, ಸಮಾಜದಲ್ಲಿ ಆಕೆ ಸಲ್ಲಿಸುವ ನಿಷ್ಕಲ್ಮಶ ಸೇವೆ ಆಕೆಯನ್ನು ಸಾಧಕಿಯನ್ನಾಗಿ ಮಾಡುತ್ತದೆ. ಮಹಿಳೆ ಚೆನ್ನಾಗಿದ್ದರೆ ಇಡೀ ದೇಶ ಚೆನ್ನಾಗಿರುತ್ತದೆ. ಮಹಿಳೆ ಅಭಿವೃದ್ಧಿ ಹೊಂದಿದರೆ ಇಡೀ ದೇಶ ಅಭಿವೃದ್ಧಿ ಹೊಂದಿದಂತೆ ಎಂದು ಮೈಸೂರು ಜಿಲ್ಲಾ ನ್ಯಾಯಾಲಯದ ಪಬ್ಲಿಕ್ ಪ್ರಾಸಿಕ್ಯೂಟರ್ ಮಂಜುಳಾ ತಿಳಿಸಿದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರು ಕನ್ನಡ ವೇದಿಕೆ ಮಂಗಳವಾರ ಪತ್ರಕರ್ತರ ಭವನದಲ್ಲಿ ಏರ್ಪಡಿಸಿದ್ದ ವಿವಿಧ ಕ್ಷೇತ್ರಗಳ ಸಾಧಕ ಮಹಿಳೆಯರಿಗೆ ರಾಜಮಾತೆ ಕೆಂಪನಂಜಮ್ಮಣ್ಣಿ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಹಿಳೆಯರು ಏನೆಲ್ಲಾ ಸಾಧನೆ ಮಾಡಬಹುದು ಎಂಬುದಕ್ಕೆ ದಲಿತ ಸಮುದಾಯಕ್ಕೆ ಸೇರಿದ ಮಹಿಳೆಯರಿಬ್ಬರು 'ಖಬರ್ ಲಹರಿಯಾ' ಎಂಬ ಪತ್ರಿಕೆಯನ್ನು ನಡೆಸುತ್ತಿರುವ ಬಗ್ಗೆ ತಿಳಿಸಿದರು.

ಪತ್ರಿಕೆ ಹೊರ ತರುವುದು ಅಷ್ಟು ಸುಲಭದ ಕೆಲಸವಲ್ಲ. ಅದರಲ್ಲೂ ದಲಿತ, ಹಿಂದುಳಿದ, ಗ್ರಾಮೀಣ ಪ್ರದೇಶದ ಹಾಗೂ ಬುಡಕಟ್ಟು ಸಮುದಾಯದ ಮಹಿಳೆಯನ್ನೇ ವರದಿಗಾರರನ್ನಾಗಿ ಮಾಡಿಕೊಂಡು ಸಮಾಜಮುಖಿ ಕೆಲಸದಲ್ಲಿ ತೊಡಗಿ, ವಸ್ತು ನಿಷ್ಠ, ಸತ್ಯ ನಿಷ್ಠತೆಯಿಂದ ಪತ್ರಿಕೆ ನಡೆಸುತ್ತಿದ್ದಾರೆ. ಈ ಪತ್ರಿಕೆಯ ಸ್ಪೂರ್ತಿಯಿಂದ ತಯಾರಾದ ಚಲನಚಿತ್ರವೊಂದು ಆಸ್ಕರ್ ಪ್ರಶಸ್ತಿಗೆ ಹೋಗಿದೆ. ಈ ಮೂಲಕ ಮಹಿಳೆಯರೇ ನಡೆಸುತ್ತಿರುವ ಈ ಪತ್ರಿಕೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಗಮನ ಸೆಳೆದಿದೆ. ಇದು ಮಹಿಳೆಯರ ಸಾಧನೆಗೊಂದು ಮುಕುಟಮಣಿ ಇದ್ದಂತೆ ಎಂದು ಹೇಳಿದರು.

ವಿವಿಧ ಕ್ಷೇತ್ರಗಳ ಸಾಧಕ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಮೈಸೂರು ನಗರಪಾಲಿಕೆ ಉಪ ಆಯುಕ್ತರಾದ ಎಂ.ಕೆ.ಸವಿತಾ, ಮಹಿಳೆಯರು ಎಲ್ಲಾ ಕ್ಷೇತ್ರದಲ್ಲು ಸಾಧನೆ ಮಾಡಿದ್ದಾರೆ. ಸ್ಥಳೀಯವಾಗಿ ಕೆಲಸ ಮಾಡುವ ಸ್ಥಳದಲ್ಲಿ, ಸಮಾಜದಲ್ಲಿ, ತನ್ನ ಕುಟುಂಬದಲ್ಲಿ ಆಕೆ ಅನುಭವಿಸುವ ನೋವು, ದೌರ್ಜನ್ಯ ಆಕೆಗೇ ಗೊತ್ತು. ಸದೃಢ, ಸಬಲೀಕರಣರಾಗದ ಮಹಿಳೆಯರು ಖಿನ್ನತೆ, ಆತ್ಮಹತ್ಯೆಗೆ ಮುಂದಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಪ್ರತಿಯೊಬ್ಬ ಮಹಿಳೆಯರಲ್ಲೂ ನೋವು ಇದ್ದೇ ಇರುತ್ತದೆ. ಹಾಗಾಗಿ ಮಹಿಳೆಯರು ಮಾನಸಿಕವಾಗಿ ಸಬಲರಾಗಬೇಕು. ದೌರ್ಬಲ್ಯಗಳನ್ನು ಮೆಟ್ಟಿ ನಿಲ್ಲಬೇಕಾದರೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬೇಕು ಎಂದರು.

ಮುಖ್ಯ ಅತಿಥಿಯಾಗಿದ್ದ ಅರಣ್ಯ ಸಂರಕ್ಷಣಾಧಿಕಾರಿ ಡಾ.ಮಾಲತಿ ಪ್ರಿಯಾ ಮಾತನಾಡಿ, ಮಹಿಳೆಯರು ತಮ್ಮ ಅಭಿವೃದ್ಧಿ, ಸಾಧನೆಯ ಜೊತೆಗೆ ಹಾಳಾಗುತ್ತಿರುವ ಪರಿಸರವನ್ನು ಕಾಪಾಡುವ ಜವಾಬ್ದಾರಿ ಹೊರಬೇಕು. ಕೋವಿಡ್‌ನಿಂದಾಗಿ ಕಳೆದ 2 ವರ್ಷದಿಂದ ಮಾರಕವಾಗಿರುವ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಮಹಿಳೆಯರು ಶ್ರಮಿಸಬೇಕು. ಮಾನವ-ಪ್ರಾಣಿ ಸಂಘರ್ಷ ತಪ್ಪಬೇಕು. ಆ ನಿಟ್ಟಿನಲ್ಲಿ ಮಹಿಳೆಯರು, ಪುರುಷರು ಶ್ರಮಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಾದ ಹೆಚ್.ಆರ್.ಭವಾನಿ, ಜ್ಯೋತಿ ರೆಡ್ಡಿ, ಉಮಾ ಜಾಧವ್, ಶಶಿಕಲಾ, ಕಮಲಾ ನಟರಾಜು, ಪಲ್ಲಮ್ಮ, ಬಿ.ಡಿ. ಜ್ಯೋತಿ, ಪಿ.ಶಿಲ್ಪಾ, ಶಿವಲೀಲಾ ವಿ.ಹಿರೇಮಠ್, ಝಾನ್ಸಿ ಮುತ್ತಪ್ಪ ಅವರಿಗೆ ಶಾಲು ಹೊದಿಸಿ ಸನ್ಮಾನಿಸಿ, ರಾಜಮಾತೆ ಕೆಂಪನಂಜಮ್ಮಣ್ಣಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಾಹಿತಿ ಬನ್ನೂರು ಕೆ. ರಾಜು, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್. ಟಿ. ರವಿಕುಮಾರ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಉಪಾಧ್ಯಕ್ಷ ನಾಲಾಬೀದಿ ರವಿ, ಪದಾಧಿಕಾರಿಗಳಾದ ಗುರುಬಸಪ್ಪ ಪ್ಯಾಲೆಸ್ ಬಾಬು, ಗೋಪಿ, ಮಾಲಿನಿ, ಎಂ.ಕೆ ಕಾವೇರಿಯಮ್ಮ, ಬೀಡಾ ಬಾಬು, ಸ್ವಾಮಿ, ಎಲ್‌ಐಸಿ ಗೋವಿಂದರಾಜು ಇನ್ನಿತರರು ಉಪಸ್ಥಿತರಿದ್ದರು.

ಮುಡಾ ಅಧ್ಯಕ್ಷ-ಆಯುಕ್ತರ ನಡುವೆ ಶೀತಲ ಸಮರ!

ನೆನೆಗುದಿಗೆ ಬಿದ್ದಿರುವ ಮುಡಾ ಜನಪರ ಕಾರ್ಯಗಳು

- ಹಲವು ತಿಂಗಳಾದರೂ ಆಡಳಿತ ಮಂಡಳಿ ಸಭೆ ನಡೆದಿಲ್ಲ
- ಹಿಂದಿನ ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಪ್ರಗತಿ ಪರಿಶೀಲಿಸಿಲ್ಲ
- ನಾಗರಿಕರ ಸಮಸ್ಯೆಗಳಿಗೆ ಪರಿಹಾರವೂ ಇಲ್ಲ
- ಗಂಡ-ಹೆಂಡಿರ ಜಗಳದಲ್ಲಿ ಕೂಸು ಬಡವಾದ ಗಾದೆಯಂತೆ ಜನರಿಗೆ ಸಂಕಷ್ಟ ಪರಿಸ್ಥಿತಿ

ಮೈಸೂರು, ಮಾ.29(ಎಸ್‌ಬಿಡಿ)– ನಿಗದಿತ ಕಾಲಮಿತಿಯಲ್ಲಿ ಪರಿಣಾಮಕಾರಿ ಹಾಗೂ ಉತ್ತಮ ಸೇವೆ ಕಲ್ಪಿಸುವ ವಾಗ್ದಾನ ನೀಡಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಲ್ಲಿ ಏಳೆಂಟು ತಿಂಗಳಿಂದ ಆಡಳಿತ ಮಂಡಳಿ ಸಭೆಯೇ ನಡೆಯದಿರುವುದು ವಿಷಾದನೀಯ ಸಂಗತಿ.

ಪ್ರಾಧಿಕಾರದ ಯಾವುದೇ ಯೋಜನೆ, ಕಾರ್ಯಕ್ರಮ, ನಿರ್ವಹಣೆಗೆ ಸಂಬಂಧಿಸಿದಂತೆ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಂಡ ನಂತರವಷ್ಟೇ ಕಾರ್ಯಾನುಷ್ಠಾನ ಸಾಧ್ಯ. ಆದರೆ ಏಳೆಂಟು ತಿಂಗಳಿಂದ ಆಡಳಿತ ಮಂಡಳಿ ಸಭೆಯನ್ನೇ ನಡೆಸಿಲ್ಲ. ಪರಿಣಾಮ ಮುಡಾ ಆಡಳಿತ ಯಂತ್ರಕ್ಕೆ ಪೆಟ್ಟು ಬಿದ್ದಿದೆ. ಅಭಿವೃದ್ಧಿ ಯೋಜನೆಗಳಿಗೆ ಅಡ್ಡಿಯಾಗುವುದರ ಜೊತೆಗೆ ಸಾರ್ವಜನಿಕರಿಗೂ ತೀವ್ರ ತೊಂದರೆಯುಂಟಾಗಿದೆ. ಈ ಪರಿಸ್ಥಿತಿ ನಿರ್ಮಾಣವಾಗಲು ಮುಡಾ ಅಧ್ಯಕ್ಷರು ಹಾಗೂ ಆಯುಕ್ತರ ನಡುವಿನ ಶೀತಲ ಸಮರವೇ ಪ್ರಮುಖ ಕಾರಣ ಎಂದು ಜನ ದೂರುತ್ತಿದ್ದಾರೆ.

ಮುಡಾ ನಿರ್ಮಿತ ಬಡಾವಣೆಗಳ ಸಮಗ್ರ ಅಭಿವೃದ್ಧಿ ಯೋಜನೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಆದರೆ ಕಾರ್ಯರೂಪಕ್ಕೆ ಬರುವುದು ಅನುಮಾನ ಎನ್ನುವಂತಾಗಿದೆ. ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ.ರಾಜೀವ್ ಹಾಗೂ ಆಯುಕ್ತ ಡಿ.ಬಿ. ನಟೇಶ್ ಅವರ ನಡುವಿನ ಶೀತಲ ಸಮರ ಎಲ್ಲರಿಗೂ ತಿಳಿದ ವಿಚಾರವೇ. ಆದರೆ ಇತ್ತೀಚೆಗೆ ಅದರ ತೀವ್ರತೆ ಹೆಚ್ಚಾಗಿದೆ. ಇಬ್ಬರ ನಡುವೆ ಸಮನ್ವಯತೆಯಿಲ್ಲದ ಕಾರಣ ಆಡಳಿತದಲ್ಲಿ ಗೊಂದಲ ಸೃಷ್ಟಿಯಾಗಿದೆ. ಅಧಿಕಾರಿಗಳು ಹಾಗೂ ಸಿಬ್ಬಂದಿ ಅತಂತ್ರ ಸ್ಥಿತಿಯಲ್ಲಿ ಸಿಲುಕಿದ್ದಾರೆ. ಒಂದೆಡೆ ಪ್ರಾಧಿಕಾರದ ಮುಖ್ಯಸ್ಥರು ಹಾಗೂ ಮತ್ತೊಂದೆಡೆ ತಮ್ಮ ಮೇಲಧಿಕಾರಿ, ಇವರಲ್ಲಿ ಯಾರ ಆದೇಶ ಪಾಲಿಸಬೇಕು? ಎನ್ನುವ ಸಂದಿಗ್ಧತೆ ನಡುವೆ ಕಾರ್ಯ ನಿರ್ವಹಿಸುವಂತಾಗಿದೆ. ಸಮನ್ವಯತೆ ಇಲ್ಲದಿದ್ದರೆ ಆಡಳಿತ ಬಂಡಿ ಸುಗಮವಾಗಿ ಸಾಗುವುದು ಅಸಾಧ್ಯ ಎಂದು ಸಾರ್ವಜನಿಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಮುಡಾ ಒಂದು ಅಭಿವೃದ್ಧಿ ಸಂಸ್ಥೆ. ಸಮರ್ಪಕ ಯೋಜನೆ ರೂಪಿಸಿ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಮೂಲಕ ಸಾರ್ವಜನಿಕರಿಗೆ ಅನುಕೂಲ ಮಾಡುವುದು ಇದರ ಮೂಲ ಆಶಯ. ಪ್ರಾಧಿಕಾರ ಅಭಿವೃದ್ಧಿ ಪರ ಹಾಗೂ ಕ್ರಿಯಾಶೀಲವಾಗಿದ್ದರೆ ತಿಂಗಳಿಗೊಂದು ಸಾಮಾನ್ಯ ಸಭೆ ನಡೆಸಬೇಕು. ಇಲ್ಲವಾದರೆ ಗುರಿ ಸಾಧನೆ ಕೇವಲ ಘೋಷಣೆಯಾಗಿ ಉಳಿಯುತ್ತದೆ. ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳೂ ನೆನೆಗುದಿಗೆ ಬೀಳುತ್ತವೆ. ಸ್ಥಳೀಯ ಚುನಾಯಿತ ಪ್ರತಿನಿಧಿಗಳು, ನಾಮ ನಿರ್ದೇಶನಗೊಂಡ ಸದಸ್ಯರು, ಹಿರಿಯ ಅಧಿಕಾರಿಗಳು ಪ್ರಾಧಿಕಾರದ ಸದಸ್ಯರಾಗಿದ್ದಾರೆ. ಹಲವು ಅಜೆಂಡಾ (ವಿಷಯ)ಗಳ ಬಗ್ಗೆ ಚರ್ಚೆ ಮಾಡಿ, ಸಲಹೆ-ಸೂಚನೆ ನೀಡುವ ಜವಾಬ್ದಾರಿ



ಹೆಚ್.ವಿ.ರಾಜೀವ್



ಡಾ.ನಟೇಶ್

ಎಲ್ಲರದ್ದಾಗಿದೆ. ಆದರೆ ಆಡಳಿತ ಮಂಡಳಿ ವಿಳಂಬದ ವಿಚಾರವಾಗಿ ಯಾವ ಸದಸ್ಯರೂ ಪ್ರಶ್ನಿಸದಿರುವುದು ಸರಿಯೇ? ಎಂದು ನಿರಾಶಭಾವದಿಂದ ಪ್ರಶ್ನಿಸುತ್ತಿದ್ದಾರೆ.

7 ತಿಂಗಳ ಹಿಂದೆ ಸಭೆ: ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಅಧ್ಯಕ್ಷತೆಯಲ್ಲಿ 2021ರ ಆಗಸ್ಟ್‌ನಲ್ಲಿ ಆಡಳಿತ ಮಂಡಳಿ ಸಭೆ ನಡೆದಿತ್ತು. ನಗರದ ಮೂರು ಭಾಗಗಳಲ್ಲಿ 452 ಕೋಟಿ ರೂ. ವೆಚ್ಚದಲ್ಲಿ ಗುಂಪು ಮನೆ ಯೋಜನೆ, ಕಬಿನಿಯಿಂದ 180 ಎಂಎಲ್‌ಡಿ ನೀರು ಪೂರೈಸುವ ಬಿದರಗೂಡು ಯೋಜನೆ, ಮಹಾರಾಷ್ಟ್ರ ಮಾದರಿಯ ಮೆಟ್ರೋ ನಿಯೋ ಯೋಜನೆ ಕಾರ್ಯ ಸಾಧ್ಯತೆ ವರದಿ ಸಿದ್ಧತೆ ಸೇರಿದಂತೆ ಹಲವು ಮಹತ್ವದ ವಿಷಯಗಳಿಗೆ ಅಂದಿನ ಸಭೆಯಲ್ಲಿ ಅನುಮೋದನೆ ಸಿಕ್ಕಿದ್ದಾಗಿ ರಾಜೀವ್ ಅವರು ಸುದ್ದಿಗೋಷ್ಠಿಯಲ್ಲಿ ಸಂತಸದಿಂದ ವಿವರಿಸಿದ್ದರು. ಆದರೆ ಪ್ರಾಧಿಕಾರದಲ್ಲಿ ಸಮನ್ವಯವಿಲ್ಲದ ಕಾರಣ ಯೋಜನೆಗಳ ಪ್ರಗತಿ ನೆನೆಗುದಿಗೆ ಬಿದ್ದಿವೆ.

ಜನರಿಗೆ ತುಂಬಾ ತೊಂದರೆ: ಬಡಾವಣೆ ನಿರ್ಮಾಣ, ನಿವೇಶನ ಹಂಚಿಕೆ, ಖಾಸಗಿ ಬಡಾವಣೆಗಳಿಗೆ ಅನುಮೋದನೆ, ಭೂಸ್ವಾಧೀನ, ರೈತರಿಗೆ ಪರಿಹಾರ ಸೇರಿದಂತೆ ಎಲ್ಲಾ ವಿಚಾರಗಳ ಬಗ್ಗೆ ಆಡಳಿತ ಮಂಡಳಿಯಲ್ಲಿ ಚರ್ಚೆ ನಡೆಸಿ, ನಿರ್ಣಯಕ್ಕೆ ಬರಬೇಕು. ಮುಖ್ಯವಾಗಿ ಜನರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕಡ್ಡಾಯವಾಗಿ ನಿಗದಿತವಾಗಿ ಸಭೆ ನಡೆಸಬೇಕು. ಆದರೆ ಏಳೆಂಟು ತಿಂಗಳಿಂದ ಸಭೆ ನಡೆಸದಿರುವುದರಿಂದ ಜನರ ಸಂಕಷ್ಟ ಹೆಚ್ಚಾಗಿದೆ. ಮುಡಾದ ಆಡಳಿತ ಶಾಖೆ, ತಾಂತ್ರಿಕ ಶಾಖೆ, ನಗರ ಯೋಜನಾ ಶಾಖೆ, ಭೂಸ್ವಾಧೀನ ಶಾಖೆ, ಲೆಕ್ಕ ಶಾಖೆ, ಕಾನೂನು ಶಾಖೆ, ಕಂದಾಯ ಶಾಖೆ, ತೋಟಗಾರಿಕೆ ಶಾಖೆ, ಸಾರ್ವಜನಿಕ ಸಂಪರ್ಕ ಶಾಖೆ, ಗಣಕ ಶಾಖೆ, ನಿವೇಶನ/ಅರ್ಜಿ ಶಾಖೆ, ಹೀಗೆ ಯಾವ ಶಾಖೆಯೂ ಸಮರ್ಪಕವಾಗಿ ಕಾರ್ಯ ನಿರ್ವಹಿಸಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಶೀಘ್ರ ಆಡಳಿತ ಮಂಡಳಿ ಸಭೆ ನಡೆಸಿ, ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವುದರ ಜೊತೆಗೆ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಮುಂದಾಗಬೇಕೆಂಬ ಒತ್ತಾಯ ಕೇಳಿಬಂದಿದೆ. ಈ ವಿಚಾರವಾಗಿ ಪ್ರತಿಕ್ರಿಯೆ ಪಡೆಯಲು ಮುಡಾ ಅಧ್ಯಕ್ಷ ಹೆಚ್.ವಿ. ರಾಜೀವ್ ಹಾಗೂ ಆಯುಕ್ತ ಡಿ.ಬಿ. ನಟೇಶ್ ಅವರನ್ನು ಮೊಬೈಲ್ ಮೂಲಕ ಸಂಪರ್ಕಿಸಲು ಪ್ರಯತ್ನಿಸಲಾಯಿತಾದರೂ ಸಾಧ್ಯವಾಗಲಿಲ್ಲ.

ಹಿಜಾಬ್, ವ್ಯಾಪಾರ ಧರ್ಮ ನಂತರ ಈಗ 'ಹಲಾಲ್' ಮುನ್ನೆಲೆಗೆ

ಬೆಂಗಳೂರು, ಮಾ.29–ಹಿಜಾಬ್ ಆಯ್ತು, ಧಾರ್ಮಿಕ ಸ್ಥಳಗಳಲ್ಲಿ ಅನ್ಯರ ವ್ಯಾಪಾರಕ್ಕೆ ಅವಕಾಶ ನೀಡದ ನಿರ್ಧಾರವೂ ಆಯ್ತು ಇದೀಗ 'ಹಲಾಲ್' ವಿವಾದ ಮುನ್ನೆಲೆಗೆ ಬಂದಿದೆ. ಮುಸ್ಲಿಂರ ಮಾಂಸದಂಗಡಿಗಳಲ್ಲಿ 'ಹಲಾಲ್' ಮಾಡಿರುವ ಮಾಂಸವನ್ನು ಹಿಂದೂಗಳು ಖರೀದಿಸಬಾರದು. ಅದನ್ನು ಬಹಿಷ್ಕರಿಸಬೇಕು ಎಂದು ಹಿಂದೂಪರ ಸಂಘಟನೆಗಳು ಕರೆ ನೀಡಿದ್ದು, ಇದು ದೇಶಾದ್ಯಂತ ಚರ್ಚೆಗೊಳಪಟ್ಟಿದೆ.

ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಚಿವ ಸಿ.ಟಿ.ರವಿ 'ಹಲಾಲ್' ಎಂಬುದು ಮುಸ್ಲಿಂರ ಆರ್ಥಿಕ ಜಿಹಾದ್. 'ಹಲಾಲ್' ಮಾಡಿದ ಮಾಂಸವನ್ನು ತಮ್ಮ ಬಳಿಯೇ ಖರೀದಿಸಬೇಕು ಎಂಬುದು ಅವರ ಉದ್ದೇಶವಾಗಿದೆ. ಆದ್ದರಿಂದ ಯಾರೂ ಅವರ ಬಳಿ ಮಾಂಸ ಖರೀದಿಸಬಾರದು ಎಂದರು.

'ಹಲಾಲ್' ವಿವಾದವನ್ನು ಕಾಂಗ್ರೆಸ್ ಮತ್ತು ಜೆಡಿಎಸ್ ಮುಖಂಡರು ತೀವ್ರವಾಗಿ ಖಂಡಿಸಿದ್ದು, ಮುಖ್ಯಮಂತ್ರಿಗಳು ಈ ಬಗ್ಗೆ ಕ್ರಮ ಜರುಗಿಸುವಂತೆ ಒತ್ತಾಯಿಸಿದ್ದಾರೆ. ಈ ಮಧ್ಯೆ ಮುಸ್ಲಿಂ ಮುಖಂಡರೊಬ್ಬರು ಮಾತನಾಡಿ, ಹಿಂದೂ ಮತ್ತು ಮುಸ್ಲಿಂ ಬಾಂಧವರಲ್ಲಿ ನನ್ನ ಮನವಿ ಇಷ್ಟೇ. ಯಾರು ಎಲ್ಲಿ ಬೇಕಾದರೂ ಮಾಂಸ ಖರೀದಿಸಬಹುದು. ಇದಕ್ಕೆ ಬಲವಂತ ಇಲ್ಲ ಎಂದಿದ್ದಾರೆ.

48 ದಿನದಿಂದ ಸ್ವಾಮೀಜಿ ಪ್ರತಿಭಟನೆಗೂ ನಿರ್ಲಕ್ಷ್ಯ ತೋರಿದ ಮುಖ್ಯಮಂತ್ರಿ ಧೋರಣೆಗೆ ಖಂಡನೆ

ಬೆಂಗಳೂರಲ್ಲಿ ಇಂದು ವಿವಿಧ ಸಂಘಟನೆಗಳಿಂದ ಸಭೆ



ಮೈಸೂರು, ಮಾ.29(ಆರ್‌ಕೆಬಿ)– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ.15ರಿಂದ 17 ಮತ್ತು ಶೇ.3ರಿಂದ 7.5ಕ್ಕೆ ಹೆಚ್ಚಿಸುವಂತೆ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಆಯೋಗ ನೀಡಿರುವ ವರದಿಯನ್ನು ಅನುಷ್ಠಾನಗೊಳಿಸುವಂತೆ ಆಗ್ರಹಿಸಿ ಕಳೆದ 48 ದಿನಗಳಿಂದಲೂ ಬೆಂಗಳೂರಿನಲ್ಲಿ ಧರಣಿ ನಡೆಸುತ್ತಿದ್ದರೂ ರಾಜ್ಯ ಸರ್ಕಾರವಾಗಲೀ, ಮುಖ್ಯಮಂತ್ರಿಗಳಾಗಲೀ ಗಮನ ಹರಿಸದೆ ನಿರ್ಲಕ್ಷ್ಯ ವಹಿಸಿದೆ ಎಂದು ಕರ್ನಾಟಕ ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ರಾಜ್ಯಾಧ್ಯಕ್ಷ ದ್ಯಾವಪ್ಪ ನಾಯಕ, ಸ್ವಾಮೀಜಿಯವರು ನಿರಂತರ ಧರಣಿ ಕುಳಿತಿದ್ದರೂ ಅವರನ್ನು ಸೌಜನ್ಯಕ್ಕಾದರೂ ಭೇಟಿ ಮಾಡದೆ ಅವರ ಆರೋಗ್ಯದ ಬಗ್ಗೆಯೂ ಮುಖ್ಯಮಂತ್ರಿಗಳು ಕಳಕಳಿ ತೋರದೆ ನಿರ್ಲಕ್ಷ್ಯ ಧೋರಣೆ ತಾಳಿದ್ದಾರೆ ಎಂದು ಖಂಡಿಸಿದರು.

ಕರ್ನಾಟಕ ರಾಜ್ಯ ವಾಲ್ಮೀಕಿ ನಾಯಕ ಸಂಘಗಳ ಒಕ್ಕೂಟದ ರಾಜ್ಯಾಧ್ಯಕ್ಷ ಪಿ.ದೇವರಾಜು ಮಾತನಾಡಿ, ಬೆಂಗಳೂರಿನಲ್ಲಿ ವಿಧಾನಸೌಧದ ಕೂಗಳತೆ ದೂರದಲ್ಲಿ ಸ್ವಾಮೀಜಿಯವರು ಧರಣಿ ಕುಳಿತಿದ್ದರೂ ಕೇಳದಂತೆ ಕಿವುಡಾಗಿರುವ ಮುಖ್ಯಮಂತ್ರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದು ಮುಖ್ಯಮಂತ್ರಿ ಮತ್ತು ಸರ್ಕಾರ ಹಿಂದುಳಿದ ವರ್ಗಗಳು, ನಾಯಕ ಸಮುದಾಯದ ಬಗ್ಗೆ ತಾಳಿರುವ ನಿರ್ಲಕ್ಷ್ಯ ಧೋರಣೆಗೆ ಸ್ಪಷ್ಟ ನಿದರ್ಶನವಾಗಿದೆ ಎಂದು ಟೀಕಿಸಿದರು.

48 ದಿನಗಳಿಂದ ಸ್ವಾಮೀಜಿಯವರು ಧರಣಿ ಕುಳಿತಿದ್ದರೂ ಯಾವುದೇ ಕ್ರಮ ಕೈಗೊಳ್ಳದ ಸರ್ಕಾರದ ಕ್ರಮವನ್ನು ವಿರೋಧಿಸಿ ಪ್ರತಿಭಟನೆಯ ಮುಂದಿನ ರೂಪುರೇಷೆಗಳ ಕುರಿತು ಚರ್ಚಿಸಿ ನಿರ್ಧಾರ ಕೈಗೊಳ್ಳಲು ದಲಿತ ಸಂಘಟನೆಗಳ ಒಕ್ಕೂಟದ ರಾಜ್ಯ ಮುಖಂಡರು, ಪರಿಶಿಷ್ಟ ಜಾತಿ, ಪಂಗಡಗಳ ಮೀಸಲಾತಿ ಹೆಚ್ಚಳ ಹೋರಾಟ ಕ್ರಿಯಾ ಸಮಿತಿ ಆಶ್ರಯದಲ್ಲಿ ಮಾ.30ರಂದು ಸಂಜೆ 5 ಗಂಟೆಗೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯಮಟ್ಟದ ವಿಶೇಷ ಸಭೆ ಕರೆಯಲಾಗಿದೆ. ಈ ಸಭೆಗೆ ರಾಜ್ಯದ ವಿವಿಧ ಸಂಘಟನೆಗಳ ಮುಖಂಡರು ಭಾಗವಹಿಸುತ್ತಿದ್ದಾರೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ವೇದಿಕೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರಭಾಕರ್ ಹುಣಸೂರು, ಮುಖಂಡರಾದ ಚೆನ್ನನಾಯಕ, ಕೆರೆಹಳ್ಳಿ ಮಾದೇಶ್, ಅನಿಲ್‌ಕುಮಾರ್ ಉಪಸ್ಥಿತರಿದ್ದರು.

ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ


ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಮಾ.29– ನಗರದ ಪ್ರತಿಷ್ಠಿತ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಐಕ್ಯಂ ಫೌಂಡೇಷನ್ ಇವರ ಸಂಯುಕ್ತಾಶ್ರಯದಲ್ಲಿ ವಿಶ್ವ ಮಹಿಳಾ ದಿನದ ಅಂಗವಾಗಿ ಮಹಿಳಾ ಪೌರಕಾರ್ಮಿಕರು ಹಾಗೂ ಆಶಾ ಕಾರ್ಯಕರ್ತೆಯರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಕಾರ್ಯಕ್ರಮವನ್ನು ನಗರದ ಅಶೋಕಪುರಂ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ಪಾಲಿಕೆ ಸದಸ್ಯರಾದ ಶ್ರೀಮತಿ ಪಲ್ಲವಿ ಬೇಗಂ, ಶ್ರೀಮತಿ ಭುವನೇಶ್ವರಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ದೇವಿ ಆನಂದ್ ಉದ್ಘಾಟಿಸಿದರು. ಇದೇ ಸಂದರ್ಭದಲ್ಲಿ ಐಕ್ಯಂ ಫೌಂಡೇಷನ್ ಸಂಸ್ಥಾಪಕರಾದ ಶೋಮಿಕಾ ಎಸ್ರಾ ಅವರು ಶಿಬಿರಾರ್ಥಿಗಳನ್ನು ಕುರಿತು ಮಾತನಾಡಿ, ಶಿಬಿರದಲ್ಲಿ ಹಮ್ಮಿಕೊಂಡಿದ್ದ ವೈದ್ಯಕೀಯ ಪರೀಕ್ಷೆಗಳ ಮಹತ್ವವನ್ನು ತಿಳಿಸಿದರು ಹಾಗೂ ಶಿಬಿರದ ಹಿಂದಿರುವ ಉದ್ದೇಶವನ್ನು ವಿವರಿಸಿದರು. ಶಿಬಿರದಲ್ಲಿ ವೈದ್ಯಕೀಯ ಸಮಾಲೋಚನೆ, ಬಿಪಿ, ಸಕ್ಕರೆ ಪರೀಕ್ಷೆ, ಇಸಿಜಿ, ಎಕೋ ಪರೀಕ್ಷೆಗಳೊಂದಿಗೆ ಅತ್ಯಾಧುನಿಕ ಪ್ಯಾಪ್ಸ್ಮಿಯರ್ ಪರೀಕ್ಷೆಯನ್ನು ನಡೆಸಲಾಯಿತು. ಸುಮಾರು 150 ಕ್ಕೂ ಹೆಚ್ಚು ಮಹಿಳಾ ಪೌರಕಾರ್ಮಿಕರು ಈ ಶಿಬಿರದ ಪ್ರಯೋಜನವನ್ನು ಪಡೆದರು.

ಸಹಕಾರ ಸಂಘಗಳ ಕಾರ್ಯದರ್ಶಿಗಳು, ಸಿಇಓಗಳಿಗೆ ತರಬೇತಿ ಕಾರ್ಯಾಗಾರ

ಸಹಕಾರ ಸಂಘಗಳ ಪ್ರಗತಿಗೆ ಸಿಇಓ, ಕಾರ್ಯದರ್ಶಿಗಳ ಪಾತ್ರ ಮುಖ್ಯ



ಮೈಸೂರು,ಮಾ.29(ಎಂಟಿವೈ)– ಸಹಕಾರ ಸಂಘಗಳ ಚಟುವಟಿಕೆಗಳನ್ನು ಹೇಗೆ ಚುರುಕುಗೊಳಿಸಬೇಕು. ಸಂಘದ ಏಳಿಗೆಗಾಗಿ ಯಾವ ರೀತಿ ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ವಿವಿಧ ಸಹಕಾರ ಸಂಘಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಕಾರ್ಯದರ್ಶಿಗಳಿಗೆ ಒಂದು ದಿನದ ವಿಶೇಷ ತರಬೇತಿ ಕಾರ್ಯಾಗಾರ ಏರ್ಪಡಿಸಲಾಗಿತ್ತು.

ಮೈಸೂರಿನ ಚಾಮರಾಜ ಜೋಡಿ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಮೈಮುಲ್ ಹಾಗೂ ಸಹಕಾರ ಇಲಾಖೆ ಸಂಯುಕ್ತಾಶ್ರಯದಲ್ಲಿ ಮಂಗಳವಾರ ಬೆಳಗ್ಗೆ ಆಯೋಜಿಸಿದ್ದ ಸಹಕಾರ ಸಂಘಗಳ ಕಾರ್ಯದರ್ಶಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ತರಬೇತಿ ಕಾರ್ಯಾಗಾರದಲ್ಲಿ 80ಕ್ಕೂ ಸಹಕಾರ ಸಂಘಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು.

ತರಬೇತಿ ಕಾರ್ಯಾಗಾರವನ್ನು ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಹಕಾರ ಸಂಘಗಳ ಒಕ್ಕೂಟ(ಮೈಮುಲ್) ಅಧ್ಯಕ್ಷ ಪಿ.ಎಂ.ಪ್ರಸನ್ನ ಉದ್ಘಾಟಿಸಿ ಮಾತನಾಡಿ, ಸಹಕಾರ ಕ್ಷೇತ್ರ ಈಗಾಗಲೇ ಗಮನಾರ್ಹ ಸಾಧನೆ ಮಾಡಿದೆ. ಇದಕ್ಕೆ ಹಲವರ ಶ್ರಮ ಹಾಗೂ ನಿಸ್ವಾರ್ಥ ಸೇವೆಯೇ ಕಾರಣ. ಸಹಕಾರ ಕ್ಷೇತ್ರ ಇನ್ನಷ್ಟು ಪ್ರಗತಿ ಸಾಧಿಸಬೇಕಾದರೆ ಸಿಇಓ, ಕಾರ್ಯದರ್ಶಿಗಳ ಪಾತ್ರ ಬಹುಮುಖ್ಯ. ಸಹಕಾರ ಸಂಘಗಳ ಅಧ್ಯಕ್ಷರು, ಪದಾಧಿಕಾರಿಗಳ ಆಲೋಚನೆಗೆ ಅನುಗುಣವಾಗಿ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಕಾರ್ಯಕ್ರಮ ರೂಪಿಸಬೇಕು. ಸಹಕಾರಿಗಳ ಹಿತಕಾಯುವುದರೊಂದಿಗೆ ಸಹಕಾರಿಗಳಿಗೆ ನೆರವಾಗುವ ಕಾರ್ಯಕ್ರಮ ರೂಪಿಸಿ ತಮ್ಮ ಸಂಸ್ಥೆಗೆ ಒಳ್ಳೆ ಹೆಸರು ತರುವಂತೆ ಸಲಹೆ ನೀಡಿದರು.

ಮೈಮುಲ್ ನಿರ್ದೇಶಕ ಕೆ.ಉಮಾಶಂಕರ್ ಮಾತನಾಡಿ, ಸಹಕಾರ ಸಂಸ್ಥೆಗಳ ಏಳಿಗಾಗಿ ಪೂರಕವಾದ ಕಾರ್ಯಕ್ರಮಗಳನ್ನು ಸಿಬ್ಬಂದಿಗಳಿಗಾಗಿ ಆಯೋಜಿಸುತ್ತಾ ಬರಲಾಗಿದೆ. ಕಾಲಕಾಲಕ್ಕೆ ನಡೆಯುವ ಯಾವುದೇ ತರಬೇತಿ, ಕಾರ್ಯಾಗಾರದಲ್ಲಿ ಪಾಲ್ಗೊಂಡ ಅಧಿಕಾರಿಗಳು, ಅದರಲ್ಲಿ ಕಲಿತದ್ದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂಪನ್ಮೂಲ ವ್ಯಕ್ತಿಗಳು ನೀಡುವ ಮಾರ್ಗದರ್ಶನ ಕಾರ್ಯಗತಗೊಳಿಸಬೇಕು ಎಂದರು.

ಕಾರ್ಯಾಗಾರದಲ್ಲಿ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಉಪಾಧ್ಯಕ್ಷ ಬಿ.ಎನ್. ದಯಾನಂದ, ನಿರ್ದೇಶಕ ಕೆ.ಈರೇಗೌಡ, ಮೈಮುಲ್ ನಿರ್ದೇಶಕರಾದ ಲೀಲಾ ಬಿ.ಕೆ. ನಾಗರಾಜು, ಎಸ್.ಸಿ.ಅಶೋಕ್ ಹಾಗೂ ವಿವಿಧ ಸಹಕಾರ ಸಂಘಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ವಿಜೃಂಭಣೆಯ ಶ್ರೀಚಿಕ್ಕಮ್ಮತಾಯಿ, ಶ್ರೀದೊಡ್ಡಮ್ಮತಾಯಿ ಜಾತ್ರೆ





ತಿ.ನರಸೀಪುರ, ಮಾ.29(ಎಸ್‌ಕೆ)– ಪಟ್ಟಣದ ಗ್ರಾಮದೇವತೆ ಶ್ರೀಚಿಕ್ಕಮ್ಮತಾಯಿ ಹಾಗೂ ಶ್ರೀದೊಡ್ಡಮ್ಮತಾಯಿ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಕಳೆದ 3 ವಾರದಿಂದ ದೇವರನ್ನು ಕರೆಸಿ ಪಟ್ಟಣದ ಪ್ರತಿ ಬೀದಿಯಲ್ಲಿ ಮೆರವಣಿಗೆ ಮಾಡುವ ಮೂಲಕ ಪೂಜೆ ಸಲ್ಲಿಸಲಾಗಿತ್ತು. 4ನೇ ವಾರ ದೇವಾಲಯದಲ್ಲೇ ಪೂಜೆ ಸಲ್ಲಿಸಿದ ನಂತರ ಐದನೇ ವಾರದ ಮಂಗಳವಾರ (ಇಂದು) ಬೆಳಗ್ಗೆ ದೇವಾಲಯದಲ್ಲಿ ಶ್ರೀಚಿಕ್ಕಮ್ಮ ತಾಯಿ ಮತ್ತು ಶ್ರೀದೊಡ್ಡಮ್ಮತಾಯಿಗೆ ವಿಶೇಷ ಪೂಜೆಯೊಂದಿಗೆ ಅಭಿಷೇಕ ಸಲ್ಲಿಸಲಾಯಿತು. ಭಕ್ತರು ಸರದಿ ಸಾಲಿನಲ್ಲಿ ಕುಟುಂಬ ಸಮೇತರಾಗಿ ಆಗಮಿಸಿ ಗ್ರಾಮ ದೇವತೆಗೆ ಪೂಜೆ ಸಲ್ಲಿಸಿದರು. ನಂತರ ದೇವಸ್ಥಾನದ ಮುಂಭಾಗವಿರುವ ಹಳೇ ಸಂತೆ ಮಾಳ, ತೋಟಗೇರಿ ಮಾರಮ್ಮ ದೇವಸ್ಥಾನ, ಸರ್ಕಾರಿ ಪದವಿ ಕಾಲೇಜು ಮೈದಾನ, ಸರ್ಕಾರಿ ಪದವಿಪೂರ್ವ ಕಾಲೇಜು ಮೈದಾನ, ಅಗ್ನಿಶಾಮಕ ದಳ ಮೈದಾನ ಹಾಗೂ ಸುತ್ತಮುತ್ತಲಿನ ಜಮೀನುಗಳಲ್ಲಿ ಶಾಮಿಯಾನ ಹಾಕುವ ಮೂಲಕ ಮಾಂಸಾಹಾರ ತಯಾರಿಸಿದ್ದರು. ವೀರಶೈವ ಜನಾಂಗದವರು ಶಾಂತರಾಜು ರೈಸ್‌ಮಿಲ್ ಮುಂಭಾಗ ಹಾಗೂ ಆರ್ಯ ವೈಶ್ಯ ಸಮಾಜದವರು ಪಿಎಸ್‌ಆರ್ ರೈಸ್ ಮಿಲ್ ಆವರಣದಲ್ಲಿ ಸಸ್ಯಾಹಾರ ಖಾದ್ಯ ತಯಾರಿಸಿದ್ದರು. ಬಳಿಕ ಶ್ರೀಗುಂಜಾ ನರಸಿಂಹಸ್ವಾಮಿ ದೇವಾಲಯದಿಂದ ಪ್ರಸಾದ ತಂದು ದೇವಿಗೆ ನೈವೇದ್ಯ ಮಾಡಲಾಯಿತು. ಬಳಿಕ ಪಟ್ಟಣದ ಎಲ್ಲಾ ಜನಾಂಗದವರು ಸಸ್ಯಾಹಾರ ಹಾಗೂ ಮಾಂಸಾಹಾರ ಖಾದ್ಯಗಳನ್ನು ದೇವಸ್ಥಾನದ ಮುಂದಿನ ಆವರಣದಲ್ಲಿ ಹಾಕಿರುವ ರಾಶಿಗೆ ನೀಡುವ ಮೂಲಕ ದೇವರಿಗೆ ಎಡೆ ಅರ್ಪಿಸಿ, ಪೂಜೆ ಸಲ್ಲಿಸಿದರು. ನಂತರ ಜಾತ್ರೆಗೆ ಆಗಮಿಸುವ ನೆಂಟರಿಗೆ ಊಟ ಉಣಬಡಿಸಿದರು. ಜಾತ್ರೆ ಹಿನ್ನೆಲೆಯಲ್ಲಿ ದೇವಸ್ಥಾನವನ್ನು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕಾರ ಮಾಡಲಾಗಿತ್ತು. ಜಾತ್ರೆಯಲ್ಲಿ ಲಕ್ಷಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಅಂಗಡಿ ಮುಂಗಟ್ಟು ಬಂದ್

3 ವರ್ಷಕ್ಕೊಮ್ಮೆ ನಡೆಯುವ ಹಬ್ಬವನ್ನು ಇಡೀ ಪಟ್ಟಣದ ಜನರು ಸಂಭ್ರಮದಿಂದ ಆಚರಣೆ ಮಾಡುವುದರಿಂದ ಬಹುತೇಕ ಎಲ್ಲಾ ಅಂಗಡಿ–ಮುಂಗಟ್ಟುಗಳು ಬಂದ್ ಆಗಿದ್ದವು.

ಜಾತ್ರೆಯಲ್ಲಿ ಪ್ರತಿಯೊಬ್ಬರೂ ನೀಡುವ ಎಡೆ ಅನ್ನ ಹಾಗೂ ಸಾಂಬಾರನ್ನು ರಾಶಿ ಹಾಕಲಾಗುತ್ತದೆ. ದೇವಸ್ಥಾನದ ಸುತ್ತ ಪೂಜೆ ಸಲ್ಲಿಸಿದ ಬಳಿಕ ಸಂಜೆ ಬೀದಿಗಳಲ್ಲಿ ಪೀಡೆ ಮರಿ ಎಳೆದ ನಂತರ ಮನೆಗೆ ವಾಪಸ್ ಆಗಬೇಕೆಂದು ಧ್ವನಿವರ್ಧಕ ಮೂಲಕ ಹೇಳಿದಾಗ ಎಲ್ಲರೂ ಪಟ್ಟಣ ಪ್ರವೇಶ ಮಾಡುತ್ತಾರೆ. ಅನಂತರ ಆಹಾರದ ರಾಶಿಗೆ ಪೂಜೆ ಸಲ್ಲಿಸಲಾಗುತ್ತದೆ. ಸಂಜೆ ಎಲ್ಲವನ್ನೂ ಬುತ್ತಿ ಕಟ್ಟಿ ಚೌಹಳ್ಳಿ ಗೇಟ್ ಬಳಿಯ ದೇವರ ಕಲ್ಲಿನ ಬಳಿ ಆಹಾರ ರಾಶಿ ಹಾಕಿ ದೀಪ ಹಚ್ಚಿ ಪೂಜೆ ಸಲ್ಲಿಸಿ ಯಜಮಾನರು ವಾಪಸ್ ಬರುತ್ತಾರೆ. ಇದನ್ನು ಸ್ವೀಕರಿಸುವ ತಾಯಿ ಸಂತೃಪ್ತರಾಗುತ್ತಾರೆ ಎಂಬ ನಂಬಿಕೆ ಇದೆ.

ಪಟ್ಟಣದ ಗ್ರಾಮದೇವತೆ ಚಿಕ್ಕಮ್ಮತಾಯಿ ಹಾಗೂ ದೊಡ್ಡಮ್ಮತಾಯಿ ಸಹೋದರಿಯರ ದೇವಸ್ಥಾನ ಹಳೇ ಸಂತೆ ಮಾಳದ ಸಮೀಪವಿದೆ. ಕಾಲರಾ, ವಾಂತಿ–ಭೇದಿ ಸೇರಿದಂತೆ ಸಾಂಕ್ರಾಮಿಕ ರೋಗ ಬಾರದಂತೆ ತಡೆಯಲು ಈ ಜಾತ್ರೆಯನ್ನು ಹಿಂದಿನಿಂದಲೂ ನಡೆಸಿಕೊಂಡು ಬರಲಾಗುತ್ತಿತ್ತು. ಕೆಲ ವರ್ಷಗಳ ಹಿಂದೆ ಹಬ್ಬ ನಿಲ್ಲಿಸಲಾಗಿತ್ತು. ಈ ವರ್ಷ ಪುನರಾರಂಭಗೊಳಿಸಲಾಗಿದೆ.

ಬನ್ನೂರು: ಸಮರ್ಪಕ ವಿದ್ಯುತ್ ಪೂರೈಕೆಗೆ ಒತ್ತಾಯಿಸಿ ಪ್ರತಿಭಟನೆ



ಬನ್ನೂರು, ಮಾ.29– ಸಮರ್ಪಕ ವಿದ್ಯುತ್ ಪೂರೈಕೆಗೆ ಒತ್ತಾಯಿಸಿ ರೈತ ಸಂಘದಿಂದ ಪಟ್ಟಣದಲ್ಲಿ ಪ್ರತಿಭಟನೆ ನಡೆಸಲಾಯಿತು.ಪಟ್ಟಣದ ಎಂ.ಎಂ.ರಸ್ತೆ ಕನ್ನಡಾಂಬೆ ಧ್ವಜ ಸ್ತಂಭದ ಬಳಿ ಜಮಾಯಿಸಿದ ರೈತರು ಚೆಸ್ಕಾಂ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಅಲ್ಲಿಂದ ಮೆರವಣಿಗೆಯಲ್ಲಿ ಚೆಸ್ಕಾಂ ಕಚೇರಿಗೆ ತೆರಳಿ ಪ್ರತಿಭಟನೆ ನಡೆಸಿದರು.

ಹೋಬಳಿ ಅಧ್ಯಕ್ಷ ಹುಚ್ಚೇಗೌಡ ಮಾತನಾಡಿ, ಜಮೀನಿನಲ್ಲಿ ನಾವು ಕೃಷಿ ಚಟುವಟಿಕೆ ನಡೆಸಲು ಹಗಲು ವೇಳೆ ಪಂಪ್‌ಸೆಟ್‌ಗಳಿಗೆ 7 ಗಂಟೆಗಳ ಕಾಲ ವಿದ್ಯುತ್ ನೀಡಬೇಕು. ಈ ಹಿಂದೆ ಕುಟೀರ, ಭಾಗ್ಯ ಜ್ಯೋತಿ ಸೇರಿದಂತೆ ಹಲವು ಯೋಜನೆಗಳಿಂದ ವಿದ್ಯುತ್ ಪಡೆದವರಿಂದ ಇಂದು ಚೆಸ್ಕಾಂನವರು ಹಣ ವಸೂಲಿ ಮಾಡುತ್ತಿದ್ದಾರೆ ಎಂದು ಆರೋಪಿಸಿದ ಅವರು, ರೈತರಿಗೆ ಅನ್ಯಾಯವಾಗದಂತೆ ಹಗಲಿನಲ್ಲಿ ಸಮರ್ಪಕವಾಗಿ ವಿದ್ಯುತ್ ಸರಬರಾಜು ಮಾಡಬೇಕು. ಇಲ್ಲದಿದ್ದರೆ ಉಗ್ರ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿ ಮನವಿ ಪತ್ರ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ಹೋಬಳಿ ಮಟ್ಟದ ಉಪಾಧ್ಯಕ್ಷ ಮಹೇಶ್, ಮಹೇಶ್, ರಾಮಚಂದ್ರು, ಕಿರಣ್, ಮಹದೇವು, ಶಂಕರೇಗೌಡ, ಜಯರಾಮು, ನಂದೀಶ್, ತಾಲೂಕು ಅಧ್ಯಕ್ಷ ಕುಮಾರಸ್ವಾಮಿ, ಶಿವನಂಜು, ದಿನೇಶ್, ನಾಗೇಂದ್ರ ಇತರರಿದ್ದರು.

ಕೆ.ಆರ್.ನಗರ ಪುರಸಭೆಗೆ ಸೌಮ್ಯ ಪ್ರಭಾರ ಅಧ್ಯಕ್ಷೆ



ಕೆ.ಆರ್.ನಗರ, ಮಾ.29 (ಕೆಟಿಆರ್)– ಪುರಸಭೆ ಪ್ರಭಾರ ಅಧ್ಯಕ್ಷರಾಗಿ ಉಪಾಧ್ಯಕ್ಷೆ ಸೌಮ್ಯ ಮುಖ್ಯಾಧಿಕಾರಿ ಡಿ.ಪುಟ್ಟರಾಜು ಅವರಿಂದ ಅಧಿಕಾರ ಸ್ವೀಕರಿಸಿದರು.

ಅಧ್ಯಕ್ಷರಾಗಿದ್ದ ಕೆ.ಜಿ.ಸುಬ್ರಮಣ್ಯ ರಾಜೀನಾಮೆ ನೀಡಿದ್ದರಿಂದ ಪ್ರಭಾರ ಅಧ್ಯಕ್ಷೆಯಾಗಿ ಅಧಿಕಾರ ಸ್ವೀಕರಿಸಿದರು. ಪುರಸಭೆಯ ಅಧ್ಯಕ್ಷ ಸ್ಥಾನ ಸಾಮಾನ್ಯ ವರ್ಗಕ್ಕೆ, ಉಪಾಧ್ಯಕ್ಷ ಸ್ಥಾನ ಪರಿಶಿಷ್ಟ ಜಾತಿ ಮಹಿಳೆಗೆ ಮೀಸಲಾಗಿದ್ದು, 14 ಮಂದಿ ಸದಸ್ಯ ಬಲವುಳ್ಳ ಕಾಂಗ್ರೆಸ್ ಪಕ್ಷದಿಂದ ಮೊದಲ ಅವಧಿಗೆ ಕೆ.ಜಿ. ಸುಬ್ರಮಣ್ಯ ಅಧ್ಯಕ್ಷರಾಗಿ ಹಾಗೂ ಪರಿಶಿಷ್ಟ ಜಾತಿಯ ಮಹಿಳೆ ಕಾಂಗ್ರೆಸ್ ನಿಂದ ಸೌಮ ಚುನಾಯಿತರಾಗಿದ್ದರು.

ಪಕ್ಷದಲ್ಲಿ ಆದ ಆಂತರಿಕ ತೀರ್ಮಾನದಂತೆ ಮತ್ತೊಬ್ಬ ಸದಸ್ಯರಿಗೆ ಅಧ್ಯಕ್ಷಗಿರಿಯ ಅವಕಾಶ ನೀಡುವ ಉದ್ದೇಶದಿಂದ ಕೆ.ಜಿ. ಸುಬ್ರಮಣ್ಯ ಅವರು ಕಳೆದ ವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ ಹಿನ್ನೆಲೆಯಲ್ಲಿ ಉಪಾಧ್ಯಕ್ಷರು ಪ್ರಭಾರ ಅಧ್ಯಕ್ಷರಾದರು. ಮುಖ್ಯಾಧಿಕಾರಿ ಡಿ.ಪುಟ್ಟರಾಜು, ಸದಸ್ಯರಾದ ಜಾವಿದ್ ಪಾಷ, ಸೈಯದ್ ಸಿದ್ದಿಕ್, ಮಿಕ್ಸರ್ ಶಂಕರ್, ಮಾಜಿ ಸದಸ್ಯ ಮಹದೇವ್, ಮುಖಂಡರಾದ ಚಿಕ್ಕವೀರು, ವೃಷಭೇಂದ್ರಪ್ಪ, ಪುಟ್ಟರಾಜು, ಆನಂದ್, ನವೀದ್, ನಾಗೇಶ್ ಹಾಜರಿದ್ದರು.



ನಂಜನಗೂಡು ತಾಲೂಕು ಹೆಡತಲೆ ಗ್ರಾಮದ ಲಕ್ಷ್ಮೀಕಾಂತಸ್ವಾಮಿ ರಥೋತ್ಸವ ಪ್ರಮುಖ ಬೀದಿಗಳಲ್ಲಿ ವಿಜೃಂಭಣೆಯಿಂದ ನಡೆಯಿತು.

ಕೋಟೆಯಲ್ಲಿ ಅದ್ಧೂರಿ ಅಂಬೇಡ್ಕರ್, ಬಾಬೂಜಿ ಜಯಂತಿಗೆ ನಿರ್ಧಾರ



ಹೆಚ್.ಡಿ.ಕೋಟೆ, ಮಾ.29(ಮಂಜು)– ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಂ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲು ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ತೀರ್ಮಾನಿಸಲಾಯಿತು.

ಪಟ್ಟಣದ ಮಿನಿ ವಿಧಾನಸೌಧದ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಏ.14ರಂದು ಡಾ.ಬಿ.ಆರ್.ಅಂಬೇಡ್ಕರ್ ಹಾಗೂ ಏ.5ರಂದು ಡಾ.ಬಾಬು ಜಗಜೀವನ್ ರಾಂ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಯಿತು.

ಆದಿ ಕರ್ನಾಟಕ ಮಹಾಸಭಾ ತಾಲೂಕು ಅಧ್ಯಕ್ಷ ಶಿವಣ್ಣ ಮಾತನಾಡಿ, ಕಳೆದ ನಾಲ್ಕೈದು ವರ್ಷಗಳಿಂದ ಅಂಬೇಡ್ಕರ್ ಹಾಗೂ ಬಾಬು ಜಗಜೀವನ್ ರಾಂ ಜಯಂತಿಯನ್ನು ಚುನಾವಣಾ ನೀತಿ ಸಂಹಿತೆ ಹಾಗೂ ಕೊರೊನಾ ಕಾರಣದಿಂದ ಅದ್ಧೂರಿಯಾಗಿ ಆಚರಿಸಲು ಸಾಧ್ಯವಾಗಿಲ್ಲ. ಹಾಗಾಗಿ ರಾಷ್ಟ್ರ ನಾಯಕರ ತತ್ವ, ಸಿದ್ಧಾಂತ ವಿಚಾರಧಾರೆಗಳನ್ನು ಜನರಿಗೆ ತಿಳಿಸಬೇಕಾಗಿದೆ. ತಾಲೂಕು ಆಡಳಿತ ಸರ್ಕಾರದ ನಿಯಮದಂತೆ ಆಯಾ ದಿನದಂದು ಆಚರಿಸುವಂತೆ ತಿಳಿಸಿದರು.

ಸಮಾಜದಿಂದ ಬೇರೆ ದಿನದಂದು ಅದ್ಧೂರಿ ಮೆರವಣಿಗೆ ಹಾಗೂ ವೇದಿಕೆ ಕಾರ್ಯಕ್ರಮ ನಡೆಸಲು ಸಭೆ ಕರೆದು ತೀರ್ಮಾನಿಸಲಾಗುತ್ತದೆ. ಈ ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ಇಲಾಖೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸಹಕಾರ ನೀಡಬೇಕು ಎಂದು ಕೋರಿದರು.

ಬಾಬು ಜಗಜೀವನ್ ರಾಂ ವಿಚಾರ ವೇದಿಕೆ ತಾಲೂಕು ಅಧ್ಯಕ್ಷ ಪಿ.ನಾಗರಾಜು ಮಾತನಾಡಿ, ಬಾಬು ಜಗಜೀವನ್ ರಾಂ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲು ಕಾಲಾವಕಾಶ ಕಡಿಮೆ ಇರುವುದರಿಂದ ಬೇರೆ ದಿನ ಆಚರಿಸಲು ಸಮಾಜದ ಮುಖಂಡರ ಜೊತೆ ಸಮಾಲೋಚನೆ ನಡೆಸಿ ದಿನಾಂಕ ನಿಗದಿ ಪಡಿಸಲಾಗುವುದು ಎಂದರು.

ಸಭೆಯಲ್ಲಿ ತಹಸೀಲ್ದಾರ್ ರತ್ನಾಂಬಿಕೆ, ಇಓ ರಾಜೇಶ್ ಜೆರಾಲ್ಡ್, ಗ್ರೇಡ್–2 ತಹಸೀಲ್ದಾರ್ ಸಣ್ಣರಾಮಪ್ಪ, ಸಮಾಜ ಕಲ್ಯಾಣ ಅಧಿಕಾರಿ ರಾಮಸ್ವಾಮಿ, ಪುರಸಭಾ ಮುಖ್ಯಾಧಿಕಾರಿ ಎಂ.ವಿ.ಸಾಗರ್, ಅಬಕಾರಿ ಅಧಿಕಾರಿ ಗೀತಾ, ಎಇಇಗಳಾದ ರಾಜಯ್ಯ, ಕಾಂತರಾಜು, ಗೋವಿಂದ ನಾಯಕ, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ನಾರಾಯಣಸ್ವಾಮಿ, ಮುಖಂಡರಾದ ಜೀವಿಕ ಬಸವರಾಜು, ಪರಶಿವಮೂರ್ತಿ, ಶಿವರಾಜು, ಮುದ್ದಮಲ್ಲಯ್ಯ, ಚಾ.ಶಿವಕುಮಾರ್, ಸೋಮೇಶ್, ನಾಗರಾಜು, ಎಂ.ಡಿ.ಮಂಚಯ್ಯ, ಶಿವಯ್ಯ, ಉಮೇಶ್, ನಾಗರಾಜು, ಸಿದ್ದರಾಜು, ಚಾಮರಾಜು ಇತರರಿದ್ದರು.

ಹುಣಸೂರು : 3758 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರು



ಹುಣಸೂರು, ಮಾ.29(ಕೆಕೆ)– ಕೊರೊನಾ ಸಂಕಷ್ಟದ ಪರಿಸ್ಥಿತಿಯಲ್ಲಿ ಕಳೆದ ಎರಡು ವರ್ಷಗಳಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಸರಿಯಾದ ರೀತಿಯಲ್ಲಿ ಮಾಡಲು ಸಾಧ್ಯವಾಗಿರಲಿಲ್ಲ. ಈ ಬಾರಿ ರಾಜ್ಯದಲ್ಲೇ ಉತ್ತಮ ವ್ಯವಸ್ಥೆ ಮಾಡಲಾಗಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಗಿರೀಶ್ ತಿಳಿಸಿದರು.

ನಗರದ ಶಾಸ್ತ್ರಿ ವಿದ್ಯಾಸಂಸ್ಥೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೊದಲ ದಿನ ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳಿಗೆ ಗುಲಾಬಿ ಹೂ ನೀಡಿ ಧೈರ್ಯ ತುಂಬುವ ಮೂಲಕ ವಿದ್ಯಾರ್ಥಿಗಳನ್ನು ಸ್ವಾಗತಿಸಿ ಮಾತನಾಡಿದ ಅವರು, ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಈ ಬಾರಿ ಉತ್ತಮ ಪ್ರತಿಕ್ರಿಯೆ ಇದ್ದು ರಾಜ್ಯದಲ್ಲೇ ಈ ಬಾರಿಯ ಪರೀಕ್ಷೆಗಾಗಿ ಉತ್ತಮ ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳು ಈ ಬಾರಿ ಉತ್ಸುಕತೆಯಲ್ಲಿ ಪರೀಕ್ಷೆಗೆ ಹಾಜರಾಗುತ್ತಿದ್ದಾರೆ. ಪೋಷಕರು ಸಹ ಮಕ್ಕಳಲ್ಲಿ ಧೈರ್ಯ ತುಂಬಿ ಪರೀಕ್ಷೆಗೆ ಕಳುಹಿಸುತ್ತಿದ್ದಾರೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜು ಮಾತನಾಡಿ, ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಎಲ್ಲಾ ರೀತಿಯ ವ್ಯವಸ್ಥೆಗಳನ್ನು ಮಾಡಲಾಗಿದೆ. ಈ ಬಾರಿ 2004 ಬಾಲಕಿಯರು, 1980 ಬಾಲಕರು ಸೇರಿದಂತೆ ಒಟ್ಟು 3984 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ತಾಲೂಕಿನಲ್ಲಿ ಒಟ್ಟು 14 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಈ ಬಾರಿ 3818 ಹೊಸ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದು ಖಾಸಗಿಯಾಗಿ 144 ವಿದ್ಯಾರ್ಥಿಗಳು ಪುನರಾವರ್ತಿತ 14 ವಿದ್ಯಾರ್ಥಿಗಳು ಹಾಗೂ ಖಾಸಗಿಯಾಗಿ ಪುನರಾವರ್ತಿತ 8 ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 3984 ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಂಡಿದ್ದಾರೆ. ಈ ಪೈಕಿ ನಗರ ಪ್ರದೇಶದಿಂದ 1248 ವಿದ್ಯಾರ್ಥಿಗಳು ಗ್ರಾಮೀಣ ಭಾಗದಿಂದ 2570 ವಿದ್ಯಾರ್ಥಿಗಳು ಹಾಗೂ 152 ಖಾಸಗಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಲಿದ್ದಾರೆ ಎಂದರು.

ಈ ವೇಳೆ ಕ್ಷೇತ್ರ ಸಮನ್ವಯಾಧಿಕಾರಿ ಸಂತೋಷ್ ಕುಮಾರ್, ಉಪತಹಸೀಲ್ದಾರ್ ಸಕೀಲಾ, ಶಾಸ್ತ್ರಿ ವಿದ್ಯಾಸಂಸ್ಥೆಯ ಮುಖ್ಯಸ್ಥೆ ರಾಧ ಕೃಷ್ಣ, ಎಸ್‌ಎಸ್‌ಎಲ್‌ಸಿ ನೋಡಲ್ ಅಧಿಕಾರಿ ಕುಮಾರಸ್ವಾಮಿ, ಬಿ.ಆರ್.ಪಿ .ನಾಗರಾಜು, ಹೇಮಂತ್ ಉಪಸ್ಥಿತರಿದ್ದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಮೊದಲ ದಿನ ಕನ್ನಡ ಭಾಷೆ ಪರೀಕ್ಷೆಗೆ ತಾಲೂಕಿನ 14 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 3819 ವಿದ್ಯಾರ್ಥಿಗಳ ಪೈಕಿ 26 ಬಾಲಕರು ಮತ್ತು 33 ಬಾಲಕಿಯರು ಸೇರಿದಂತೆ ಒಟ್ಟು 59 ವಿದ್ಯಾರ್ಥಿಗಳು ಪರೀಕ್ಷೆಗೆ ಗೈರಾಗಿದ್ದು ಉಳಿದ 3758 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

ತಾಲೂಕಿನ 14 ಪರೀಕ್ಷಾ ಕೇಂದ್ರಗಳಲ್ಲಿ ಶಾಂತಿಯುತವಾಗಿ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ನಾಗರಾಜು ಪತ್ರಿಕೆಗೆ ತಿಳಿಸಿದರು.

ಮೈಸೂರು: ಒಬ್ಬರಿಗೆ ಕೊರೊನಾ

ಮೈಸೂರು, ಮಾ.29(ಜಿಎ)– ಮೈಸೂರು ಜಿಲ್ಲೆಯಲ್ಲಿ ಮಂಗಳವಾರ ಒಬ್ಬರಿಗೆ ಕೊರೊನಾ ಸೋಂಕು ಕಾಣಿಸಿಕೊಂಡಿದ್ದು, ಇಂದು ಒಬ್ಬರು ಆಸ್ಪತ್ರೆಯಿಂದ ಗುಣಮುಖರಾಗಿ ಬಿಡುಗಡೆ ಹೊಂದಿದ್ದಾರೆ. ಜಿಲ್ಲೆಯಲ್ಲಿ ಇದುವರೆಗೆ 2,29,455 ಮಂದಿಗೆ ಸೋಂಕು ತಗುಲಿದ್ದು, 2,26,889 ಮಂದಿ ಗುಣಮುಖರಾಗಿದ್ದಾರೆ ಜಿಲ್ಲೆಯಲ್ಲಿ ಪ್ರಸ್ತುತ 8 ಸಕ್ರಿಯ ಪ್ರಕರಣಗಳಿವೆ ಇದುವರೆಗೆ 2,558 ಮಂದಿ ಸಾವನ್ನಪ್ಪಿದ್ದಾರೆ

ದೇವಸ್ಥಾನಗಳು ಧರ್ಮದ ಶಕ್ತಿ ಕೇಂದ್ರಗಳು

ಮನುಗನಹಳ್ಳಿಯಲ್ಲಿ ಧಾರ್ಮಿಕ ಸಮಾರಂಭ ಉದ್ಘಾಟಿಸಿದ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ



ಸರಗೂರು, ಮಾ.29(ನಾಗೇಶ್)– ದೇವಸ್ಥಾನಗಳು ಧರ್ಮದ ಶಕ್ತಿ ಕೇಂದ್ರಗಳಾಗಿದ್ದು, ಅವುಗಳ ಪಾವಿತ್ರ್ಯತೆ ಪಡೆದು ಬದುಕು ಕಟ್ಟಿಕೊಳ್ಳಬೇಕು ಎಂದು ಶಾಸಕರೂ ಆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಈಶ್ವರ ಖಂಡ್ರೆ ತಿಳಿಸಿದರು.

ತಾಲೂಕಿನ ಮನುಗನಹಳ್ಳಿಯಲ್ಲಿ ಬಸವೇಶ್ವರ ದೇವಸ್ಥಾನದ ನೂತನ ಕಟ್ಟಡದ ಉದ್ಘಾಟನೆ, ಬಸವ ಮೂರ್ತಿ ಪ್ರತಿಷ್ಠಾಪನೆ, ನೂತನ ಗೋಪುರ ಕಲಶಾರೋಹಣ, ಧಾರ್ಮಿಕ ಸಮಾರಂಭದಲ್ಲಿ ಅವರು ಮಾತನಾಡಿದರು.

ಇಂದಿನ ವಿದ್ಯಮಾನದಲ್ಲಿ ಸಮಾಜವನ್ನು ಗಟ್ಟಿಗೊಳಿಸುವ ಕೆಲಸವಾಗಬೇಕು. ಬಸವಾದಿ ಶರಣರ ಆದರ್ಶಗಳನ್ನು ಎಲ್ಲರೂ ಮೈಗೂಡಿಸಿಕೊಳ್ಳಬೇಕು. ದೇವಸ್ಥಾನಗಳು ಸಂಸ್ಕೃತಿಯ ಪ್ರತೀಕವಾಗಿದ್ದು, ಅವುಗಳನ್ನು ಉಳಿಸಿ, ಬೆಳೆಸಬೇಕು ಎಂದರು.

ದೇವಸ್ಥಾನಗಳು ಭಗವಂತನ ಇರುವಿಕೆಯನ್ನು ಸಾಮಾನ್ಯ ಜನತೆಗೆ ಅರಿವು ಮಾಡಲು ಇರುವ ಕೇಂದ್ರ ಸ್ಥಾನಗಳು. ಬಸವಣ್ಣನವರು ತಮ್ಮ ವಚನಗಳಲ್ಲಿ ಧಾರ್ಮಿಕ ಹಿನ್ನೆಲೆ ಕುರಿತು ಬಹಳಷ್ಟು ಸವಿಸ್ತಾರವಾಗಿ ವಿವರಿಸಿದ್ದಾರೆ. ಜಗತ್ತಿನ ಯಾವುದೇ ಶಿವನ ದೇವಾಲಯಗಳಲ್ಲಿ ಶಿವನ ಅಭಿಮುಖವಾಗಿ ನಂದಿಯನ್ನು ಪ್ರತಿಷ್ಠಾಪಿಸಲಾಗಿರುತ್ತದೆ. ನಂದಿ ಬಸವನಿಗೆ ಹೆಚ್ಚು ಪೂಜ್ಯ ಸ್ಥಾನವನ್ನು ಭಕ್ತರು ನೀಡುತ್ತಾರೆ. ಭಗವಂತ ಎಲ್ಲವನ್ನೂ ಸೃಷ್ಟಿಸಿದ್ದಾನೆ. ಹೀಗಾಗಿ ಎಲ್ಲರೂ ಭಗವಂತನನ್ನು ಪೂಜಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಸಮಾರಂಭವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು. ದೇವನೂರು ಮಠದ ಮಹಾಂತ ಸ್ವಾಮೀಜಿ, ಕನಕಪುರ ಮಠದ ಮುಮ್ಮಡಿ ನಿರ್ವಾಣ ಮಹಾ ಸ್ವಾಮೀಜಿ, ಕುದೇರು ಮಠದ ಇಮ್ಮಡಿ ಗುರುಲಿಂಗಸ್ವಾಮೀಜಿ, ಸಂಗಮ ಮಠದ ಮಹೇಶ್ವರಸ್ವಾಮೀಜಿ, ಕಂತೆ ಮಹದೇಶ್ವರ ಬೆಟ್ಟ ಮಹಾಂತದೇಶಿಕೇಂದ್ರ ಸ್ವಾಮೀಜಿ, ಹಂಚೀಪುರ ಮಠದ ಚನ್ನಬಸವಸ್ವಾಮೀಜಿ, ದಡದಹಳ್ಳಿ ಮಠದ ಷಡಕ್ಷರಿಸ್ವಾಮೀಜಿ, ಬಿಡುಗಲು ಪಡುವಲು ವಿರಕ್ತಮಠದ ಮಹದೇವಸ್ವಾಮೀಜಿ, ಪುರ ಮಠದ ಚಂದ್ರಶೇಖರ ಸ್ವಾಮೀಜಿ, ಮಾದಾಪುರ ಮಠದ ಮಲ್ಲಿಕಾರ್ಜುನ ಸ್ವಾಮೀಜಿ, ಬೀಚನಹಳ್ಳಿ ಮಠದ ನಾಗೇಂದ್ರಸ್ವಾಮೀಜಿ, ಜಕ್ಕಹಳ್ಳಿ ಮಠದ ನಂದೀಶಸ್ವಾಮೀಜಿ, ತೋಂಟದಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು.

ಶಾಸಕ ಅನಿಲ್ ಚಿಕ್ಕಮಾದು ಮಾತನಾಡಿದರು. ಅರಣ್ಯ ವಸತಿ ಮತ್ತು ವಿಹಾರಧಾಮಗಳ ನಿಗಮದ ಅಧ್ಯಕ್ಷ ಎಂ.ಅಪ್ಪಣ್ಣ, ಜೆಡಿಎಸ್ ಯುವ ಮುಖಂಡ ಜಯಪ್ರಕಾಶ್, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಶಿವಮೂರ್ತಿ, ತಾಲೂಕು ಘಟಕದ ಅಧ್ಯಕ್ಷ ಡಿ.ಜಿ.ಶಿವರಾಜಪ್ಪ, ಬಸವರಾಜಪ್ಪ, ಬಿಜೆಪಿ ಮುಳ್ಳೂರು ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಎಂ.ಪಿ.ಮಂಜುನಾಥ್, ಬಿಜೆಪಿ ಮುಖಂಡರಾದ ಎಂ.ಎಸ್.ನಂಜಪ್ಪ, ಎಂ.ಶಿವಣ್ಣ, ವೀರಭದ್ರಪ್ಪ, ಎಂ.ಜಿ. ಸೋಮಶೇಖರ್, ಮಹದೇವಸ್ವಾಮಿ, ಎಂ.ಗುರುಸ್ವಾಮಿ, ಬಿ.ರಾಜಪ್ಪ, ಪರಶಿವಮೂರ್ತಿ, ತಿಮ್ಮಯ್ಯ, ಕಾರ್ಯದರ್ಶಿ ನಂದೀಶ್, ಗ್ರಾಪಂ ಅಧ್ಯಕ್ಷೆ ಕೆ.ಪಿ.ಶೀಲಾ, ಉಪಾಧ್ಯಕ್ಷ ನಟರಾಜು, ಸದಸ್ಯರಾದ ಮಹೇಶ್, ತಾಪಂ ಮಾಜಿ ಅಧ್ಯಕ್ಷೆ ಭಾರತಿ, ಬಸವೇಶ್ವರ ಯುವಕ ಸಂಘದ ಸದಸ್ಯರು ಸೇರಿದಂತೆ ಇನ್ನಿತರರಿದ್ದರು.

ಇದಕ್ಕೂ ಮುನ್ನ ನೂತನ ದೇವಸ್ಥಾನದಲ್ಲಿ ಗಣಪತಿ ಹೋಮ, ಕಳಶ ಸ್ಥಾಪನೆ, ಬಸವ ಶಿಲಾ ಪ್ರತಿಷ್ಠಾಪನೆ ಕಳಾನ್ಯಾಸ, ದೇವಸ್ಥಾನದಲ್ಲಿ ಶಿಖರ ಕಳಸಾರೋಹಣ, ಕದಳಿ ಛೇದನ, ಕುಂಭಾಭಿಷೇಕ ಕಾರ್ಯಕ್ರಮ ಜರುಗಿತು. ನಂತರ ಅನ್ನಸಂತರ್ಪಣೆ ನಡೆಯಿತು.

ದೇಶ ವಿದೇಶ

50 ವರ್ಷಗಳ ಅಸ್ಸಾಂ–ಮೇಘಾಲಯ ಗಡಿವಿವಾದ ಅಂತ್ಯ

ನವದೆಹಲಿ, ಮಾ.29– ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಮತ್ತು ಮೇಘಾಲಯ ಮುಖ್ಯಮಂತ್ರಿ ಕಾನ್ರಾಡ್ ಸಂಗ್ಮಾ ಮಂಗಳವಾರ ತಮ್ಮ ರಾಜ್ಯಗಳ ನಡುವಿನ 50 ವರ್ಷಗಳ ಗಡಿ ವಿವಾದವನ್ನು ಪರಿಹರಿಸುವ ಒಪ್ಪಂದಕ್ಕೆ ಸಹಿ ಹಾಕಿದರು. ಇದರೊಂದಿಗೆ ಉಭಯ ರಾಜ್ಯಗಳ ನಡುವಿನ ಗಡಿ ವಿವಾದಕ್ಕೆ ಅಂತ್ಯ ಹಾಡಲಾಗಿದೆ. ಕೇಂದ್ರ ಗೃಹ ಸಚಿವಾಲಯದ ಕಚೇರಿಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ, ಎರಡೂ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಹಾಗೂ ಗೃಹ ಸಚಿವಾಲಯದ ಇತರ ಅಧಿಕಾರಿಗಳ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ದಶಕಗಳ ಕಾಲದ ವಿವಾದವನ್ನು ಅಂತ್ಯಗೊಳಿಸುವ ಒಪ್ಪಂದಕ್ಕೆ ಸಹಿ ಹಾಕಿರುವುದು ಈಶಾನ್ಯ ಭಾಗಕ್ಕೆ ಐತಿಹಾಸಿಕ ದಿನವಾಗಿದೆ ಎಂದು ಅಮಿತ್ ಶಾ ಹೇಳಿದ್ದಾರೆ. ಎಂಎಚ್ ಎ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮೇಘಾಲಯ ಸರ್ಕಾರದ ಒಟ್ಟು 11 ಪ್ರತಿನಿಧಿಗಳು ಮತ್ತು ಅಸ್ಸಾಂನ ಒಂಬತ್ತು ಪ್ರತಿನಿಧಿಗಳು ಭಾಗವಹಿಸಿದ್ದರು.

ಅಸ್ಸಾಂ ಮತ್ತು ಮೇಘಾಲಯ ಎರಡೂ ಸರ್ಕಾರಗಳು ತಮ್ಮ ರಾಜ್ಯದ ಗಡಿಯುದ್ದಕ್ಕೂ ಇರುವ 12 ವಿವಾದಿತ ಪ್ರದೇಶಗಳ ಪೈಕಿ 6 ಗಡಿ ವಿವಾದಗಳನ್ನು ಪರಿಹರಿಸಲು ಕರಡು ನಿರ್ಣಯದೊಂದಿಗೆ ಬಂದಿವೆ. ಅಸ್ಸಾಂ ಮತ್ತು ಮೇಘಾಲಯ 885–ಕಿಮೀ ಉದ್ದದ ಗಡಿಯನ್ನು ಹಂಚಿಕೊಂಡಿವೆ. 36.79 ಚದರ ಕಿಮೀ ಭೂಮಿಗೆ ಪ್ರಸ್ತಾವಿತ ಶಿಫಾರಸುಗಳ ಪ್ರಕಾರ, ಅಸ್ಸಾಂ 18.51 ಚದರ ಕಿಲೋಮೀಟರ್ ಅನ್ನು ಇಟ್ಟುಕೊಂಡು ಉಳಿದ 18.28 ಚದರ ಕಿಮೀ ಅನ್ನು ಮೇಘಾಲಯಕ್ಕೆ ನೀಡುತ್ತದೆ. ಅಸ್ಸಾಂ ಮತ್ತು ಮೇಘಾಲಯ ನಡುವಿನ ಅಂತಿಮ ಒಪ್ಪಂದವು ಮಹತ್ವದ್ದಾಗಿದೆ, ಏಕೆಂದರೆ ಎರಡು ರಾಜ್ಯಗಳ ನಡುವಿನ ಗಡಿ ವಿವಾದವು ಬಹಳ ಸಮಯದಿಂದ ಬಾಕಿ ಉಳಿದಿದ್ದವು.

ಭಾರತಕ್ಕೆ ರಷ್ಯಾ ವಿದೇಶಾಂಗ ಸಚಿವ ಭೇಟಿ

ನವದೆಹಲಿ, ಮಾ. 29– ರಷ್ಯಾದ ವಿದೇಶಾಂಗ ಸಚಿವ ಸರ್ಗಿ ಲವ್ರೊವ್ ಅವರು ಭಾರತಕ್ಕೆ ಭೇಟಿ ನೀಡಲಿದ್ದಾರೆ ಎನ್ನುವ ಮಾಹಿತಿ ಲಭ್ಯವಾಗಿದೆ. ಈ ಬಗ್ಗೆ ಭಾರತೀಯ ವಿದೇಶಾಂಗ ಸಚಿವಾಲಯದಿಂದ ಯಾವುದೇ ಅಧಿಕೃತ ಮಾಹಿತಿ ಲಭ್ಯವಾಗಿಲ್ಲ. ರಷ್ಯಾದಿಂದ ಅತ್ಯಧಿಕ ಪ್ರಮಾಣದ ತೈಲವನ್ನು ಭಾರತ ಖರೀದಿಸುತ್ತಿದೆ. ಇದೇ ವಿಚಾರವಾಗಿ ಹಣ ವರ್ಗಾವಣೆಗೆ ಸಂಬಂಧಿಸಿದಂತೆ ಮಾತನಾಡಲು ಸರ್ಗಿ ಭಾರತಕ್ಕೆ ಆಗಮಿಸುತ್ತಿದ್ದಾರೆ ಎನ್ನಲಾಗಿದೆ.



ಇದೇ ಸಂದರ್ಭದಲ್ಲಿ ರಷ್ಯಾ ಸೇನೆಯಿಂದ ಮಿಲಿಟರಿ ಉಪಕರಣಗಳನ್ನೂ ಭಾರತ ಖರೀದಿಸುವ ಬಗ್ಗೆ ಮಾತುಕತೆ ನಡೆಯಲಿದೆ. ಉಕ್ರೇನ್ ಮೇಲೆ ಸಮರ ಸಾರಿರುವ ರಷ್ಯಾದಿಂದ ತೈಲ ಖರೀದಿಸಲು ಅಮೆರಿಕ ಸೇರಿದಂತೆ ಹಲವು ದೇಶಗಳು ನಿರ್ಬಂಧ ವಿಧಿಸಿದೆ. ಈ ಹಿನ್ನೆಲೆಯಲ್ಲಿ ಭಾರೀ ಪ್ರಮಾಣದ ತೈಲ ಖರೀದಿಸುವಂತೆ ರಷ್ಯಾ ಭಾರತವನ್ನು ಕೇಳಿಕೊಂಡಿತ್ತು.

ಹಿಂದೂ ಸಂಪ್ರದಾಯದಂತೆ ಮ್ಯಾಕ್ಸ್‌ವೆಲ್ ಮದುವೆ

ಚೆನ್ನೈ, ಮಾ.29– ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್, ವಿನಿ ರಾಮನ್ ಇಂದು ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಈ ಜೋಡಿ ಡಾನ್ಸ್ ಮಾಡುತ್ತಾ ಹಾರ ಬದಲಿಸಿಕೊಂಡಿರುವ ವೀಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಹಲವು ವರ್ಷಗಳಿಂದ ಪ್ರೀತಿಸುತ್ತಿದ್ದ ಮ್ಯಾಕ್ಸ್‌ವೆಲ್ ಮತ್ತು ವಿನಿ ರಾಮನ್ ಜೋಡಿಯು 2020 ರಲ್ಲಿ ನಿಶ್ಚಿತಾರ್ಥ ಮಾಡಿಕೊಂಡಿದ್ದರು. ಭಾರತೀಯ ಮೂಲದ ವಿನಿ ರಾಮನ್ ಅವರನ್ನು ಮಾರ್ಚ್ 18 ರಂದು ಕ್ರಿಶ್ಚಿಯನ್ ಸಂಪ್ರದಾಯದಂತೆ ವಿವಾಹವಾಗಿದ್ದರು. ಭಾರತಕ್ಕೆ ಆಗಮಿಸಿರುವ ದಂಪತಿ ಚೆನ್ನೈನಲ್ಲಿ ಹಿಂದೂ ಸಂಪ್ರದಾಯದಂತೆ ಮದುವೆಯಾಗಿದ್ದಾರೆ ತಮಿಳು ಸಂಪ್ರದಾಯದ ಪ್ರಕಾರ ವಿನಿ ರಾಮನ್ ಅವರಿಗೆ ಮ್ಯಾಕ್ಸ್‌ವೆಲ್ ಮಾಂಗಲ್ಯವನ್ನು ಕಟ್ಟಿದ್ದಾರೆ. ಡ್ಯಾನ್ಸ್ ಮಾಡುತ್ತಾ ಹಾರ ಬದಲಿಸಿಕೊಳ್ಳುತ್ತಿರುವ ವಿಡಿಯೋ ವೈರಲ್ ಆಗಿದೆ. ಮ್ಯಾಕ್ಸ್‌ವೆಲ್ ಅವರ ಪತ್ನಿ ವಿನಿ ರಾಮನ್ ಭಾರತೀಯ ಮೂಲದ ಆಸ್ಟ್ರೇಲಿಯಾ ಪ್ರಜೆ ಅವರು ಹುಟ್ಟಿದ್ದು ಮತ್ತು ಓದಿದ್ದು ಆಸ್ಟ್ರೇಲಿಯಾದಲ್ಲಿ. ತಮಿಳುನಾಡು ಮೂಲದವರಾದ ವಿನಿ ಅವರ ತಂದೆ ವೆಂಕಟರಾಮನ್ ಮತ್ತು ತಾಯಿ ವಿಜಯಲಕ್ಷ್ಮಿ ಮಗಳು ಜನಿಸುವ ಮೊದಲೇ ಆಸ್ಟ್ರೇಲಿಯಾಕ್ಕೆ ವಲಸೆ ಹೋಗಿದ್ದರು. ಮ್ಯಾಕ್ಸ್‌ವೆಲ್ ಮದುವೆಯ ಕಾರಣದಿಂದ ಪಾಕ್ ವಿರುದ್ಧದ ಸರಣಿಯಿಂದ ಹೊರಗುಳಿದಿದ್ದರು.



ಔಷಧಗಳಿಲ್ಲದ ಲಂಕಾ ಆಸ್ಪತ್ರೆಗೆ ಭಾರತ ನೆರವು

ಕೊಲಂಬೋ, ಮಾ.29– ಔಷಧಗಳ ಸರಬರಾಜು ಇಲ್ಲದೇ ಸ್ಥಗಿತಗೊಂಡಿರುವ ಆಸ್ಪತ್ರೆಗಳಿಗೆ ನೆರವು ನೀಡುವಂತೆ ಲಂಕಾದಲ್ಲಿನ ಹೈಕಮಿಷನರ್‌ಗೆ ವಿದೇಶಾಂಗ ಸಚಿವ ಎಸ್. ಜೈಶಂಕರ್ ಸೂಚನೆ ನೀಡಿದ್ದಾರೆ. ಶ್ರೀಲಂಕಾ ಹಿಂದೆಂದೂ ಕಾಣದ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದ್ದು, ಪೆರಂಡೇನಿಯಾ ಆಸ್ಪತ್ರೆಯ ನಿರ್ದೇಶನಾಲಯ ಔಷಧಗಳ ಕೊರತೆಯ ಹಿನ್ನೆಲೆಯಲ್ಲಿ ಎಂದಿನಂತೆ ನಡೆಯ ಬೇಕಿದ್ದ ಶಸ್ತ್ರಚಿಕಿತ್ಸೆಗಳನ್ನು ಸ್ಥಗಿತಗೊಳಿಸುತ್ತಿರುವುದಾಗಿ ಘೋಷಿಸಿತ್ತು. ಈ ಹಿನ್ನೆಲೆಯಲ್ಲಿ ಕೊಲಂಬೋದಲ್ಲಿರುವ ಭಾರತೀಯ ಹೈಕಮಿಷನರ್ ಗೋಪಾಲ್ ಬಗ್ಲೆಗೆ ಸೂಚನೆ ನೀಡಿರುವ ಜೈಶಂಕರ್, ಭಾರತ ಹೇಗೆ ಲಂಕಾಗೆ ಸಹಾಯ ಮಾಡುಹುದೆಂಬುದನ್ನು ಚರ್ಚಿಸುವಂತೆ ತಿಳಿಸಿದ್ದಾರೆ.



ಇನ್ನು ಇದೇ ವೇಳೆ ಲಂಕಾ ಪ್ರವಾಸದಲ್ಲಿರುವ ವಿದೇಶಾಂಗ ಸಚಿವ ಎಸ್ ಜೈಶಂಕರ್, ಶ್ರೀಲಂಕಾದ ಉತ್ತರ ಭಾಗದಲ್ಲಿರುವ ದ್ವೀಪಗಳಲ್ಲಿ ಹೈಬ್ರಿಡ್ ವಿದ್ಯುತ್ ಯೋಜನೆಯನ್ನು ಭಾರತ ಕೈಗೆತ್ತಿಕೊಳ್ಳುವ ಒಪ್ಪಂದಕ್ಕೆ ಲಂಕಾದೊಂದಿಗೆ ಸಹಿ ಹಾಕಿದ್ದಾರೆ.

ಈ ಯೋಜನೆಗೆ ಲಂಕಾ–ಭಾರತದ ನಡುವಿನ ಒಪ್ಪಂದ ಚೀನಾಗೆ ಹಿನ್ನಡೆಯಾಗಿದ್ದು, ಹಿಂದೂ ಮಹಾಸಾಗರದಲ್ಲಿ ಚೀನಾದ ಪ್ರಭಾವವನ್ನು ತಗ್ಗಿಸುವಂಥಹದ್ದಾಗಿದೆ. ಲಂಕಾದ ಮೂರು ದ್ವೀಪಗಳಲ್ಲಿ ವಿದ್ಯುತ್ ಘಟಕ ನಿರ್ಮಾಣ ಮಾಡುವ ಯೋಜನೆಯನ್ನು ಸ್ಥಗಿತಗೊಳಿಸುತ್ತಿರುವುದಾಗಿ ಲಂಕಾ ಕಳೆದ ಡಿಸೆಂಬರ್ ನಲ್ಲಿ ಘೋಷಿಸಿತ್ತು.

ಬ್ರೆಜಿಲ್ ಅಧ್ಯಕ್ಷ ಬೋಲ್ಸನಾರೊ ಆಸ್ಪತ್ರೆಗೆ ದಾಖಲು


ಬ್ರೆಸಿಲಿಯಾ, ಮಾ.29– ಬ್ರೆಜಿಲ್ ಅಧ್ಯಕ್ಷ ಜೈರ್ ಬೋಲ್ಸನಾರೊ ಆಸ್ಪತ್ರೆಗೆ ದಾಖಲಾಗಿದ್ದು, ಪರೀಕ್ಷೆಗೆ ಒಳಗಾಗಲಿದ್ದಾರೆ ಎಂದು ಸಂವಹನ ಸಚಿವ ಫ್ಯಾಬಿಯೊ ಫರಿಯಾ ಉಲ್ಲೇಖಿಸಿ ಜಿ1 ನ್ಯೂಸ್ ಪೋರ್ಟಲ್ ವರದಿ ಮಾಡಿದೆ. ಅಸ್ವಸ್ಥತೆಯಿಂದಾಗಿ ಅಧ್ಯಕ್ಷ ಬೋಲ್ಸನಾರೊ ಅವರನ್ನು ಪರೀಕ್ಷೆಗಳಿಗಾಗಿ ಸೋಮವಾರ ಸಂಜೆ ಬ್ರೆಸಿಲಿಯಾದಲ್ಲಿರುವ ಸಶಸ್ತ್ರ ಪಡೆಗಳ ಆಸ್ಪತ್ರೆಗೆ ವರ್ಗಾಯಿಸಲಾಯಿತು ಎಂದು ವರದಿ ಹೇಳಿದೆ.



ಪ್ರಥಮ ಮಹಿಳೆ ಮಿಚೆಲ್ ಬೋಲ್ಸನಾರೊ ಪ್ರಕಾರ, ಜನವರಿಯ ಆರಂಭದಲ್ಲಿ, ಕರುಳಿನ ಸಮಸ್ಯೆಗಳಿಂದಾಗಿ ಅಧ್ಯಕ್ಷರು ಈಗಾಗಲೇ ಆಸ್ಪತ್ರೆಗೆ ದಾಖಲಾಗಿದ್ದರು ಎಂದು ತಿಳಿಸಿದ್ದಾರೆ. ಬ್ರೆಜಿಲ್ ಅಧ್ಯಕ್ಷರು 2018 ರಲ್ಲಿ ಅವರ ಮೇಲೆ ಹತ್ಯೆಯ ಪ್ರಯತ್ನದ ನಂತರ ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ನಂತರ ಚುನಾವಣೆಗೆ ಸುಮಾರು ಒಂದು ತಿಂಗಳ ಮೊದಲು ಮಿನಾಸ್ ಗೆರೈಸ್ ರಾಜ್ಯದ ಜೂಯಿಜ್ ಡಿ ಫೊರಾ ನಗರದಲ್ಲಿ ಚುನಾವಣಾ ರ್ಯಾಲಿಯಲ್ಲಿ ಬೋಲ್ಸನಾರೊ ಅವರನ್ನು ಇರಿದಿದ್ದರು.

ಉತ್ತರ ಪ್ರದೇಶದಲ್ಲಿ ಉಚಿತ ಊಟ

ಲಖನೌ, ಮಾ. 29– ಎರಡನೇ ಅವಧಿಗೆ ಅಧಿಕಾರ ಬಂದ ನಂತರ ನಡೆದ ಮೊದಲ ಸಂಪುಟ ಸಭೆಯಲ್ಲಿ ಉಚಿತ ಪಡಿತರ ಯೋಜನೆಯನ್ನು ವಿಸ್ತರಿಸಿದ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರ ಪ್ರದೇಶ ಸರ್ಕಾರ ಇದೀಗ ಬಡವರು ಮತ್ತು ವಂಚಿತರಿಗೆ ಉಚಿತ ಅಥವಾ ಹೆಚ್ಚಿನ ಸಬ್ಸಿಡಿ ಯೊಂದಿಗೆ ಊಟ ನೀಡುವ ಸಲುವಾಗಿ ರಾಜ್ಯಾದ್ಯಂತ ಸಮುದಾಯ ಅಡುಗೆಮನೆಗಳನ್ನು ಸ್ಥಾಪಿಸಲು ಮುಂದಾಗಿದೆ. ಉತ್ತರ ಪ್ರದೇಶ ಸರ್ಕಾರ 2020ರಿಂದ ಪ್ರತಿ ತಿಂಗಳು 15 ಕೋಟಿ ಫಲಾನುಭವಿಗಳಿಗೆ ಉಚಿತ ಪಡಿತರವನ್ನು ವಿತರಿಸುತ್ತಿದೆ ಈ ಯೋಜನೆಯಡಿಯಲ್ಲಿ ಫಲಾನುಭವಿಗಳಿಗೆ 1 ಕೆಜಿ ಸಂಪೂರ್ಣ ಚನಾ, 1 ಲೀಟರ್ ಅಡಿಗೆ ಎಣ್ಣೆ 1 ಕೆಜಿ ಉಪ್ಪು ಜೊತೆಗೆ 5 ಕೆಜಿ ಗೋಧಿ ಮತ್ತು ಅಕ್ಕಿಯನ್ನು ಒಳಗೊಂಡ ಪ್ಯಾಕ್ ನೀಡಲಾಗುತ್ತಿದೆ. ಅಧಿಕೃತ ಮೂಲಗಳ ಪ್ರಕಾರ, ಯೋಗಿ ಸರ್ಕಾರವು ಬಡವರಿಗೆ ಉಚಿತವಾಗಿ ಅಥವಾ ಅತ್ಯಲ್ಪ ಬೆಲೆಯಲ್ಲಿ ಬೇಯಿಸಿದ ಪೌಷ್ಟಿಕಾಂಶದ ಆಹಾರವನ್ನು ಒದಗಿಸಲು ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಸಮುದಾಯ ಅಡುಗೆ ಮನೆಗಳನ್ನು ಸ್ಥಾಪಿಸಲು ಸಿದ್ಧತೆ ನಡೆಸಿದೆ ಈ ಸಂಬಂಧ ಈ ವಾರದಲ್ಲೇ ಸಂಬಂಧಿಸಿದ ಎಲ್ಲಾ ಇಲಾಖೆಗಳನ್ನು ಒಳಗೊಂಡ ಉನ್ನತ ಮಟ್ಟದ ಸಭೆ ನಡೆಯಲಿದ್ದು, ಯೋಜನೆ ಪ್ರಾರಂಭಿಸುವ ವಿಧಾನಗಳನ್ನು ವಿವರಿಸಲಾಗುವುದು ಮತ್ತು ಸಮುದಾಯ ಅಡುಗೆಮನೆಗಳನ್ನು ನಡೆಸುವಲ್ಲಿ ವಿವಿಧ ಇಲಾಖೆಗಳಿಗೆ ವಿಭಿನ್ನ ಪಾತ್ರಗಳನ್ನು ನೀಡಬಹುದು ಎಂದು ಮೂಲಗಳು ತಿಳಿಸಿವೆ.



ಗ್ರಾಮೀಣ ಪ್ರದೇಶಗಳಲ್ಲಿ ಅಸ್ಪೃಶ್ಯತೆ, ಜಾತೀಯತೆ ಇನ್ನೂ ಜೀವಂತ

ಉಪವಿಭಾಗ ಮಟ್ಟದ ಎಸ್‌ಸಿ, ಎಸ್‌ಟಿ ಜಾಗೃತಿ ಸಭೆಯಲ್ಲಿ ದಲಿತ ಮುಖಂಡರ ಆತಂಕ

ಹುಣಸೂರು, ಮಾ.29(ಕೆಕೆ)– ಹುಣಸೂರು ಉಪ ವಿಭಾಗ ಮಟ್ಟದ ಗ್ರಾಮೀಣ ಪ್ರದೇಶಗಳಲ್ಲಿ ಅಸ್ಪೃಶ್ಯತೆ, ಜಾತೀಯತೆ ಇನ್ನೂ ಜೀವಂತವಾಗಿರುವುದು ನಮಗೆ ಆತಂಕ ತಂದಿದೆ ಎಂದು ದಲಿತ ಮುಖಂಡ ನಿಂಗರಾಜ್ ಮಲ್ಲಾಡಿ ಆತಂಕ ವ್ಯಕ್ತಪಡಿಸಿದರು.



ಹುಣಸೂರು ಉಪವಿಭಾಗ ಮಟ್ಟದ ಪರಿಶಿಷ್ಟ ಜಾತಿ ಪಂಗಡದ ಜಾಗೃತಿ ಮತ್ತು ಉಸ್ತುವಾರಿ ಸಭೆಯಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶದ ಕೆಲವು ಹಳ್ಳಿಗಳಲ್ಲಿ ಅಸ್ಪೃಶ್ಯತೆ, ಜಾತೀಯತೆ ಇನ್ನೂ ಜೀವಂತ ವಾಗಿದ್ದು, ಇದರಿಂದ ಆ ಹಳ್ಳಿಗಳ ದಲಿತರು ತುಂಬಾ ಸಂಕಷ್ಟದ ಮತ್ತು ನೋವಿನ ಬದುಕನ್ನು ದೂಡುತ್ತಿದ್ದಾರೆ. ಕೆಲವು ಹಳ್ಳಿಗಳಲ್ಲಿ ದಲಿತರಿಗೆ ಪ್ರವೇಶ ನಿರಾಕರಿಸಲಾಗಿದೆ. ಕ್ಷೌರ ಮಾಡಿಸಿಕೊಳ್ಳಲು ನಿರ್ಬಂಧಿಸಲಾಗುತ್ತಿದೆ. ಗ್ರಾಮೀಣ ಪ್ರದೇಶದ ಹೋಟೆಲ್‌ಗಳಲ್ಲಿ ದಲಿತರಿಗೆ ತಿಂಡಿ, ತಿನಿಸು ಕೊಡಲು ಅವಕಾಶ ಕೊಡುತ್ತಿಲ್ಲ. ಇಂತಹ ಸ್ಥಿತಿಯಲ್ಲಿ ಕೆಲವು ಹಳ್ಳಿಯ ದಲಿತರು ಅಸ್ಪೃಶ್ಯತೆಯ ನೋವುಗಳನ್ನು ಅನುಭವಿಸುವ ಸ್ಥಿತಿ ಇದೆ. ಅಸ್ಪೃಶ್ಯತೆ ಒಂದು ಅನಿಷ್ಟ ಪದ್ಧತಿಯ ಜೊತೆಗೆ ಮಾನಸಿಕ ರೋಗವಾಗಿದ್ದು, ಇಂತಹ ಪದ್ಧತಿ ನಿರ್ಮೂಲನೆ ಮಾಡಲು ಕಾನೂನಿನ ಜೊತೆಗೆ ಮೇಲ್ವರ್ಗದವರ ಮನಸ್ಥಿತಿಯು ಬದಲಾಗಬೇಕಿದೆ ಎಂದರು.

ಎಸ್‌ಸಿ, ಎಸ್‌ಟಿ ಸಭೆಯ ಸದಸ್ಯ ರಾಜಯ್ಯ ಮಾತನಾಡಿ, ದಲಿತರ ಮೇಲೆ ದೌರ್ಜನ್ಯ ಪ್ರಕರಣ ನಡೆದಾಗ ಸ್ಥಳೀಯ ಪೊಲೀಸ್ ಠಾಣೆಗಳಲ್ಲಿ ನೊಂದ ದಲಿತರ ಮೇಲೆಯೇ ಕೌಂಟರ್ ಕೇಸುಗಳು ದಾಖಲಾಗುತ್ತಿವೆ. ಇದರಿಂದ ದೌರ್ಜನ್ಯಕ್ಕೆ ಒಳಗಾದ ದಲಿತರ ಸ್ಥಿತಿ ಚಿಂತಾಜನಕವಾಗುತ್ತದೆ. ದೌರ್ಜನ್ಯಕ್ಕೆ ಒಳಗಾದ ದಲಿತರಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ತಕ್ಷಣ ಪರಿಹಾರ ಕಾರ್ಯಗಳನ್ನು ಮಾಡುತ್ತಿಲ್ಲ ಎಂದರು.

ಸೀಗೂರು ವಿಜಯ್‌ಕುಮಾರ್ ಮಾತನಾಡಿ, ಪಿರಿಯಾಪಟ್ಟಣ ತಾಲೂಕಿನಲ್ಲಿ ದಲಿತರಿಗೆ ಸರ್ಕಾರ ಕೊಟ್ಟಿರುವ ಭೂ ಸಾಗುವಳಿ ಪತ್ರಗಳಿದ್ದರೂ ಬಲಾಢ್ಯರು, ದಲಿತರ ಭೂಮಿಗಳನ್ನು ಒತ್ತುವರಿ ಮಾಡಿಕೊಂಡು ಕಿರುಕುಳ ನೀಡುತ್ತಿದ್ದಾರೆ. ಈ ಬಗ್ಗೆ ಅನೇಕ ಸಭೆಗಳಲ್ಲಿ ದಲಿತರ ಭೂ ಸಮಸ್ಯೆಗಳನ್ನು ಬಗೆಹರಿಸುವಂತೆ ಮನವಿ ಮಾಡಿದರೂ ಪಿರಿಯಾಪಟ್ಟಣ ತಹಸೀಲ್ದಾರ್ ಭೂ ಮಾಲೀಕರ ಪರ ನಿಂತು ದಲಿತರ ಭೂ ಸಮಸ್ಯೆಗಳನ್ನು ಪರಿಹರಿಸುತ್ತಿಲ್ಲ. ತಕ್ಷಣವೇ ದಲಿತರ ಭೂ ಸಮಸ್ಯೆಗಳನ್ನು ಪರಿಹರಿಸುವಂತೆ ಮನವಿ ಮಾಡಿದರು.

ಹೆಚ್.ಡಿ.ಕೋಟೆಯ ಆದಿವಾಸಿ ಮುಖಂಡ ಶಿವರಾಜು, ಬಲ್ಲೇನಹಳ್ಳಿ ಕೆಂಪರಾಜು ಮಾತನಾಡಿದರು.

ಸಮಸ್ಯೆಗಳನ್ನು ಆಲಿಸಿ ಮಾತನಾಡಿದ ಹುಣಸೂರು ಉಪವಿಭಾಗಾಧಿಕಾರಿ ವರ್ಣಿತ್ ನೇಗಿ, ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಅಸ್ಪೃಶ್ಯತೆ, ಜಾತೀಯತೆ ಜೀವಂತವಾಗಿದೆಯೋ ಅಂತಹ ಹಳ್ಳಿಗಳಿಗೆ ತಾಲೂಕು ಮಟ್ಟದ ಅಧಿಕಾರಿಗಳು ಖುದ್ದಾಗಿ ಭೇಟಿ ನೀಡಿ, ಸ್ಥಳೀಯರನ್ನೊಳಗೊಂಡಂತೆ ಸಭೆ ಮಾಡಿ ಅಸ್ಪೃಶ್ಯತೆ ಆಚರಿಸುವವರನ್ನು ಮೊದಲು ಮನಃ ಪರಿವರ್ತನೆ ಮಾಡಬೇಕು ಹಾಗೂ ಇಂತಹ ಅನಿಷ್ಟ ಪದ್ಧತಿಗಳ ನಿರ್ಮೂಲನೆಗೆ ಜಾಗೃತಿ ಸಭೆಗಳನ್ನು ಏರ್ಪಡಿಸಿ, ಆ ಸಮಸ್ಯೆಗಳನ್ನು ಅಲ್ಲಿಯೇ ಪರಿಹರಿಸಬೇಕು ಎಂದರು.

ಸಭೆಯಲ್ಲಿ ಜೀತ ವಿಮುಕ್ತರ ಪುನರ್ವಸತಿ, ಸಫಾಯಿ ಕರ್ಮಚಾರಿಗಳ ಪುನರ್ವಸತಿ ಬಗ್ಗೆ ಚರ್ಚಿಸಿ ಸೌಲಭ್ಯಗಳನ್ನು ಕಲ್ಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಯಿತು. ಸಭೆಯಲ್ಲಿ ದಲಿತ ಮುಖಂಡರಾದ ಡಿ.ಕುಮಾರ್, ಬಸವರಾಜು, ಸುರೇಶ, ಜಗದೀಶ್, ಹುಣಸೂರು ತಹಸೀಲ್ದಾರ್ ಡಾ.ಅಶೋಕ್ ಕುಮಾರ್, ಸಮಾಜ ಕಲ್ಯಾಣಾಧಿಕಾರಿ ಮೋಹನ್ ಕುಮಾರ್, ಹುಣಸೂರು ನಗರಸಭೆ ಆಯುಕ್ತ ಕೆ.ಪಿ.ರವಿಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್ ರವಿ, ಇಓ ಗಿರೀಶ್, ಎಲ್ಲಾ ತಾಲೂಕುಗಳ ತಹಸೀಲ್ದಾರ್, ಕಾರ್ಯ ನಿರ್ವಹಣಾಧಿಕಾರಿಗಳು, ಸಮಾಜ ಕಲ್ಯಾಣಾಧಿಕಾರಿಗಳು, ಎಸ್‌ಸಿ, ಎಸ್‌ಟಿ ನಿಗಮದ ಅಧಿಕಾರಿಗಳು, ತಾಲೂಕು ಮಟ್ಟದ ಇತರೆ ಅಧಿಕಾರಿಗಳು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಜೇಮ್ಸ್ (ಕ): ಬೆ.9.55ಕ್ಕೆ, ಮ.12.55ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.50ಕ್ಕೆ.
ಸ್ಕ್ರೀನ್ 2	ಜೇಮ್ಸ್ (ಕ): ಬೆ.8ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ರಾ.7.10ಕ್ಕೆ, ಓರುತಿ (ಮ): ಬೆ.10.50ಕ್ಕೆ, ಆಂಬುಲೆನ್ಸ್ (ಇಂ): ರಾ.10ಕ್ಕೆ.
ಸ್ಕ್ರೀನ್ 3	ಎದರ್ಕುಂ ತುನಿಂದವನ್ (ತ): ಬೆ.10.05ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.1ಕ್ಕೆ, ಬಚ್ಚನ್ ಪಾಂಡೆ (ಹಿಂ): ಸಂ.4.10ಕ್ಕೆ, ರಾ.7.05ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ರಾಧೆಶ್ಯಾಮ್ (ತೆ): ಮ.1.15ಕ್ಕೆ, ಜೇಮ್ಸ್ (ಕ): ಮ.3.55ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜೇಮ್ಸ್ (ಕ): ಬೆ.8.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.35ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 2	ದಿ ಕಾಶ್ಮೀರ್ ಫೈಲ್ಸ್ (ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 3	ಬಚ್ಚನ್ ಪಾಂಡೆ (ಹಿಂ): ಬೆ.9.20ಕ್ಕೆ, ಮ.3.45ಕ್ಕೆ, ಸಂ.6.50ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.12.20ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 4	ಜೇಮ್ಸ್ (ಕ): ಬೆ.11.15ಕ್ಕೆ, ಮ.2.30ಕ್ಕೆ, ಸಂ.5.45ಕ್ಕೆ, ಬಚ್ಚನ್ ಪಾಂಡೆ (ಹಿಂ): ರಾ.9ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಏಕ್ ಲವ್‌ಯಾ (ಕ): ಬೆ.10.45ಕ್ಕೆ, ಮ.1.45ಕ್ಕೆ, ಸಂ.6.35ಕ್ಕೆ, ಓಲ್ಡ್‌ಮಾಂಕ್ (ಕ): ರಾ.9.30ಕ್ಕೆ.
ಸ್ಕ್ರೀನ್ 2	ಎದರ್ಕುಂ ತುನಿಂದವನ್ (ತ): ಬೆ.10.45ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ
ಸ್ಕ್ರೀನ್ 3	ರಾಧೆಶ್ಯಾಮ್ (ತೆ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.45ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಆ ತೊಂಭತ್ತು ದಿನಗಳು (ಕ): ಬೆ.11ಕ್ಕೆ, ಡಿಯರ್ ಸತ್ಯ (ಕ): ಮ.1.30ಕ್ಕೆ, ಎದರ್ಕುಂ ತುನಿಂದವನ್ (ತ): ಸಂ.4.15ಕ್ಕೆ, ಹರೀಶ ವಯಸ್ಸು 36 (ಕ): ರಾ.7.15ಕ್ಕೆ, ಪದ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ಫೋರಂ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲವ್ ಮಾಕ್ಟೇಲ್ 2 (ಕ): ಸಂ.6ಕ್ಕೆ, ಡಿಯರ್ ಸತ್ಯ (ಕ): ಮ.12.35ಕ್ಕೆ, ರಾಧೆಶ್ಯಾಮ್ (ತೆ): ಬೆ.10.05ಕ್ಕೆ, ಬೆ.11.30ಕ್ಕೆ, ಮ.12.10ಕ್ಕೆ, ಮ.1ಕ್ಕೆ, ಮ.2.25ಕ್ಕೆ, ಮ.3.05ಕ್ಕೆ, ಮ.3.55ಕ್ಕೆ, ಸಂ.5.20ಕ್ಕೆ, ಸಂ.6.50ಕ್ಕೆ, ರಾ.8.15ಕ್ಕೆ, ರಾ.9.45ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಮ.2.50ಕ್ಕೆ, ರಾ.9.45ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ಬೆ.11.30ಕ್ಕೆ, ಸಂ.6.25ಕ್ಕೆ, ದಿ ಕಾಶ್ಮೀರ್ ಫೈಲ್ಸ್ (ಹಿಂ): ಮ.3.15ಕ್ಕೆ, ರಾ.9.45ಕ್ಕೆ, ಭೀಷ್ಮಪರ್ವಂ (ಮ): ರಾ.9ಕ್ಕೆ, ಪದ (ಮ): ಸಂ.6.40ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.20ಕ್ಕೆ, ಮ.12.30ಕ್ಕೆ, ಮ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.

ಗರುಡ ಮಾಲ್, 1ನೇ ಮಹಡಿ, ಮೊ.ನಂ: 9901373210

ಹರೀಶ ವಯಸ್ಸು 36 (ಕ): ಮ.3.30ಕ್ಕೆ, ಲವ್ ಮಾಕ್ಟೇಲ್ 2 (ಕ): ಮ.12.25ಕ್ಕೆ, ಮ.3.05ಕ್ಕೆ, ರಾಧೆಶ್ಯಾಮ್ (ತೆ): ಬೆ.9.15ಕ್ಕೆ, ಬೆ.10.20ಕ್ಕೆ, ಮ.12.10ಕ್ಕೆ, ಮ.1.15ಕ್ಕೆ, ಸಂ.4.10ಕ್ಕೆ, ಸಂ.6.05ಕ್ಕೆ, ರಾ.7.05ಕ್ಕೆ, ರಾ.9ಕ್ಕೆ, ರಾ.10ಕ್ಕೆ, ದಿ ಬ್ಯಾಟ್‌ಮ್ಯಾನ್ (ಇಂ): ಬೆ.11.55ಕ್ಕೆ, ಸಂ.5.55ಕ್ಕೆ, ಗಂಗೂಬಾಯ್ ಕಾಠಿಯಾವಾಡಿ (ಹಿಂ): ರಾ.9.30ಕ್ಕೆ, ಎದರ್ಕುಂ ತುನಿಂದವನ್ (ತ): ಬೆ.9.15ಕ್ಕೆ, ಮ.3.25ಕ್ಕೆ, ಸಂ.6.30ಕ್ಕೆ, ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಆರ್‌ಆರ್‌ಆರ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಇಲ್ಲಿಂದ ಆರಂಭವಾಗಿದೆ (ಕ)	1 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಆರ್‌ಆರ್‌ಆರ್ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೇಮ್ಸ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ಸಂಗಂ	
ಜೇಮ್ಸ್ (ಕ)	4 ಪ್ರದರ್ಶನಗಳು
ಲಿಡೋ	
ದ ಕಾಶ್ಮೀರ್ ಫೈಲ್ಸ್ (ಹಿ)	4 ಪ್ರದರ್ಶನಗಳು
ತಿಬ್ಬಾದೇವಿ	
ಆರ್‌ಆರ್‌ಆರ್ (ತೆ)	4 ಪ್ರದರ್ಶನಗಳು

ಬೆಟ್ಟದಪುರ : 273 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರು



ಬೆಟ್ಟದಪುರ, ಮಾ.29(ಶಿವದೇವ್)– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದ ಪರೀಕ್ಷಾ ಕೇಂದ್ರದಲ್ಲಿ 273 ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿ ಮಾಡಿದ್ದು, ಅವರಲ್ಲಿ 268 ಮಂದಿ ಹಾಜರಾಗಿ ಪರೀಕ್ಷೆ ಬರೆದರು. ಐವರು ವಿಶೇಷ ಅಗತ್ಯ ವಿದ್ಯಾರ್ಥಿಗಳಿಗೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿತ್ತು. ಪರೀಕ್ಷಾ ಕೇಂದ್ರದ ಉಪ ಪ್ರಾಂಶುಪಾಲ ಬಿ.ಎಸ್.ರೇವಣ್ಣ ಮಾತನಾಡಿ, ಎಲ್ಲಾ ವಿದ್ಯಾರ್ಥಿಗಳು ಸರ್ಕಾರದ ಆದೇಶದಂತೆ ಪರೀಕ್ಷೆ ಬರೆಯಲು ಸಮವಸ್ತ್ರದಲ್ಲಿ ಬಂದಿದ್ದಾರೆ. ಪರೀಕ್ಷಾ ಕೇಂದ್ರದಲ್ಲಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಇದ್ದು, ಆರೋಗ್ಯ ತಪಾಸಣಾ ಕೇಂದ್ರವನ್ನು ತೆರೆಯಲಾಗಿದೆ ಎಂದರು.

ಪರೀಕ್ಷಾ ಕೇಂದ್ರಕ್ಕೆ ಮಂಡ್ಯ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಅಭಿವೃದ್ಧಿ ಅಧಿಕಾರಿ ಶಿವಮಾದಪ್ಪ ಭೇಟಿ ನೀಡಿ, ವೀಕ್ಷಣೆ ಮಾಡಿದರು.

ಬೆಟ್ಟದಪುರ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿರಿಯ ಆರೋಗ್ಯ ನಿರೀಕ್ಷಕ ರಮೇಶ್, ಶಿಕ್ಷಕರಾದ ನಾರಾಯಣಗೌಡ, ಜ್ಯೋತಿ, ಪೊಲೀಸ್ ಸಿಬ್ಬಂದಿ ಹಾಜರಿದ್ದರು.



ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಆಗಮಿಸಿದ ವಿದ್ಯಾರ್ಥಿಗಳನ್ನು ಪರೀಕ್ಷಾ ಕೇಂದ್ರದಲ್ಲಿ ತಪಾಸಣೆ ನಡೆಸಿ, ಸ್ಯಾನಿಟೈಸರ್ ಹಾಗೂ ಮಾಸ್ಕ್ ಅನ್ನು ನೀಡಲಾಯಿತು. ಈ ವೇಳೆ ಸಮುದಾಯ ಆರೋಗ್ಯಾಧಿಕಾರಿ ಎಚ್.ಪಿ.ಬಿಂದು, ಅನುಪಾಲನಾಧಿಕಾರಿ ಮಂಜುನಾಥ್, ಆಶಾ ಕಾರ್ಯಕರ್ತೆ ಉಷಾ, ಶಾಲಾ ಶಿಕ್ಷಕರು ಉಪಸ್ಥಿತರಿದ್ದರು.

ಸಮಾಜಸೇವೆ ಹಂಬಲದೊಂದಿಗೆ ಸೇವಾ ಟ್ರಸ್ಟ್ ಸ್ಥಾಪನೆ

ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಹೆಚ್.ಎಂ.ಮಹದೇವಮೂರ್ತಿ

ನಂಜನಗೂಡು, ಮಾ.29– ಬಡವರಿಗೆ ಆಸರೆಯಾಗುವ ಮೂಲಕ ಸಮಾಜಸೇವೆ ಮಾಡಬೇಕೆಂಬ ಹಂಬಲದೊಂದಿಗೆ ದಿ.ಹಗಿನವಾಳು ಮಹದೇವಪ್ಪನವರ ಸೇವಾ ಟ್ರಸ್ಟ್ ಸ್ಥಾಪಿಸಲಾಗಿದೆ ಎಂದು ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಹೆಚ್.ಎಂ. ಮಹದೇವಮೂರ್ತಿ ತಿಳಿಸಿದರು.



ತಾಲೂಕಿನ ಹಗಿನವಾಳು ಗ್ರಾಮದಲ್ಲಿ ನಿವೃತ್ತ ಕಂದಾಯ ಇಲಾಖೆ ಅಧಿಕಾರಿ ದಿ.ಹಗಿನವಾಳು ಮಹದೇವಪ್ಪರವರ ಸಂಸ್ಮರಣೋತ್ಸವ ಅಂಗವಾಗಿ ಏರ್ಪಡಿಸಿದ್ದ ದಿ.ಹಗಿನವಾಳು ಮಹದೇವಪ್ಪರವರ ಸೇವಾ ಟ್ರಸ್ಟ್ ಉದ್ಘಾಟನೆ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಸ್ತೆ ಸುರಕ್ಷಾ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ತಂದೆ ಕಂದಾಯ ಇಲಾಖಾಧಿಕಾರಿಯಾಗಿದ್ದ ಸಂದರ್ಭ ಮತ್ತು ನಿವೃತ್ತರಾದ ನಂತರವೂ ಬಡವರ ಸೇವೆ ಮಾಡುವ ಮೂಲಕ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದರು. ಆದರೆ ನಮ್ಮ ತಂದೆಯವರು ರಸ್ತೆ ಅಪಘಾತದಲ್ಲಿ ಮೃತಪಟ್ಟರು. ಅವರ ಸಂಸ್ಮರಣೆ ಅಂಗವಾಗಿ ಸಮಾಜ ಸೇವೆಯಲ್ಲಿ ತೊಡಗಬೇಕೆಂಬ ಉದ್ದೇಶದೊಂದಿಗೆ ಸೇವಾ ಟ್ರಸ್ಟ್ ಸ್ಥಾಪಿಸಲಾಗಿದೆ. ಈ ಟ್ರಸ್ಟ್ ಮೂಲಕ ಯುವಕರಿಗೆ, ಗ್ರಾಮೀಣ ಜನರಿಗೆ ರಸ್ತೆ ಸುರಕ್ಷತಾ ಜಾಗೃತಿ ಮೂಡಿಸುವ ಜೊತೆಗೆ ಆರೋಗ್ಯ ಶಿಬಿರ, ಕಣ್ಣಿನ ತಪಾಸಣೆ ಮತ್ತು ಚಿಕಿತ್ಸೆ, ಪರಿಸರ ಸಂರಕ್ಷಣೆ, ವಿದ್ಯಾರ್ಥಿಗಳಿಗೆ ಶೈಕ್ಷಣಿಕ ನೆರವು, ಮಾರ್ಗದರ್ಶನ ನೀಡುವ ಕಾರ್ಯಕ್ರಮ ಹಮ್ಮಿಕೊಂಡು ನಿರಂತರವಾಗಿ ಸೇವೆಯಲ್ಲಿ ತೊಡಗಿಕೊಳ್ಳಲಾಗುವುದು ಎಂದರು.

ಸೇವಾ ಟ್ರಸ್ಟ್ ಉದ್ಘಾಟಿಸಿ ಮಾತನಾಡಿದ ಅನುರಾಗ ಸೇವಾ ಟ್ರಸ್ಟ್ ಅಧ್ಯಕ್ಷ ಡಿ.ಜಿ.ಸೋಮಶೇಖರ್ ಮೂರ್ತಿ, ತಂದೆ ಸಮಾಜ ಸೇವೆಯಿಂದ ಪ್ರೇರೇಪಿತರಾಗಿ ಅವರ ಮಗ ಗ್ರಾಮೀಣ ಸೇವೆ ಮುಂದುವರೆಸುವ ಉದ್ದೇಶದಿಂದ ಟ್ರಸ್ಟ್ ಸ್ಥಾಪಿಸಿರುವುದು ಇಂದಿನ ಯುವಕರು ಹಾಗೂ ಸಮಾಜಕ್ಕೆ ಮಾದರಿಯಾಗಿದೆ ಎಂದ ಅವರು, ರಸ್ತೆ ಸುರಕ್ಷೆ, ಆರೋಗ್ಯ ಸೇವೆ, ಪರಿಸರ ಸೇವೆ ಜೊತೆಗೆ ಜಾನಪದ ಕಲೆ ಉಳಿವಿಗೆ ಕಾರ್ಯಕ್ರಮ ರೂಪಿಸಿ ಎಂದು ಸಲಹೆ ನೀಡಿದರು.

ದಿ.ಹಗಿನವಾಳು ಮಹದೇವಪ್ಪರವರ ಸಂಸ್ಮರಣೋತ್ಸವದ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರದಲ್ಲಿ ನೂರಾರು ಜನರು ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆದರು. ನಿವೃತ್ತ ಇನ್ಸ್‌ಪೆಕ್ಟರ್ ಜಯಸ್ವಾಮಿ ರಸ್ತೆ ಸುರಕ್ಷತೆ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ದೇವನೂರು ಮಠದ ಮಹಾಂತ ಸ್ವಾಮೀಜಿ ಪ್ರತಿಮೆ ಅನಾವರಣಗೊಳಿಸಿದರು. ಚಿಕ್ಕಮಗಳೂರು ಜಿಲ್ಲೆಯ ಮುರುಘಾಮಠದ ಬಸವಯೋಗಿ ಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು.

ಸಮಾರಂಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ, ಶಿವಬುದ್ಧಿ, ನಟರಾಜು, ಚೆನ್ನಪ್ಪ, ರಮೇಶ್, ಶಿವನಾಗಪ್ಪ ಸೇರಿದಂತೆ ಹಲವರಿದ್ದರು.

ನಿರುದ್ಯೋಗ ಸಮಸ್ಯೆ ನಿವಾರಣೆಗೆ

ಕೇಂದ್ರ, ರಾಜ್ಯ ಸರ್ಕಾರದಿಂದ ಹಲವು ಯೋಜನೆ

ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್

ಹೆಚ್.ಡಿ.ಕೋಟೆ, ಮಾ.29(ಮಂಜು)– ನಿರುದ್ಯೋಗ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಹಲವು ಯೋಜನೆ ರೂಪಿಸಿದೆ ಎಂದು ದಕ್ಷಿಣ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ.ರವಿಶಂಕರ್ ತಿಳಿಸಿದರು.



ಪಟ್ಟಣದ ಸರ್ಕಾರಿ ಪದವಿ ಕಾಲೇಜು, ಸೆಂಟ್ ಮೇರಿಸ್ ಕಾಲೇಜಿಗೆ ಸೋಮವಾರ ಭೇಟಿ ನೀಡಿ ಉಪನ್ಯಾಸಕರಲ್ಲಿ ಮತಯಾಚಿಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಪದವಿ ಮುಗಿಸಿದ ಪದವೀಧರರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಿ ಕಡಿಮೆ ಬಡ್ಡಿ ದರದಲ್ಲಿ ಮುದ್ರಾ ಯೋಜನೆ ಅಡಿ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯ ನೀಡಲಾಗುತ್ತಿದೆ. ಹಾಗೇ ರಾಜ್ಯ ಸರ್ಕಾರಿ ನೌಕರರ ಬಹುದಿನಗಳ ಬೇಡಿಕೆಯಾದ ಕೇಂದ್ರ ಸರ್ಕಾರದ ಸಮಾನ ವೇತನ ಜಾರಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಸಮಿತಿ ನೇಮಕ ಮಾಡಲಾಗಿದೆ ಎಂದರು.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಅರೆಕಾಲಿಕ ಉಪನ್ಯಾಸಕರ ವೇತನ ಹೆಚ್ಚಿಸಲಾಗಿದೆ. ಚುನಾವಣೆಯಲ್ಲಿ ನನ್ನನ್ನು ಚುನಾಯಿಸಿದಲ್ಲಿ ಸರ್ಕಾರದ ಗಮನ ಸೆಳೆದು ಸಮಸ್ಯೆಗಳನ್ನು ಬಗೆಹರಿಸುವುದಾಗಿ ಭರವಸೆ ನೀಡಿದರು.

ಮುಂಬರುವ ಜೂನ್‌ನಲ್ಲಿ ದಕ್ಷಿಣ ಪದವೀಧರರ ಚುನಾವಣೆಗಾಗಿ 1.33 ಲಕ್ಷ ಪದವೀಧರರು ನೋಂದಾಯಿಸಿ ಕೊಂಡಿದ್ದಾರೆ. ಇದರಲ್ಲಿ 70 ಸಾವಿರಕ್ಕೂ ಹೆಚ್ಚು ಸದಸ್ಯರನ್ನು ನಮ್ಮ ಪಕ್ಷದ ಕಾರ್ಯಕರ್ತರು ನೋಂದಾಯಿಸಿದ್ದಾರೆ. ಸುಮಾರು 44 ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ನೋಂದಾಯಿಸಿದ್ದಾರೆ. ಇದರಲ್ಲಿ ತಾಲೂಕಿನ 2200 ಮತದಾರರಿದ್ದು, 1600 ಮತದಾರರನ್ನು ನಮ್ಮ ಪಕ್ಷದವರು ನೋಂದಾಯಿಸಿದ್ದಾರೆ. ನಮ್ಮ ಗೆಲುವಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಜನಪರ ಆಡಳಿತ ಸಹಕಾರಿಯಾಗಲಿದೆ ಎಂದರು.

ಈ ವೇಳೆ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಅಧ್ಯಕ್ಷ ಎಂ.ಅಪ್ಪಣ್ಣ, ತಾಲೂಕು ಬಿಜೆಪಿ ಅಧ್ಯಕ್ಷ ಗುರುಸ್ವಾಮಿ, ಟೌನ್ ಅಧ್ಯಕ್ಷ ನಂದೀಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಸವರಾಜಪ್ಪ, ಜಿಪಂ ಮಾಜಿ ಸದಸ್ಯ ಎಚ್.ಸಿ.ಲಕ್ಷ್ಮಣ್, ತಾಪಂ ಮಾಜಿ ಅಧ್ಯಕ್ಷ ಸಿ.ಕೆ.ಗಿರೀಶ್, ಮುಖಂಡರಾದ ಶಿವರಾಜಪ್ಪ, ಸುನಂದಾ, ವಿವೇಕಾ, ಚನ್ನಪ್ಪ ಪರೀಕ್ಷಿತರಾಜೇ ಅರಸ್, ಸೋಮಚಾರಿ, ಬಿ.ಟಿ.ನರಸಿಂಹ ಮೂರ್ತಿ, ರಾಜು, ಮಾದೇಶ್, ದೀಪು, ಸಿದ್ದರಾಜು, ಗಣಪತಿ, ನಟರಾಜು, ಮಹದೇವಪ್ಪ, ಗುರುಸ್ವಾಮಿ, ನಾಗರಾಜು ಇದ್ದರು.

ಪ್ರತ್ಯೇಕ ಪ್ರಕರಣಗಳಲ್ಲಿ ರಾಜಕಾಲುವೆಗೆ ಬಿದ್ದಿದ್ದ ಹಸುಗಳ ರಕ್ಷಣೆ

ಮೈಸೂರು, ಮಾ.29(ಎಸ್‌ಬಿಡಿ)– ಮೈಸೂರಿನ ಪ್ರತ್ಯೇಕ ಸ್ಥಳಗಳಲ್ಲಿ ರಾಜಕಾಲುವೆಗೆ ಬಿದ್ದಿದ್ದ ಎರಡು ಹಸುಗಳನ್ನು ರಕ್ಷಿಸಲಾಗಿದೆ. ನಗರದ ಗನ್‌ಹೌಸ್ ಬಳಿ ಮೇವು ಅರಸುತ್ತಾ ಅಡ್ಡಾಡುತ್ತಿದ್ದ ಬಿಡಾಡಿ ಹಸುವೊಂದು ಕಾಲು ಜಾರಿ ಪಕ್ಕದ ರಾಜಕಾಲುವೆಗೆ ಬಿದ್ದಿತ್ತು ಈ ವೇಳೆ ಕಾಲಿಗೆ ಪೆಟ್ಟಾಗಿದ್ದರಿಂದ ಮೇಲೇಳಲಾಗದೆ ಅದು ಒದ್ದಾಡುತ್ತಿತ್ತು ಇದನ್ನು ಗಮನಿಸಿದ ಆಟೋ ಚಾಲಕರು ಹಾಗೂ ಸಾರ್ವಜನಿಕರು ಹಸುವನ್ನು ಮೇಲೆತ್ತಲು ಪ್ರಯತ್ನ ನಡೆಸಿದರು. ಅಷ್ಟರಲ್ಲಿ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿಶಾಮಕ ಸಿಬ್ಬಂದಿ, ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ಕಡೆಗೆ ಸಾರ್ವಜನಿಕರ ನೆರವಿನೊಂದಿಗೆ ಹಸುವನ್ನು ರಕ್ಷಿಸಿದರು.

ಮತ್ತೊಂದು ಪ್ರಕರಣದಲ್ಲಿ ಕುವೆಂಪುನಗರ ಅಪೋಲೋ ಆಸ್ಪತ್ರೆ ಬಳಿಯ ರಾಜಕಾಲುವೆಗೆ ಆಯತಪ್ಪಿ ಬಿದ್ದಿದ್ದ ಹಸುವನ್ನು ಸಾರ್ವಜನಿಕರೇ ರಕ್ಷಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ತೆರಳುವಷ್ಟರಲ್ಲಿ ಜನರೇ ಹಸುವನ್ನು ಮೋರಿಯಿಂದ ಮೇಲೆತ್ತಿ ರಕ್ಷಿಸಿದ್ದರು ಎಂದು ಅಗ್ನಿಶಾಮಕ ಠಾಣೆ ಸಿಬ್ಬಂದಿ ತಿಳಿಸಿದ್ದಾರೆ.

ಹಸುಗಳ ಪಾಲಕರು ಹಾಲು ಕರೆದ ಬಳಿಕ ಅವುಗಳನ್ನು ರಸ್ತೆಗೆ ಬಿಟ್ಟು ಬಿಡುತ್ತಾರೆ. ಅವು ಎಲ್ಲೆಂದರಲ್ಲಿ ಅಡ್ಡಾಡಿ ಸಿಕ್ಕಿದ್ದನ್ನು ಹೆಕ್ಕುತ್ತವೆ. ಆಹಾರ ಹುಡುಕುವ ಧಾವಂತದಲ್ಲಿ ಹೀಗೆ ಮೋರಿಗೆ ಬಿದ್ದು ಅಥವಾ ವಾಹನಗಳ ಡಿಕ್ಕಿಯಿಂದ ಪೆಟ್ಟು ತಿನ್ನುವ ಘಟನೆಗಳು ನಡೆಯುತ್ತಲೇ ಇರುತ್ತವೆ. ಇನ್ನಾದರೂ ಮೂಕ ಪ್ರಾಣಿಗಳನ್ನು ಅಪಾಯಕ್ಕೆ ದೂಡದೆ ಸೂಕ್ತ ರೀತಿಯಲ್ಲಿ ಪಾಲನೆ ಮಾಡಬೇಕು. ಈ ಬಗ್ಗೆ ನಗರ ಪಾಲಿಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಎಸ್‌ಆರ್‌ಹೆಚ್ ವಿರುದ್ಧ ರಾಜಸ್ತಾನ್‌ಗೆ ರಾಯಲ್ ಗೆಲುವು

ಪುಣೆ, ಮಾ.29– ನಾಯಕ ಸಂಜು ಸ್ಯಾಮ್ಸನ್ ಅರ್ಧಶತಕ, ಕನ್ನಡಿಗ ದೇವದತ್ ಪಡಿಕ್ಕಲ್ ಸಮಯೋಚಿತ ಬ್ಯಾಟಿಂಗ್ ಹಾಗೂ ಯಜುವೇಂದ್ರ ಚಹಲ್ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ರಾಜಸ್ತಾನ್ 61 ರನ್‌ಗಳ ರಾಯಲ್ ಗೆಲುವು ದಾಖಲಿಸಿದೆ.



ಇಲ್ಲಿನ ಮಹಾರಾಷ್ಟ್ರ ರಾಜ್ಯ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ತಾನ್‌ಗೆ ಆರಂಭಿಕರಾದ ಜೋಸ್ ಬಟ್ಲರ್ ಹಾಗೂ ಯಶಸ್ವಿ ಜೈಸ್ವಾಲ್ ಮೊದಲ ವಿಕೆಟ್‌ಗೆ 58 ರನ್‌ಗಳ ಉತ್ತಮ ಆರಂಭ ನೀಡಿದರು. ಈ ವೇಳೆ 20 ರನ್ ಗಳಿಸಿದ್ದ ಜೈಸ್ವಾಲ್ ಕ್ಯಾಚ್ ನೀಡಿ ಪೆವಿಲಿಯನ್ ಸೇರಿಕೊಂಡರು. ಇವರ ಹಿಂದೆಯೇ ಜೋಸ್ ಬಟ್ಲರ್ 35 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜೊತೆಯಾದ ನಾಯಕ ಸಂಜು ಸ್ಯಾಮ್ಸನ್ 27 ಎಸೆತಗಳಲ್ಲಿ 3 ಬೌಂಡರಿ ಹಾಗೂ 5 ಸಿಕ್ಸರ್‌ನಿಂದ 55 ರನ್ ಹಾಗೂ ಕನ್ನಡಿಗ ದೇವದತ್ ಪಡಿಕ್ಕಲ್ 29 ಎಸೆತಗಳಲ್ಲಿ 4 ಬೌಂಡರಿ ಹಾಗೂ 2 ಸಿಕ್ಸರ್‌ನಿಂದ 41 ರನ್ ಗಳಿಸಿದರು. ಉಳಿದಂತೆ ಶಿಮ್ರಾನ್ ಹೆಟ್ಮೆಯರ್ 32, ರಿಯಾನ್ ಪರಾಗ್ 12 ರನ್ ಗಳಿಸಿದರು. ಅಂತಿಮವಾಗಿ ರಾಜಸ್ತಾನ್ ರಾಯಲ್ಸ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 210 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಎಸ್‌ಆರ್‌ಹೆಚ್ ಪರ ಬೌಲಿಂಗ್‌ನಲ್ಲಿ ಉಮ್ರಾನ್ ಮಲ್ಲಿಕ್, ಟಿ.ನಟರಾಜನ್ ತಲಾ 2, ಭುವನೇಶ್ವರ್ ಕುಮಾರ್, ಶೆಫರ್ಡ್ ತಲಾ ಒಂದೊಂದು ವಿಕೆಟ್ ಪಡೆದರು.

211 ರನ್‌ಗಳ ಬೃಹತ್ ಗುರಿ ಬೆನ್ನತ್ತಿದ ಎಸ್‌ಆರ್‌ಹೆಚ್ ಆರಂಭ ಉತ್ತಮವಾಗಿರಲಿಲ್ಲ. ತಂಡದ ಮೊತ್ತ 78 ರನ್ ಆಗುವಷ್ಟರಲ್ಲಿ ಪ್ರಮುಖ 6 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಈ ವೇಳೆ ಕ್ರೀಸ್‌ಗೆ ಬಂದ ಏಡನ್ ಮಾರ್ಕ್ರಮ್ 41 ಎಸೆತಗಳಲ್ಲಿ 5 ಬೌಂಡರಿ ಹಾಗೂ 2 ಸಿಕ್ಸ್‌ನೊಂದಿಗೆ ಅಜೇಯ 57 ರನ್ ಗಳಿಸಿ ತಂಡದ ಮೊತ್ತ ನೂರರ ಗಡಿ ದಾಟಿಸಿದರು. ಅಂತಿಮವಾಗಿ ಎಸ್‌ಆರ್‌ಹೆಚ್ ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 149 ರನ್ ಗಳಿಸುವ ಮೂಲಕ 61ರನ್‌ಗಳ ಸೋಲು ಅನುಭವಿಸಿತು. ತಂಡದ ಪರ ವಾಷಿಂಗ್ಟನ್ ಸುಂದರ್ 40, ಶೆಫರ್ಡ್ 24 ರನ್ ಗಳಿಸಿದರು. ಬೌಲಿಂಗ್‌ನಲ್ಲಿ ರಾಜಸ್ತಾನ್ ಪರ ಯಜುವೇಂದ್ರ ಚಹಲ್ 3, ಟ್ರೆಂಟ್ ಬೌಲ್ಟ್, ಪ್ರಸಿದ್ಧ ಕೃಷ್ಣ ತಲಾ 2 ವಿಕೆಟ್ ಪಡೆದರು. ಉತ್ತಮ ಬ್ಯಾಟಿಂಗ್ ಪ್ರದರ್ಶನ ನೀಡಿದ ಸಂಜು ಸ್ಯಾಮ್ಸನ್ ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಬಾಬೂಜಿ, ಅಂಬೇಡ್ಕರ್ ಜಯಂತಿ ವಿಜೃಂಭಣೆ ಆಚರಣೆಗೆ ನಿರ್ಧಾರ

ತಿ.ನರಸೀಪುರ ಮಾ.29(ಎಸ್.ಕೆ)– ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ 131ನೇ ಜಯಂತಿ ಹಾಗೂ ಹಸಿರು ಕ್ರಾಂತಿ ಹರಿಕಾರ ಡಾ.ಬಾಬುಜಗಜೀವನ್ ರಾಂ ಅವರ 115ನೇ ಜನ್ಮ ದಿನಾಚರಣೆಯನ್ನು ನಿಗದಿತ ದಿನದಂದು ಸಾಂಪ್ರದಾಯಿಕವಾಗಿ ಮತ್ತು ಪ್ರತ್ಯೇಕವಾಗಿ ವಿಜೃಂಭಣೆಯಿಂದ ಆಚರಿಸಲು ಸೋಮವಾರ ನಡೆದ ಪೂರ್ವಭಾವಿ ಸಭೆಯಲ್ಲಿ ನಿರ್ಧರಿಸಲಾಯಿತು.



ಪಟ್ಟಣದ ತಾಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಜಯಂತಿ ಆಚರಣೆಯ ಪೂರ್ವಭಾವಿ ಸಭೆಯಲ್ಲಿ ಏ.5 ರಂದು ಡಾ.ಬಾಬುಜಗಜೀವನ್ ರಾಂ ಜನ್ಮದಿನಾಚರಣೆಯನ್ನು ಹಾಗೂ ಏ.14 ರಂದು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯಿಂದ ಆಚರಿಸಲಾಗುವುದು. ಮತ್ತೊಂದು ದಿನವನ್ನು ನಿಗದಿಗೊಳಿಸಿ ತಾಲೂಕು ಆಡಳಿತದ ಸಹಭಾಗಿತ್ವದಲ್ಲಿ ಸಂಘ ಸಂಸ್ಥೆಗಳ ಜೊತೆಗೂಡಿ ಎರಡೂ ಜಯಂತಿಯನ್ನು ಪ್ರತ್ಯೇಕವಾಗಿ ವಿಜೃಂಭಣೆಯಿಂದ ಆಚರಿಸಲು ತೀರ್ಮಾನಿಸಲಾಯಿತು.

ಶಾಸಕ ಎಂ.ಅಶ್ವಿನ್ ಕುಮಾರ್ ಮಾತನಾಡಿ, ಚುನಾವಣೆಗಳು ಹಾಗೂ ಕೋವಿಡ್‌ನಿಂದಾಗಿ ಗಣ್ಯರ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಣೆ ಮಾಡಲು ಸಾಧ್ಯವಾಗಿರಲಿಲ್ಲ. ಈ ವರ್ಷವಾದರೂ ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ಜಯಂತಿಯನ್ನು ಅದ್ಧೂರಿಯಾಗಿ ಆಚರಿಸಲು ಸಿದ್ಧರಾಗೋಣ. ಸಂಘ ಸಂಸ್ಥೆಗಳ ಮುಖಂಡರ ಸಲಹೆಯನ್ನು ಪರಿಗಣಿಸಿ ಸಿದ್ಧತೆಗಳನ್ನು ಮಾಡಿಕೊಳ್ಳಲಾಗುವುದು. ಸಾಂಪ್ರದಾಯಿಕ ಹಾಗೂ ವಿಜೃಂಭಣೆಯ ಜಯಂತಿಗೆ ತಾಲೂಕು ಆಡಳಿತ ಭಾಗಿಯಾಗಬೇಕು. ಅದಕ್ಕಾಗಿ ಮತ್ತೊಂದು ಸಭೆ ನಡೆಸಲಾಗುವುದು ಎಂದು ತಿಳಿಸಿದರು.


ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ಸಂಘದ ಅಧ್ಯಕ್ಷ ಕರೋಹಟ್ಟಿ ಮಹದೇವಯ್ಯ ಮಾತನಾಡಿ, ಏ.14 ರಂದು ತಾಲೂಕು ಆಡಳಿತ ಕಚೇರಿ ಸಭಾಂಗಣ ಇಲ್ಲವೇ ಬಹಿರಂಗ ವೇದಿಕೆಯಲ್ಲಿ ವಾಡಿಕೆಯಂತೆ ಜಯಂತಿ ಆಚರಿಸಲಿ. ಸಂಘದಿಂದ ಮತ್ತೊಂದು ದಿನವನ್ನು ನಿಗದಿಗೊಳಿಸಿ ನಿಮ್ಮ ಗಮನಕ್ಕೆ ತರುತ್ತೇವೆ. ಶಾಸಕರು, ಸಂಸದರ ನೇತೃತ್ವದಲ್ಲಿ ಮುಖ್ಯಮಂತ್ರಿಗಳನ್ನು ಆಹ್ವಾನಿಸಿ ಅಂಬೇಡ್ಕರ್ ಜಯಂತಿಯನ್ನು ಹಬ್ಬದಂತೆ ಆಚರಿಸಲಾಗುವುದು. ಈ ಬಗ್ಗೆ ಈಗಾಗಲೇ ಸಂಘದಲ್ಲಿ ಚರ್ಚೆಯನ್ನು ನಡೆಸಲಾಗಿದೆ ಎಂದು ಮಾಹಿತಿ ನೀಡಿದರು.

ಡಾ.ಬಾಬುಜಗಜೀವನ್ ರಾಂ ಒಕ್ಕೂಟದ ಮಾಜಿ ಅಧ್ಯಕ್ಷ ಮೂಗೂರು ಸಿದ್ದರಾಜು ಮಾತನಾಡಿ, ಸಾಂಪ್ರದಾಯಿಕ ಜಯಂತಿ ಮುಗಿದ ಬಳಿಕ ಕೇಂದ್ರ ಸಚಿವರ ದಿನಾಂಕ ಪಡೆದು ಬಾಬೂಜಿ ಜಯಂತಿ ಆಚರಿಸಲು ದಿನವನ್ನು ನಿಗದಿಪಡಿಸಲಾಗುವುದು. ಶಾಸಕರು ಹಾಗೂ ತಾಲೂಕು ಆಡಳಿತದ ಮಾರ್ಗದರ್ಶನದಲ್ಲಿ ಅದ್ಧೂರಿ ಜಯಂತಿಗೆ ಸಿದ್ಧರಾಗುತ್ತೇವೆ ಎಂದು ತಿಳಿಸಿದರು.

ಜಯಂತಿ ಆಚರಣೆಯ ಪೂರ್ವಭಾವಿ ಸಭೆಗೆ ಅನ್ಯ ಸಮುದಾಯಗಳ ಸಂಘ–ಸಂಸ್ಥೆಗಳ ಅಧ್ಯಕ್ಷರು, ಮುಖಂಡರನ್ನು ಆಹ್ವಾನಿಸದ್ದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಯಿತು. ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಎ.ಶಿವಕುಮಾರ್ ಬಡ್ಡು ಜಯಂತಿಗಳಿಗೆ ಅಧಿಕಾರಿಗಳಿಂದ ಹಫ್ತಾ ವಸೂಲಿ ಮಾಡಬಾರದೆಂದು ಮನವಿ ಮಾಡಿದರು. ತಹಸೀಲ್ದಾರ್ ಬಿ.ಗಿರಿಜಾ, ತಾಪಂ ಇಓ ಸಿ.ಕೃಷ್ಣ, ಸಮಾಜ ಕಲ್ಯಾಣಾಧಿಕಾರಿ ರಾಮೇಗೌಡ, ಪಿಎಸ್‌ಐ ಎಂ.ಆರ್.ರಮೇಶ್, ತಾ.ಪಂ ಮಾಜಿ ಸದಸ್ಯರಾದ ಕುಕ್ಕೂರು ಗಣೇಶ್, ರಾಮಲಿಂಗಯ್ಯ, ಬಾಬುಜಗಜೀವನ್ ರಾಂ ಸಂಘದ ಅಧ್ಯಕ್ಷ ಮಲಿಯೂರು ಶಂಕರ್, ದಲಿತ ಸಂಘಟನೆಗಳ ಒಕ್ಕೂಟದ ಸಂಘಟನಾ ಸಂಚಾಲಕ ಎಸ್.ಆರ್. ಶಶಿಕಾಂತ್ ಸೋಸಲೆ, ದಸಂಸ ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್, ತಾಲೂಕು ಸಂಚಾಲಕ ಕುಕ್ಕೂರು ರಾಜು, ಬನ್ನೂರು ಪುರಸಭೆ ಸದಸ್ಯ ಶಿವಣ್ಣ, ಲೋಕೋಪಯೋಗಿ ಎಇಇ ನಂಜುಂಡೇಗೌಡ, ರೇಷ್ಮೆ ಸಹಾಯಕ ನಿರ್ದೇಶಕ ಸಿ.ಆರ್.ಕೃಷ್ಣ, ಮುಖ್ಯಾಧಿಕಾರಿ ಬಸವರಾಜು, ಮುಖಂಡರಾದ ಸಿ.ಪುಟ್ಟಲಿಂಗಯ್ಯ, ಎಸ್.ನಂಜುಂಡಯ್ಯ, ಸಿ.ಡಿ.ವೆಂಕಟೇಶ್, ವಿಜಾಪುರ ಶಿವಶಂಕರ್ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಕೃಷಿ ಹೊಂಡ ಯೋಜನೆ ಮುಂದುವರೆಸಲು ಚಿಂತನೆ

- ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ
- ನರೇಗಾ ಯೋಜನೆಯಡಿ ಹೊಂಡ ನಿರ್ಮಾಣ ಪರಿಶೀಲನೆ





ಬೆಂಗಳೂರು, ಮಾ.29(ಕೆಎಂಶಿ)–ಕೃಷಿ ಹೊಂಡ ಯೋಜನೆ ಮುಂದುವರೆಸುವ ಬಗ್ಗೆ ಪುನರ್ ಪರಿಶೀಲನೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನಸಭೆಯಲ್ಲಿ ತಿಳಿಸಿದರು.

ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅನುದಾನ ಬೇಡಿಕೆ ಮೇಲೆ ನಡೆದ ಚರ್ಚೆಯಲ್ಲಿ ಉತ್ತರಿಸುವ ಸಂದರ್ಭದಲ್ಲಿ ಮಧ್ಯ ಪ್ರವೇಶಿಸಿ ಮಾತನಾಡಿದ ಅವರು, ಹೊಂಡಗಳಿಂದ ರೈತರಿಗೆ ಅನುಕೂಲ ಮತ್ತು ಅನಾನುಕೂಲದ ಬಗ್ಗೆ ವಿಸ್ತೃತ ವರದಿಯನ್ನು ಕೃಷಿ ವಿವಿಗಳಿಂದ ತರಿಸಿ, ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು ಎಂದರು.

ಒಂದು ತಾಲೂಕಿನಲ್ಲಿ ಹೆಚ್ಚು, ಮತ್ತೊಂದು ತಾಲೂಕಿನಲ್ಲಿ ಕಡಿಮೆ ಕೃಷಿ ಹೊಂಡ ನಿರ್ಮಾಣವಾಗಿದೆ. ಸರಿಸಮಾನಾಗಿ ನಿರ್ಮಾಣವಾಗಿಲ್ಲ. ಮಳೆ ಕಡಿಮೆಯಾದ ಪ್ರದೇಶಕ್ಕೆ ಅನುಕೂಲವಾಗಲಿದೆ.

ಈ ಕೃಷಿ ಹೊಂಡ ನಿರ್ಮಾಣ ಮಾಡುವ ಯೋಜನೆ 2019ಕ್ಕೆ ಮುಕ್ತಾಯವಾಗಿದೆ. ಅವಶ್ಯಕತೆ ಇರುವ ಕಡೆ ಕೃಷಿ ಹೊಂಡ ನಿರ್ಮಾಣ ಮಾಡಬಾರದು ಎಂದಿಲ್ಲ. ಅಗತ್ಯವಿರುವ ಕಡೆ ನರೇಗಾ ಯೋಜನೆಯಡಿ ನಿರ್ಮಿಸಬಹುದಾಗಿದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಬಿ.ಸಿ.ಪಾಟೀಲ್, 2014ರಿಂದ 19ರವರೆಗೆ ಕೃಷಿ ಹೊಂಡವನ್ನು ಮಿಷನ್ ಮೋಡ್‌ನಲ್ಲಿ ನಿರ್ಮಿಸಲಾಗಿತ್ತು. ಈಗ ನರೇಗಾ ಯೋಜನೆಯಡಿ ಕೃಷಿ ಹೊಂಡ ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲಾಗಿದೆ ಎಂದರು. ಕೃಷಿಕನನ್ನು ಶಕ್ತಿವಂತನನ್ನಾಗಿ ಮಾಡುವ ಹಲವು ಕಾರ್ಯಕ್ರಮಗಳನ್ನು ರೂಪಿಸಿದ್ದ ಪರಿಣಾಮ ರಾಜ್ಯದಲ್ಲಿ ರೈತ ಆತ್ಮಹತ್ಯೆ ಪ್ರಕರಣಗಳು ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿವೆ.

ಸೂಟುಬೂಟು ಹಾಕಿಕೊಂಡಿರುವವರೆಲ್ಲರೂ ಇಂದು ಕೃಷಿ ಕಡೆ ಆಕರ್ಷಿತರಾಗುತ್ತಿದ್ದಾರೆ. ನಾವು ಇಲಾಖೆಯಲ್ಲಿ ಹೊಸ ಹೊಸ ಕಾರ್ಯಕ್ರಮಗಳನ್ನು ರೂಪಿಸುತ್ತಿರುವ ಪರಿಣಾಮ ಅನ್ನದಾತ ಶಕ್ತಿವಂತ ನಾಗುತ್ತಿದ್ದಾನೆ. ಕೃಷಿಕರ ಮಕ್ಕಳ ಉನ್ನತ ವಿದ್ಯಾಭ್ಯಾಸಕ್ಕೆ ನಮ್ಮ ಸರ್ಕಾರ ವಿದ್ಯಾರ್ಥಿ ವೇತನವನ್ನು ಕೊಡುತ್ತಿದೆ. 2020–21ರ ಬಜೆಟ್‌ನಲ್ಲಿ ಕೃಷಿ ವಿವಿಗಳಲ್ಲಿ ರೈತರ ಮಕ್ಕಳಿಗೆ ಶೇ.50ರಷ್ಟು ಮೀಸಲಾತಿ ನೀಡಿದ್ದೇವೆ. ಪರಿಣಾಮ 183 ಸೀಟುಗಳು ಲಭ್ಯವಾಗಿದೆ ಎಂದು ಹೇಳಿದರು.

ರಾಜ್ಯದ ಸುಮಾರು 7 ವಿವಿಗಳಲ್ಲಿ 700 ಕೋಟಿ ರೂ. ವೆಚ್ಚ ಮಾಡಿ ರೈತರ ಮಕ್ಕಳಿಗೆ ಮೂರು ವರ್ಷಗಳ ಕಾಲ ತರಬೇತಿ ನೀಡುತ್ತೇವೆ. ಇದಕ್ಕಾಗಿ ಖಾಸಗಿ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಖಾಸಗಿ ಕಂಪನಿಯವರು ಶೇ.85ರಷ್ಟು ಅಂದರೆ 555 ಕೋಟಿ ಹಾಗೂ ಶೇ.15ರಷ್ಟು ರಾಜ್ಯ ಸರ್ಕಾರ ಬಂಡವಾಳ ಹೂಡಿಕೆ ಮಾಡಲಿದೆ. ವಿಶ್ವವಿದ್ಯಾಲಯಗಳಲ್ಲಿ ಅಗತ್ಯವಿರುವ ತರಬೇತಿಯನ್ನು ರೈತರ ಮಕ್ಕಳಿಗೆ ತರಬೇತಿ ನೀಡಲಿದೆ ಎಂದು ಮಾಹಿತಿ ನೀಡಿದರು.


ರಾಜ್ಯದ 11 ಕಡೆ ಆಹಾರ ಸಂಸ್ಕರಣಾ ಘಟಕಗಳನ್ನು ಸ್ಥಾಪನೆ ಮಾಡಲಿದ್ದೇವೆ. ರೈತರು ತಾವು ಬೆಳೆದ ಬೆಳೆಗೆ ಸಕಾಲದಲ್ಲಿ ಬೆಲೆ ಸಿಗದಿದ್ದಾಗ ತಮ್ಮ ಧಾನ್ಯಗಳನ್ನು ಸಂಗ್ರಹಿಸಿಟ್ಟುಕೊಳ್ಳಬಹುದು. ಇದರಿಂದ ಆಹಾರ ಪದಾರ್ಥಗಳು ಕೆಡುವುದಿಲ್ಲ. ಅವರು ತಮಗೆ ಬೇಕಾದ ಸಂದರ್ಭದಲ್ಲಿ ಮಾರಾಟ ಮಾಡಿಕೊಳ್ಳಬಹುದು ಎಂದು ಸಲಹೆ ಮಾಡಿದರು.

ಈ ಮೊದಲು ಸಿರಿಧಾನ್ಯಗಳು ಬಡವರ ಧಾನ್ಯಗಳಾಗಿದ್ದವು. ಈ ಧಾನ್ಯಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಬಡವರು ಮಾತ್ರ ಖರೀದಿ ಮಾಡುತ್ತಿದ್ದರು. ಈಗ ರಕ್ತದೊತ್ತಡ, ಸಕ್ಕರೆ ಖಾಯಿಲೆ ಬಂದ ಮೇಲೆ ಸಿರಿಧಾನ್ಯಗಳು ಶ್ರೀಮಂತರ ಧಾನ್ಯಗಳಾಗಿವೆ. ನಮ್ಮ ಸರ್ಕಾರ ಇದಕ್ಕೆ ಹೆಚ್ಚಿನ ಪ್ರೋತ್ಸಾಹ ಕೊಡುತ್ತದೆ ಎಂದರು.

ಪ್ರಸಕ್ತ ವರ್ಷ ರಾಜ್ಯದ ನಾಲ್ಕು ಭಾಗಗಳಲ್ಲಿ ಸಿರಿಧಾನ್ಯಗಳ ಮೇಳ ನಡೆಸುವ ಚಿಂತನೆ ಇದೆ. ಶೀಘ್ರದಲ್ಲೇ ಸ್ಥಳ, ದಿನಾಂಕಗಳನ್ನು ಘೋಷಣೆ ಮಾಡಲಿದ್ದೇವೆ. ಇದರಿಂದ ಸಿರಿಧಾನ್ಯಕ್ಕೆ ಹೆಚ್ಚಿನ ಬೇಡಿಕೆ ಬರಲಿದೆ ಎಂದರು. ಇನ್ನು ಮುಂದೆ ತಿಂಗಳಿಗೆ ಒಂದು ಬಾರಿ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟಕ್ಕೆ ಸಿರಿಧಾನ್ಯದ ಆಹಾರ ನೀಡಲು 10 ಕೋಟಿ ರೂ. ಅನುದಾನ ಮೀಸಲಿರಿಸಿದ್ದೇವೆ. ಇದರಿಂದ ಮಕ್ಕಳ ಆರೋಗ್ಯವೂ ಸದೃಢವಾಗಿರುತ್ತದೆ ಎಂದು ಅಭಿಪ್ರಾಯಪಟ್ಟರು.

ರಾಜ್ಯ ಸರ್ಕಾರ ಯಂತ್ರೋಪಕರಣಗಳು, ಡೀಸೆಲ್ ಖರೀದಿಗೆ ಸಬ್ಸಿಡಿಯನ್ನು ನೀಡುತ್ತಿದೆ. ಕೃಷಿ ಹೊಂಡವನ್ನು ನರೇಗಾ ಮೂಲಕ ಉತ್ತೇಜನ ನೀಡುತ್ತಿದ್ದೇವೆ. ರೈತರು ಖರೀದಿಸುವ ಯಂತ್ರೋಪಕರಣಕ್ಕೆ ಸಬ್ಸಿಡಿ ಹಣವನ್ನು ನಿಲ್ಲಿಸಿಲ್ಲ ಎಂದು ಸ್ಪಷ್ಟಪಡಿಸಿದರು.

2ನೇ ವರ್ಷದ ಸವಿನೆನೆಪು



ಸಣ್ಣೆದೆ ಗೌಡ

ನೀವು ನಮ್ಮನ್ನಗಲಿ ಇಂದಿಗೆ 2 ವರ್ಷವಾಯಿತು ಸದಾ ನಿಮ್ಮ ನೆನೆಪಿನಲ್ಲಿರುವ
ದು:ಖಿತಪ್ತರು: ಕುಟುಂಬವರ್ಗ, ಬೊಂತಗಳ್ಳಿ

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿ ದಾರರು, ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ, ಹೊಸಬೂದನೂರು ಗ್ರಾಮದ ಮನೆ ನಂ. 264 ರಲ್ಲಿ ವಾಸವಾಗಿ ರುವ ಸ್ವತ್ತಿನ ಮಾಲೀಕರಾದ ಶ್ರೀಮತಿ ಪುಟ್ಟ ಗೌರಮ್ಮ ಕೋಂ ಲೇಟ್ ಚಿಕ್ಕಸ್ವಾಮಿ ಹಾಗೂ ಇವರ ಕುಟುಂಬಸ್ಥರಿಂದ ಶುದ್ಧ ಕ್ರಯಪತ್ರದ ಮೂಲಕ ಖರೀದಿಸಲು ತೀರ್ಮಾನಿಸಿರುತ್ತಾರೆ. ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧ ಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯ 7 (ಏಳು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು. ತಪ್ಪಿದಲ್ಲಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಕ್ರಯದ ವ್ಯವಹಾರವನ್ನು ಸಂಪೂರ್ಣಗೊಳಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಐಟಂ ನಂ. 1

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ನಾಡನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 141 ರಲ್ಲಿ ವಸತಿ ಉದ್ದೇಶಕ್ಕೆ ಅನ್ಯಕ್ರಾಂತವಾಗಿರುವ 2 ಎಕರೆ 06 ಗುಂಟೆ ಅಭಿವೃದ್ಧಿ ಹೊಂದದ ಜಮೀನಿಗೆ ಚಕ್ಕುಬಂದಿ:–

ಪೂರ್ವಕ್ಕೆ: ಸರ್ವೆ ನಂ. 141ರ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 110 ಮತ್ತು 109 ರ ಜಮೀನು ಹಾಗೂ ರಸ್ತೆ ; ಉತ್ತರಕ್ಕೆ: ಸರ್ವೆ ನಂ. 141/3 ; ದಕ್ಷಿಣಕ್ಕೆ: ಸರ್ವೆ ನಂ. 141 ರ ಉಳಿಕೆ ಜಮೀನು.

ಐಟಂ ನಂ. 2

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ನಾಡನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ. 141/3 ರಲ್ಲಿ 0.10 ಗುಂಟೆ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಸರ್ವೆ ನಂ. 141ರ ಉಳಿಕೆ ಜಮೀನು ; ಪಶ್ಚಿಮಕ್ಕೆ: ಸರ್ವೆ ನಂ. 110 ಮತ್ತು ರಸ್ತೆ ; ಉತ್ತರಕ್ಕೆ: ಟಿ.ನರಸೀಪುರ ರಸ್ತೆ ; ದಕ್ಷಿಣಕ್ಕೆ: ಸರ್ವೆ ನಂ. 141/4.

Sd/- J.M. Aiyanna B.Sc., LL.B.
Advocate, KAR No. 1635/95
Office: #1143/1E, 1st Floor,
Chanakya Circle, Geetha Road,
Chamarajapuram, Mysore-570 005
Ph: Off: 0821-4287199, 2330199

ದಿನಾಂಕ: 29.03.2022
ಸ್ಥಳ: ಮೈಸೂರು

ಸಾರ್ವಜನಿಕ ತಿಳುವಳಿಕೆ ಪತ್ರ

ನಮ್ಮ ಕಕ್ಷಿದಾರರಾದ ಮೈಸೂರು ನಗರ, ಮಹದೇಶ್ವರ ಬಡಾವಣೆ, ತ್ರಿನೇತ್ರ ವೃತ್ತ, ಮನೆ ನಂ. 206/4 ರಲ್ಲಿ ವಾಸವಾಗಿರುವ ಸುಮಾರು 42 ವರ್ಷ ವಯಸ್ಸುಳ್ಳ ಶ್ರೀಮತಿ ಟಿ. ಲತಾ ಕೋಂ ಲೇ। ರಮೇಶ್.ಜೆ ರವರ ಇರಾದೆಯ ಮೇರೆಗೆ ನಾವು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ:

ನಮ್ಮ ಕಕ್ಷಿದಾರರ ಪತಿಯವರಾದ ರಮೇಶ.ಜೆ. ಬಿನ್ ಲೇಟ್ ಜವರೇಗೌಡರು ದಿನಾಂಕ 26.09.2021 ರಂದು ಮೃತರಾಗಿರುತ್ತಾರೆ, ಸದರಿ ದಿವಂಗತ ರಮೇಶ್.ಜೆ. ರವರ ತಂದೆಯವರಾದ ಜವರೇಗೌಡರು ಕಾಲವಾಗಿ ಈಗ್ಗೆ ಸುಮಾರು 25 ವರ್ಷಗಳ ಮೇಲಾಗಿರುತ್ತದೆ. ಸದರಿ ದಿವಂಗತ ರಮೇಶ್.ಜೆ. ರವರಿಗೆ ಅವರ ತಾಯಿ ಶ್ರೀಮತಿ ಸಾವಿತ್ರಮ್ಮ ಮತ್ತು ನಮ್ಮ ಕಕ್ಷಿದಾರರನ್ನು ಹೊರತುಪಡಿಸಿ ಬೇರೆ ಯಾರೂ ಕಾನೂನುಬದ್ಧ ವಾರಸುದಾರರು ಇರುವುದಿಲ್ಲ. 'ಎ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳು ನಮ್ಮ ಕಕ್ಷಿದಾರರ ಮತ್ತು ಅವರ ಅತ್ತೆಯವರಾದ ಸದರಿ ಶ್ರೀಮತಿ ಸಾವಿತ್ರಮ್ಮನವರ ಒಟ್ಟು ಕುಟುಂಬದ ಸ್ವತ್ತುಗಳಾಗಿ ರುತ್ತವೆ. ನಮ್ಮ ಕಕ್ಷಿದಾರರ ಪತಿಯವರಾದ ರಮೇಶ್.ಜೆ. ಮೃತರಾದಂದಿನಿಂದ 'ಎ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳು ನಮ್ಮ ಕಕ್ಷಿದಾರರ ಮತ್ತು ಅವರ ಅತ್ತೆಯವರ ಸಂಪೂರ್ಣ ಜಂಟಿ ಮಾಲೀಕತ್ವಕ್ಕೊಳಪಟ್ಟಿದ್ದು, ಅವರ ಸಂಪೂರ್ಣ ಜಂಟಿ ಸ್ವಾಧೀನಾನುಭವದಲ್ಲಿ ಈವರೆವಿಗೂ ನಿರ್ಬಾಧಿತವಾಗಿ ಮುಂದುವರೆಯುತ್ತಾ ಬರುತ್ತಿರುತ್ತದೆ. ಮುಂದುವರೆದು 'ಎ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳ ಮೇಲೆ ನಮ್ಮ ಕಕ್ಷಿದಾರರನ್ನು ಮತ್ತು ಅವರ ಸದರಿ ಅತ್ತೆಯವರನ್ನು ಹೊರತುಪಡಿಸಿ ಬೇರೆ ಯಾರಿಗೇ ಆಗಲೀ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಸ್ವಾಧೀನ ವಗೈರೆ ಇರುವುದಿಲ್ಲ. ನಮ್ಮ ಕಕ್ಷಿದಾರರು ಮತ್ತು ಅವರ ಸದರಿ ಅತ್ತೆಯವರು 'ಎ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳ ಮೇಲೆ ಸಮಾನ ಹಕ್ಕು, ಅಧಿಕಾರ, ಮತ್ತು ಹಿತಾಸಕ್ತಿವುಳ್ಳವರಾಗಿರುತ್ತಾರೆ, 'ಎ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳ ಮೇಲೆ ನಮ್ಮ ಕಕ್ಷಿದಾರರ ಅತ್ತೆಯವರಾದ ಸದರಿ ಶ್ರೀಮತಿ ಸಾವಿತ್ರಮ್ಮನವರಿಗೆ ಯಾವುದೇ ಸಂಪೂರ್ಣ ಮತ್ತು ಪ್ರತ್ಯೇಕ ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಸ್ವಾಧೀನ ವಗೈರೆ ಇರುವುದಿಲ್ಲ.

ನಮ್ಮ ಕಕ್ಷಿದಾರರ ಅತ್ತೆಯವರಾದ ಸದರಿ ಶ್ರೀಮತಿ ಸಾವಿತ್ರಮ್ಮ ನವರು ಮೇಲ್ಕಂಡ ಅಂಶಗಳ ಉಪಸ್ಥಿತಿಯಲ್ಲಿ ನಮ್ಮ ಕಕ್ಷಿದಾರರ ಗಮನಕ್ಕೆ ಬಾರದಂತೆ 'ಎ' ಷೆಡ್ಯೂಲ್ ಸ್ವತ್ತನ್ನು ದಿನಾಂಕ 21.03.2022 ರ (ಎಸ್.ಆರ್.ಪಿ.–1–07984–2021–22 ಮತ್ತು ಸಿಡಿ ಸಂಖ್ಯೆ ಎಸ್.ಆರ್.ಪಿ.ಡಿ.941) ನೋಂದಾಯಿತ ಕ್ರಯಪತ್ರದ ಮೂಲಕ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಪಿ. ಹೊಸಳ್ಳಿ ಗ್ರಾಮ, ಗರಡಿ ಬೀದಿ, ಮನೆ ನಂ. 828 ರಲ್ಲಿ ವಾಸವಾಗಿರುವ ಶ್ರೀಮತಿ ತುಳಸಿ.ಕೆ. ಕೋಂ. ಬಿ. ವೆಂಕಟೇಶ್ ರವರಿಗೆ ಮಾರಾಟ ಮಾಡಿರುತ್ತಾರೆ, ಸದರಿ ವಿಚಾರವು ದಿನಾಂಕ 29.03.2022 ರಂದು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ. ಸದರಿ ಕ್ರಯಪತ್ರವು ಕಾನೂನಿ ನನ್ವಯ ಅಸಿಂಧುವೂ ಮತ್ತು ನಾಮಾಕಾವಸ್ತೆ ಕ್ರಯಪತ್ರವಾಗಿದ್ದು 'ಎ' ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರನ್ನು ಯಾವುದೇ ರೀತಿಯಿಂದಲೂ ಬದ್ಧಪಡಿಸುವುದಿಲ್ಲ. ನಮ್ಮ ಕಕ್ಷಿದಾರರು ಸದರಿ ಕ್ರಯಪತ್ರದ ಕಾನೂನುಬದ್ಧತೆಯನ್ನು ಸಂಬಂಧಪಟ್ಟ ಸಿವಿಲ್ ನ್ಯಾಯಾಲಯದಲ್ಲಿ ಮತ್ತು 'ಎ' ಷೆಡ್ಯೂಲ್ ಸ್ವತ್ತಿನ ಖಾತೆಗೆ ಸಂಬಂಧಿಸಿದ ಪ್ರಕ್ರಿಯೆಯನ್ನು ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಲ್ಲಿ ಪ್ರಶ್ನಿಸುವ ಸಂಬಂಧ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತಾರೆ.

ವಸ್ತುಸ್ಥಿತಿ ಹೀಗಿರುವಲ್ಲಿ ನಮ್ಮ ಕಕ್ಷಿದಾರರ ಅತ್ತೆಯವರಾದ ಸದರಿ ಶ್ರೀಮತಿ ಸಾವಿತ್ರಮ್ಮನವರು 'ಬಿ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳಲ್ಲಿ ನಮ್ಮ ಕಕ್ಷಿದಾರರಿಗೆ ನಿಯಮಾನುಸಾರ ಬರಬೇಕಾದ ಭಾಗವನ್ನು ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ನಮ್ಮ ಕಕ್ಷಿದಾರರ ಗಮನಕ್ಕೆ ಬಾರದಂತೆ 'ಬಿ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳನ್ನೂ ಸಹ ಪರಭಾರೆ ಮಾಡುವ ತೀವ್ರ ಪ್ರಯತ್ನದಲ್ಲಿರುತ್ತಾರೆಂಬ ವಿಚಾರವು ದಿನಾಂಕ 29.03.2022 ರಂದು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುತ್ತದೆ.

ಆದ್ದರಿಂದ, ಮೇಲ್ಕಂಡ ಅಂಶಗಳ ಉಪಸ್ಥಿತಿಯಲ್ಲಿ ಸಾರ್ವಜನಿಕರ್ಯಾರೂ 'ಎ' ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಸದರಿ ಶ್ರೀಮತಿ ತುಳಸಿ.ಕೆ. ಕೋಂ ಬೇಟ್ ಬಿ. ವೆಂಕಟೇಶ್‌ರವರೊಂದಿಗಾಗಲೀ ಮತ್ತು 'ಬಿ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರ ಅತ್ತೆಯವರಾದ ಸದರಿ ಶ್ರೀಮತಿ ಸಾವಿತ್ರಮ್ಮನವರೊಂದಿಗಾಗಲೀ ಅಥವಾ ಬೇರೆ ಯಾರೊಂದಿಗೇ ಆಗಲೀ ಯಾವುದೇ ರೀತಿಯಿಂದಾಗಲೀ ವ್ಯವಹರಿಸಬಾರದೆಂದು, ಒಂದು ವೇಳೆ ವ್ಯವಹರಿಸಿದಲ್ಲಿ ಸದರಿ ವ್ಯವಹಾರದ ಸಂಬಂಧ ಮುಂದೆ ಉದ್ಭವಿಸುವ ಸಕಲ ರೀತಿಯ ನಷ್ಟ ಮತ್ತು ತೊಂದರೆಗಳಿಗೆ ಮೇಲ್ಕಂಡರೊಂದಿಗೆ ವ್ಯವಹರಿಸಿದ ದರೇ ಸಂಪೂರ್ಣವಾಗಿ ಜವಾಬ್ದಾರರಾಗುತ್ತಾರೆಂದು ಮತ್ತು ಸದರಿ ವ್ಯವಹಾರವು ಕಾನೂನಿನನ್ವಯ ಅಸಿಂಧುವಾಗುವುದಲ್ಲದೆ 'ಎ' ಯಿಂದ 'ಡಿ' ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಿಸಿದಂತೆ ನಮ್ಮ ಕಕ್ಷಿದಾರರನ್ನು ಯಾವುದೇ ರೀತಿಯಿಂದಲೂ ಬದ್ಧಪಡಿಸುವುದಿಲ್ಲವೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.

'ಎ' ಷೆಡ್ಯೂಲ್ : ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಪಿ.ಹೊಸಳ್ಳಿ / ಪಂಪಿನ ಹೊಸಳ್ಳಿಯಲ್ಲಿ ರುವ ಪೂರ್ವ–ಪಶ್ಚಿಮ 3.81 ಮೀಟರ್ ಮತ್ತು ದಕ್ಷಿಣೋತ್ತರ 8.22 ಮೀಟರ್, ಒಟ್ಟು 31.35 ಚದುರ ಮೀಟರ್ ವಿಸ್ತೀರ್ಣದಲ್ಲಿ ರುವ ಹೊಸಳ್ಳಿ ಗ್ರಾಮ ಪಂಚಾಯಿತಿ ನ್ಯಾಸ್ತಿಗೋಳಪಟ್ಟಿದ್ದ ಪಂಚಾಯಿತಿ ಸ್ವತ್ತಿನ ಸಂಖ್ಯೆ 152100700600100250 ಮತ್ತು ಮಂಗಳೂರು ಹೆಂಚಿನ ಮೇಲ್ಛಾವಣಿ ಹಾಗೂ ರೆಡ್ ಆಕ್ಸೈಡ್ ನೆಲಹಾಸುವುಳ್ಳ ನಂ. 112/ಬಿ ವುಳ್ಳ ವಾಸದ ಮನೆಗೆ ಚೆಕ್ಕುಬಂದಿ:– ಪೂರ್ವಕ್ಕೆ: ರಾಮೇಗೌಡರ ಮನೆ ; ಪಶ್ಚಿಮಕ್ಕೆ: ಬಿ.ವೆಂಕಟೇಶ್ ರವರ ಸ್ವತ್ತು ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ನಾಗರಾಜು ರವರ ಮನೆ.

'ಬಿ' ಷೆಡ್ಯೂಲ್ : ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಸಳ್ಳಿಯ, ಸರ್ವೆ ನಂ. 29/2 ರಲ್ಲಿನ 0.16 ಗುಂಟೆ ಜಮೀನು (ಎಂ.ಆರ್.ನಂ. 19/1983–84).

'ಸಿ' ಷೆಡ್ಯೂಲ್ : ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಸಳ್ಳಿಯ ಸರ್ವೆ ನಂ. 30/3 ರಲ್ಲಿನ 0.05 ಗುಂಟೆ ಜಮೀನು (ಎಂ.ಆರ್.ಟಿ.ನಂ. 2/2017/18).

'ಡಿ' ಷೆಡ್ಯೂಲ್: ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಬೆಳಗೊಳ ಹೋಬಳಿ, ಹೊಸಳ್ಳಿಯ ಸರ್ವೆ ನಂ. 31/3 ರಲ್ಲಿನ 0.05 ಗುಂಟೆ ಜಮೀನು (ಎಂ.ಆರ್.ಟಿ.ನಂ. 1/2017–18).

Sd/- M.C. Dileepkumar, B.Com., LL.B
Advocate KAR No. 2541 / 1999, Vijayashree Law Associates, No. K-8/1A, (Old No. 1207), 2nd Floor, Near KSS Pathashala, K.R. Mohalla, Mysore-570 024.

ಸ್ಥಳ: ಮೈಸೂರು
ದಿನಾಂಕ: 29.03.2022

ಮೈಸೂರು ವಿಶ್ವವಿದ್ಯಾನಿಲಯ

ಸಂಖ್ಯೆ:ಇಟಿ8/332/2021–22 ದಿನಾಂಕ: 28–03–2022

ಮೈಸೂರು ವಿಶ್ವವಿದ್ಯಾನಿಲಯದ ಯುಜಿಸಿ ಪ್ರಾಯೋಜಿತ ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಪೀಠದ ಪೂರ್ಣಕಾಲಿಕ ಪ್ರಾಧ್ಯಾಪಕ (Full-time Chair Professor) ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು ಹತ್ತು ಸೆಟ್‌ಗಳಲ್ಲಿ ನಿಗದಿತ ನಮೂನೆಯ ಅರ್ಜಿಗಳನ್ನು ಸಲ್ಲಿಸುವುದು.

ಹುದ್ದೆಯ ಪದನಾಮ	ಒಟ್ಟು ಹುದ್ದೆಗಳ ಸಂಖ್ಯೆ	ಮೀಸಲಾತಿ
ಪ್ರಾಧ್ಯಾಪಕ	01	Unreserved

ನಿಗದಿತ ಅರ್ಜಿ ನಮೂನೆಗಳು ಮತ್ತು ಸಂಬಂಧಿತ ಪ್ರಮಾಣಪತ್ರ ನಮೂನೆಗಳನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ ಪಡೆಯಬಹುದಾಗಿದೆ. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 12–04–2022.

ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uni-mysore.ac.in ಅನ್ನು ಸಂಪರ್ಕಿಸಬಹುದು.

ಆದೇಶದ ಮೇರೆಗೆ, ಸಹಿ/– ಕುಲಸಚಿವ

PUBLIC NOTICE

IN THE COURT OF THE IV ADDL. CIVIL JUDGE AND J.M.F.C AT MYSORE

H.R.C.No. 14/2019

Petitioner: Geetha Rao, Rep. By her GPA Holder Niranjan Rao, R/at Flat No. B-308, Mythri Apartments, Saraswathipuram, Mysuru- 570009.

V/S

Respondent : M/S Elegance, Wellness Pvt. Ltd. Rep. By its Directors 1. Mr. Anil Kumar, S/o. Dilbaj Singh, Aged about 33 years, 2. Miss. Sahila.P.S, D/o Saidu P.M, Aged about 30 years, Both No. 1 & 2 residing at # 20/5, 2nd Floor, 4th Cross Ganesh Block, R.T.Nagar, Bangalore-560 032

Conducting business at the rent premises bearing No. 203, Mythri Arcade, Kantharaj Urs Road, Saraswathipuram, Mysuru-09

Whereas H.R.C in No.14/2019 has been instituted by our client Smt. Geetha Rao against the Respodent mentioned above for eviction on the file of the learned IV Addl. Civil Judge and J.M.F.C.Court at Mysuru. And summons issued through paper publication for the appearance of the Respondent before the Court on 23-05-2022 at 11.00 A.M either in person or through his Advocate/s to answer the said petition.

Take notice that, in default of your appearance on the day before mentioned, the suit be heard and determined in your absence.

SCHEDULE

One part portion of commercial office/shop measuring 1485 Sqft. bearing No.203, Mythri Arcade, Kantharaj Urs Road, Saraswathipuram, Mysuru City-09 bounded on : East by : Kantharaj Urs Road, West by : Apartment North by : Common Area, South By : Shop No. 204

N.K.Somanna
Advocate for Petitioner,
35, Kuvempu Trust Building
Kalidasa Road, Jayalakshmipuram,
Mysuru-570012

BY ORDER OF THE COURT
CHIEF MINISTERIAL OFFICER
CIVIL JUDGE & JMFC COURT
MYSURU